ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

2015–16ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

"ಲಿಂಗದೇವರು ಹಳೆಮನೆಯವರ ನಾಟಕಗಳ ವಿಭಿನ್ನ ನೋಟಗಳು – ಒಂದು ಅಧ್ಯಯನ"

ನಿಬಂಧಕಾರರು
ನೋಂದಣಿ ಸಂಖ್ಯೆ : KVTM/K 150901030044
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

2015–16

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

2015–16ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

“ಲಿಂಗದೇವರು ಹಳೆಮನೆಯವರ ನಾಟಕಗಳ ವಿಭಿನ್ನ ನೋಟಗಳು – ಒಂದು ಅಧ್ಯಯನ”

ನಿಬಂಧಕಾರರು
ನೋಂದಣಿ ಸಂಖ್ಯೆ : KVTM/K 150901030044
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

2015–16

"ಲಿಂಗದೇವರು ಹಳೆಮನೆಯವರ ನಾಟಕಗಳ ವಿಭಿನ್ನ ನೋಟಗಳು – ಒಂದು ಅಧ್ಯಯನ"

ವಿಷಯಸೂಚಿ

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ಕಾವ್ಯೇಷು ನಾಟಕಂ ರಮ್ಯ' ಎಂಬ ಮಾತಿದೆ. ಸಾಹಿತ್ಯ ಪ್ರಕಾರಗಳಲ್ಲಿ ನಾಟಕಕ್ಕೆ ತನ್ನದೇ ಆದ ಸ್ಥಾನವಿದೆ. ಕತೆ, ಕಾದಂಬರಿ, ವಿಮರ್ಶೆ, ಮಹಾಕಾವ್ಯಗಳಷ್ಟೇ ಸತ್ವಪೂರ್ಣ ಸನ್ನಿವೇಶಗಳನ್ನು ನಾಟಕ ಸಾಹಿತ್ಯ ಕಟ್ಟಿಕೊಡುತ್ತದೆ. ಓದುವಲ್ಲಿಯೂ, ನೋಡುವಿಕೆಯಲ್ಲೂ ನಾಟಕದ ವಿಶಿಷ್ಟ ಬಂಧವಿದೆ. ಮನಸ್ಸಿಗೆ ಮುದ ನೀಡುವ ಈ ನಾಟಕ ಪ್ರಕಾರದಲ್ಲಿ ನಟನೆಯ ಜೊತೆಜೊತೆಗೆ, ನೃತ್ಯ, ಸಂಭಾಷಣೆಗೆ ಹೇರಳ ಅವಕಾಶವಿದೆ.

ಸನ್ನಿವೇಶ, ವಸ್ತುವಿಷಯ, ಪಾತ್ರಧಾರಿಗಳು, ಘಟನಾವಳಿಗಳು, ಸಂಗೀತ, ಹಿನ್ನೆಲೆ ಸಂಗೀತ, ವಿವರಣೆಗಳು, ಪಾತ್ರಕ್ಕೆ ತಕ್ಕ ಸನ್ನಿವೇಶ, ಸಂಭಾಷಣೆಗಳು ನಾಟಕವನ್ನು ಪರಿಪೂರ್ಣವನ್ನಾಗಿಸುತ್ತವೆ.

ಶೈಕ್ಷಣಿಕವಲಯದಲ್ಲಿ, ವಯಸ್ಕರ ಶಿಕ್ಷಣದಲ್ಲಿ, ಸಾಹಿತ್ಯ ವಿಮರ್ಶೆಯಲ್ಲಿ, ಅಂಕಣ ಸಾಹಿತ್ಯದಲ್ಲಿ, ವೈಚಾರಿಕ ಮನೋಭಾವದಲ್ಲಿ ಉತ್ತಮ ಸ್ಥಾನ ಪಡೆದಿರುವ ಲಿಂಗದೇವರು ಹಳೆಮನೆಯವರು ಯಾವುದೇ ವಿಷಯಗಳನ್ನು ಕುರಿತಂತೆ ಪ್ರಬುದ್ಧವಾಗಿ ಮಾತನಾಡ-ಬಲ್ಲವರು. ನಾಟಕಗಳ ರಚನೆಯಲ್ಲಿ ಸಂಸರಂತೆ, ಗಿರೀಶ್ ಕಾರ್ನಾಡ್‌ರಂತೆಯೇ ಹೆಸರು ಮಾಡಿರುವ ಲಿಂಗದೇವರುರವರು, ವಯಸ್ಕರ ಶಿಕ್ಷಣಕ್ಕಾಗಿ ಅವರು ರಚಿಸಿರುವ ಸಾಹಿತ್ಯ ತುಂಬಾ ಸರಳ ಹಾಗೂ ವಿಶಿಷ್ಟವಾದದ್ದು. ಬೀದಿನಾಟಕಗಳ ಮುಖಾಂತರ ಶಿಕ್ಷಣ ಕ್ರಾಂತಿಯನ್ನು ಸಾರಿದ್ದಲ್ಲದೇ ಆ ಮೂಲಕ ಸಮಕಾಲೀನ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುತ್ತಾ ಹೊಸ ಬಗೆಯ ಚಿಂತನೆಗೆ ಸಮಾಜ ತೆರೆದುಕೊಳ್ಳುವಂತೆ ಮಾಡುವಲ್ಲಿ ತುಂಬಾ ಶ್ರಮಿಸಿದ್ದಾರೆ. ಈ ಕಾರಣಕ್ಕಾಗಿ ನಾನು ಲಿಂಗದೇವರು ಹಳೆಮನೆಯವರ ನಾಟಕಗಳಾದ ಚಿಕ್ಕದೇವ ಭೂಪ, ಅಂತೆಂಬರ ಗಂಡ, ಶಾಪ ಮತ್ತು ಹೈದರ್ ಎಂಬ ನಾಟಕಗಳನ್ನು ಸಂಶೋಧನೆಗೆ ಆರಿಸಿಕೊಂಡು ಅಧ್ಯಯನ ನಡೆಸುತ್ತಿದ್ದೇನೆ. ಮೈಸೂರು ಸಂಸ್ಥಾನದ ಅದೆಷ್ಟೋ ಘಟನೆಗಳು, ಸಂಗತಿಗಳು ಬದಲಾಗಿರುವ ಸನ್ನಿವೇಶದಲ್ಲಿ ದಾಖಲಾಗಿರುವ ವಿಷಯಗಳನ್ನು ಆದರಿಸಿ ಆ ಮುಖೇನ ನಾಟಕಗಳ ಹಿನ್ನೆಲೆಯಲ್ಲಿ ಆ ಕಾಲಘಟ್ಟದ ಸಂದರ್ಭಗಳನ್ನು ಅರ್ಥೈಸಿಕೊಳ್ಳ-ಬಯಸಿದ್ದೇನೆ.

ಇಂದಿನ ಸ್ವಚ್ಛನಗರಿ, ನಿರ್ಮಲನಗರಿ, ಸುಂದರ ಮೈಸೂರು ನಗರ, ಎಂದು ಕರೆಸಿಕೊಳ್ಳುತ್ತಿರುವ ಈ ನಗರದ ಇಂದಿನ ಸ್ಥಿತಿಗತಿಯ ಹಿಂದೆ ನಡೆದಿರಬಹುದಾದ ತಂತ್ರಗಾರಿಕೆ, ಒಪ್ಪಂದ, ಒಳಒಪ್ಪಂದಗಳನ್ನು ಈ ನಿಬಂಧದಲ್ಲಿ ವಿಶ್ಲೇಷಿಸುತ್ತಿದ್ದೇನೆ. ಪ್ರಸ್ತುತ ಮೈಸೂರು ಸಂಸ್ಥಾನವು ಹಿಂದೆ ಸಾಗಿಬಂದಿರುವ ಸನ್ನಿವೇಶದಲ್ಲಿ ಎದುರಿಸಿರಬಹುದಾದ ತೊಂದರೆಗಳು, ರಕ್ತಧಾರೆಯ ಕತೆಗಳು, ಪ್ರಸ್ತುತ ನಿಯೋಜನ ಪ್ರಬಂಧದಲ್ಲಿ ಚರ್ಚಿಸಿರುತ್ತೇನೆ.

ಮೈಸೂರು ಸಂಸ್ಥಾನದ ಪ್ರಮುಖ ಘಟನೆಗಳನ್ನು ಅಂದಿನ ವೈಭವ, ಒಳಸಂಚುಗಳ ರಹಸ್ಯಗಳನ್ನು ಅಭ್ಯಸಿಸುತ್ತ ರಾಜರ ಆಳ್ವಿಕೆ, ಪ್ರಗತಿಪರ ಚಿಂತನೆ, ಪ್ರಜೆಗಳು, ರಾಜರ ನಡುವಿನ ಸಹಬಾಳ್ವೆ ನೀತಿಯ ಜೊತೆಗೆ ಅಂದಿನ ವೈಭವ, ತಂತ್ರ, ಕುತಂತ್ರಗಳನ್ನು ಈ ನಾಟಕಗಳ ಮುಖಾಂತರ ತಿಳಿಸಲೆತ್ನಿಸುತ್ತಿದ್ದೇನೆ.

ಹಳೆಮನೆ ಲಿಂಗದೇವರುರವರು ಅಂದಿನ ಸಾಮಾನ್ಯ ಜನರ ಪ್ರತಿಸ್ಪಂದನೆಯ ವಿವೇಚನೆ, ಸಾಮಾಜಿಕ, ಧಾರ್ಮಿಕ, ರಾಜಕೀಯ ಚಿಂತನೆಗಳು, ಅಸಮಾಧಾನ, 'ರಾಜ ಪ್ರತ್ಯಕ್ಷ ದೇವತಾ" ಎಂಬ ಜನರ ಮನಸ್ಥಿತಿ, ರೈತರು, ಸೈನಿಕರು, ಮಂಡಲಾಧಿಕಾರಿಗಳು, ಆಡಳಿತಾಧಿಕಾರಿಗಳ ಆಡಳಿತದ ವಿಕೇಂದ್ರೀಕರಣ, ಕಂದಾಯ ವ್ಯವಸ್ಥೆ, ಹೆಣ್ಣುಮಕ್ಕಳ ಜೊತೆಗಿನ ಒಡನಾಟ, ತಂತ್ರ–ಕುತಂತ್ರ–ಪ್ರತಿತಂತ್ರಗಳನ್ನು ಸೇರಿದಂತೆ ಹತ್ತು ಹಲವು ವಿಷಯಗಳನ್ನು ಅರಿಯುವ ಉದ್ದೇಶದಿಂದ ನಾನು ಹಳೆಮನೆ ಲಿಂಗದೇವರುರವರ ನಾಲ್ಕು ನಾಟಕಗಳಾದ ಚಿಕ್ಕದೇವಭೂಪ, ಅಂತೆಂಬರಗಂಡ, ಶಾಪ ಮತ್ತು ಹೈದರ್ ಎಂಬವುಗಳನ್ನು ಅಧ್ಯಯನಕ್ಕೆ ಆರಿಸಿಕೊಂಡು ಆ ಮೂಲಕ ಮೈಸೂರಿನ ಇತಿಹಾಸ ಕುರಿತ ಚಿಂತನೆಗಳನ್ನು ತಿಳಿಯಲು ಯತ್ನಿಸಲಾಗಿದೆ.

ಅಧ್ಯಾಯ – ೨

ನಾಟಕಗಳ ಹುಟ್ಟು ಮತ್ತು ಬೆಳವಣಿಗೆ

ನಾಟಕಗಳ ಪೂರ್ವ ಹಿನ್ನೆಲೆಯನ್ನು ಅರಿಯುವ ಸಲುವಾಗಿ ಈ ವಿಭಾಗದಲ್ಲಿ ನಾಟಕಗಳ ಕುರಿತಂತೆ ಪಾಶ್ಚಾತ್ಯ ವಿದ್ವಾಂಸರ ಹಾಗೂ ಭಾರತೀಯ ವಿದ್ವಾಂಸರ ಹೇಳಿಕೆಗಳನ್ನು ಈ ವಿಭಾಗದಲ್ಲಿ ದಾಖಲಿಸಿದ್ದೇನೆ. ಗ್ರೀಕ್‌ರ ಕಾಲದಲ್ಲಿ ಜಾತ್ರೆಯ ಸಂದರ್ಭದಲ್ಲಿ ಸುತ್ತುವರೆದ ಜನಗಳ ಮಧ್ಯೆ 'ಅಜಗೀತೆ' (ಡಿಥಿರಂಬೊಸ್)ಯ ಸಂದರ್ಭದಲ್ಲಿ ನಾಟಕಗಳ ಮೂಲವನ್ನು ಹುಡುಕಬಹುದಾಗಿವೆ. ಎತ್ತರವಾದ ಒಂದು ಅಟ್ಟಣಿಗೆಯ ಮೇಲೆ ಒಬ್ಬ ನಟ ಮತ್ತು ಗುಂಪುಮೇಳದ ಜನರ ನಡುವಿನ ಸಂಭಾಷಣೆಯಿಂದ ನಾಟಕಗಳ ಆರಂಭವನ್ನು ಗುರುತಿಸಬಹುದು. ಈಸ್ಕಿಲಸ್, ಸೊಫೊಕ್ಲಿಸ್ ಮುಂತಾದ ನಾಟಕಕಾರರು ಎರಡು ನಟರ, ಮೂವರು ನಟರುಗಳನ್ನು ನಾಟಕರಂಗಕ್ಕೆ ಪರಿಚಯಿಸಿದರು.

ಪ್ರಸ್ತುತ ರಂಗಭೂಮಿಯ ಮೇಲೆ ಅಧಿಕ ಸಂಖ್ಯೆಯ ನಟರುಗಳ ಜೊತೆಗೆ ಪ್ರಾಣಿ, ಪಕ್ಷಿಗಳ, ಮೋಟಾರು ವಾಹನಗಳ, ಆನೆ ಮುಂತಾದವುಗಳನ್ನು ವೇದಿಕೆಗೆ ತರುವ ಪ್ರಯತ್ನಗಳು ಯಶಸ್ವಿಯಾಗಿರುವುದನ್ನು ಕಾಣಬಹುದು. ಇತ್ತೀಚಿಗಿನ ದಿನಗಳಲ್ಲಿ ತಂತ್ರಜ್ಞಾನದ ಬೆಳವಣಿಗೆಯಿಂದ ವೇದಿಕೆಯಲ್ಲಿ ಹಿಂದೆ ಸೀನರಿಗಳು ಬರುವ ಬದಲಿಗೆ ಡಿಜಿಟಲ್ ತಂತ್ರಜ್ಞಾನ ಬಳಕೆಯಾಗುತ್ತಿದೆ.

ಕನ್ನಡದ ಮೊದಲ ನಾಟಕವೆಂದು ಬಸಪ್ಪಶಾಸ್ತ್ರಿಗಳ 'ಮಿತ್ರಾವಿಂದ ಗೋವಿಂದ'ವನ್ನು ಗುರುತಿಸಲಾಗಿದೆ. ಭರತನ 'ನಾಟ್ಯಶಾಸ್ತ್ರ'ದಲ್ಲಿ ಬರುವ ನಿಯಮಗಳನ್ನೇ ಕೊಂಚಮಟ್ಟಿಗೆ ನಾಟಕ ರಂಗಕ್ಕೂ ಅನ್ವಯಿಸಬಹುದಾಗಿದೆ.

ನಾಟಕಗಳಲ್ಲಿ ಹಲವು ವಿಧವನ್ನು ಗುರುತಿಸಬಹುದಾಗಿದೆ. ಪೌರಾಣಿಕ ನಾಟಕ, ಐತಿಹಾಸಿಕ ನಾಟಕ, ಸಾಮಾಜಿಕ ನಾಟಕ, ಏಕಾಂಕ ನಾಟಕ, ಬೀದಿನಾಟಕ, ವೃತ್ತಿಪರ ರಂಗಭೂಮಿಯವರು ಅಭಿನಯಿಸುವ ನಾಟಕಗಳು, ರುದ್ರಾಟಕ, ಹಾಸ್ಯನಾಟಕ, ಬೀದಿನಾಟಕ ಹಾಗೂ ಹವ್ಯಾಸಿ ರಂಗಭೂಮಿ ಕಲಾವಿದರು ಪ್ರದರ್ಶಿಸುವ ವೈಚಾರಿಕನೆಲೆಯುಳ್ಳ ನಾಟಕಗಳನ್ನು ಗುರುತಿಸಬಹುದಾಗಿವೆ.

ಒಬ್ಬ ನಾಟಕಕಾರನಿಗೆ ನಾಟಕ ರಚನೆಯ ಸಂದರ್ಭದಲ್ಲಿ ರಂಗವೇದಿಕೆಯ ಭೂಮಿಕೆಯನ್ನು ಗಮನದಲ್ಲಿಟ್ಟುಕೊಂಡೇ ನಾಟಕ ರಚನೆ ಮಾಡಬೇಕಾದ

ಅನಿವಾರ್ಯತೆಯ ಜೊತೆಗೆ ಆ ಪ್ರಜ್ಞೆಯ ಅವಶ್ಯಕತೆಯೂ ಇದೆ. ರಂಗವೇದಿಕೆಯ ಸಿದ್ಧತೆಯ ಪರಿಕರಗಳನ್ನು ವಿವರಿಸುತ್ತಾ ಪಾತ್ರಧಾರಿಗಳ ಭಾವವನ್ನು ವಿವರಿಸುತ್ತಾ ಕತೆ, ಸನ್ನಿವೇಶವನ್ನು ಮರೆಯದೇ ಸಂಪರ್ಕದಲ್ಲಿರಿಸಿ ಘಟನಾವಳಿಗಳು ಮುಂದುವರಿಯು-ವಂತೆ ಮಾಡುವ ಜವಾಬ್ದಾರಿ ಅತ್ಯದ್ಭುತ. ನಾಟಕ ಓದುವಿಕೆಯ ಜೊತೆಗೆ ರಂಗ ಕೃತಿಯಾಗಿ, ರಂಗಸಂವಿಧಾನವಾಗಿಯೂ ಯಶಸ್ವಿಯಾಗಿ ರೂಪುಗೊಳ್ಳುವಂತೆ ನೋಡಿಕೊಳ್ಳಬೇಕಿದೆ. ನಾಟಕಕಾರನಿಗೆ ಸಾಹಿತ್ಯ, ಸಂಗೀತ, ವಾದ್ಯಪರಿಕರಗಳ ವಿವೇಚನೆಯ ಜೊತೆಗೆ, ಪಾತ್ರಕ್ಕೆ ತಕ್ಕ ಸಂಭಾಷಣೆ ಸನ್ನಿವೇಶ, ವೇಷಭೂಷಣ, ರಂಗವೇದಿಕೆಯ ಸಂದರ್ಭಗಳ ಪರಿಕಲ್ಪನೆ, ಇರಲೇಬೇಕಾಗುತ್ತದೆ. ಪ್ರತಿಯೊಂದಕ್ಕೂ ಒಂದರಮೇಲೊಂದು ಅವಲಂಬಿತವಾಗಿ ಪೂರಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ನಾಟಕ ಯಶಸ್ವಿಯಾಗಲು ಸಾಧ್ಯವಾಗುತ್ತದೆ.

ಕನ್ನಡದಲ್ಲಿ ಸಂಸ, ಗಿರೀಶ್ ಕಾರ್ನಾಡ್, ಡಾ. ಚಂದ್ರಶೇಖರ ಕಂಬಾರ್, ಡಾ. ಲಿಂಗದೇವರು ಹಳೆಮನೆ, ಟಿ.ಪಿ.ಕೈಲಾಸಂ, ಮಾಸ್ತಿವೆಂಕಟೇಶ್ ಅಯ್ಯಂಗಾರ್ ಮುಂತಾದ ನಾಟಕಕಾರರನ್ನು ಗುರುತಿಸಬಹುದಾಗಿದೆ. ನಾಟಕಗಳನ್ನು ಪುನರುಜ್ಜೀವನ ಗೊಳಿಸಲು, ಸರ್ಕಾರದ ವತಿಯಿಂದಲೇ ರಂಗಭೂಮಿ ಕಲಾವಿದರಿಗೆ ವೇತನ, ಭತ್ಯೆ ನೀಡಲಾಗುತ್ತಿದ್ದು ಮುಂದಿನ ಪೀಳಿಗೆಗೆ ನಾಟಕ ಅಭಿನಯ ಕಲೆಯನ್ನು ಪರಿಚಯಿಸುವ ಉದ್ದೇಶದಿಂದ ರಂಗಾಯಣದಂಥ ರಂಗ ತರಬೇತಿ ಸಂಸ್ಥೆಗಳನ್ನು ಸರ್ಕಾರ ಪೋಷಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಐತಿಹಾಸಿಕ ನಾಟಕಗಳಲ್ಲಿ ಇತಿಹಾಸ ಪ್ರಸಿದ್ಧ ರಾಜ, ರಾಣಿ, ನಾಟಕ ಪ್ರತಿನಾಯಕರುಗಳನ್ನು ಕೇಂದ್ರವಾಗಿರಿಸಿ ರಚಿತಗೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಮಾಸ್ತಿಯವರ ಕಾಕನ ಕೋಟೆ, ಲಿಂಗದೇವರು ಹಳೆಮನೆಯವರ ಹೈದರ್, ಚಿಕದೇವ ಭೂಪ ಐತಿಹಾಸಿಕ ಸ್ವರೂಪ ಉಳ್ಳಂತಹ ನಾಟಕಗಳಾಗಿವೆ.

ಜನಪದ ಕೇಂದ್ರಿತ ವಸ್ತುವಾಗುಳ್ಳ ಜನಪದೀಯ ನಂಬಿಕೆಗಳನ್ನು ಕೇಂದ್ರ-ವಾಗಿಸಿಕೊಂಡು ಸಂಗ್ಯಾಬಾಳ್ಯ, ಸಿರಿಸಂಪಿಗೆ, ನಾಟಕಗಳು ರಚಿತವಾಗಿರುವುದನ್ನು ಗಮನಸಿಬಹುದು. ಸಾಮಾಜಿಕ ನಾಟಕಗಳಲ್ಲಿ ಜನಸಾಮಾನ್ಯರು, ರೈತಾಪಿ ವರ್ಗದವರುಗಳನ್ನು ಪ್ರೇಕ್ಷಕವರ್ಗವಾಗಿಸಿ ಸಾಮಾಜಿಕ ನಾಟಕಗಳು ರಚನೆಗೊಂಡವು.

ಸಮಾಜದ ಸ್ವಾಸ್ಥವನ್ನು ಕಾಪಾಡುವಲ್ಲಿ ವರದಕ್ಷಿಣೆ, ಬಾಲ್ಯವಿವಾಹದ ತೊಡುಕುಗಳು, ಸಾಮಾಜಿಕ ಪಿಡುಗುಗಳ ನಿವಾರಣೆಗೆ ಸಾಮಾಜಿಕ ನಾಟಕಗಳು ರಚಿತಗೊಂಡವು.

ಜನಪದೀಯ ನೆಲೆಯಲ್ಲಿನ ವಸ್ತುಗಳನ್ನು ಕಥಾವಸ್ತುವನ್ನಾಗಿಸಿ ಸಂಗ್ಯಾಬಾಳ್ಯ, ಹಯವದನ, ಸಿರಿಸಂಪಿಗೆ, ಕರಿಮಾಯಿ, ಚಾಮಚೆಲುವೆ ಮುಂತಾದವು ರೂಪು-ಗೊಂಡವು.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿ ಆರೋಗ್ಯ, ಶೈಕ್ಷಣಿಕ, ಸಾಮಾಜಿಕ ವೈಚಾರಿಕೆ ಪ್ರಜ್ಞೆಗಳನ್ನು ಜಾಗೃತಗೊಳಿಸಲು, ಸರ್ಕಾರದ ಸುಧಾರಣಾ-ಕ್ರಮಗಳನ್ನು ಪರಿಚಯಿಸಲು ಬೀದಿನಾಟಕಗಳು ಪ್ರಾರಂಭಗೊಂಡು ಇವು ರಂಗಭೂಮಿಯ ನಿರ್ದಿಷ್ಟ ಲಕ್ಷಣಗಳನ್ನು ಮೀರಿ ಪ್ರಚಾರಗೊಂಡವು. ಸಾಮಾಜಿಕ ಕಳಕಳಿ ಬೀದಿನಾಟಕದ ಉದ್ದೇಶವಾಗಿದ್ದು ರಂಗ ಪರಿಕರ, ವೇಷ, ಪ್ರಸಾಧನವೆಂಬ ನಿಯಮಗಳನ್ನು ಮೀರಿ, ಇದ್ದ ಸ್ಥಿತಿಯಲ್ಲೇ ವೃತ್ತ, ಬೀದಿಗಳೇ ಈ ಬೀದಿ ನಾಟಕಗಳ ಪ್ರದರ್ಶನ ವೇದಿಕೆಯಾಗಿದ್ದು ಅಭಿವ್ಯಕ್ತಿ ವೈಶಿಷ್ಟ್ಯಗಳಾಗಿವೆ. ಶ್ರೀ ಲಿಂಗದೇವರು ಹಳೆಮನೆಯವರು ವಯಸ್ಕ ಶಿಕ್ಷಣದ ಪ್ರಚಾರಕ್ಕಾಗಿ ಅನೇಕ ಬೀದಿನಾಟಕಗಳನ್ನು ರಚಿಸಿದ್ದಾರೆ.

ಸಣ್ಣ ಕತೆ ಉಗಮ

ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಸಾಹಿತ್ಯವು ಮನೋಹರವಾದದ್ದು. ಓದುವ ಸಂದರ್ಭದಲ್ಲಿಯೂ ಹಾಗೂ ನೋಡುವ ಸಂದರ್ಭದಲ್ಲಿಯೂ ನಾಟಕ ಸಂತಸವನ್ನು ನೀಡುತ್ತದೆ.

'ನಟ್' ಎಂಬ ಧಾತುವಿನಿಂದ 'ನಾಟಕ' ಪದ ಉಗಮವಾಯಿತೆಂದು ಹೇಳುತ್ತಾರೆ. ಪರಾಂಬರಿಸಿ ನೋಡುವುದಾದರೆ 'ನೃತ್ಯ'ದ ಪ್ರಾಕೃತ ರೂಪವೇ 'ನಟ್' ಆಗಿದೆ. ಕನ್ನಡದಲ್ಲಿಯೂ ನಾಟಕಕ್ಕೆ ಸಂಸ್ಕೃತದ ಪರಿಭಾಷೆಯನ್ನೇ ಬಳಸುತ್ತಿದ್ದಾರೆ.

ಈ ನಾಟಕದ ಪರಿಕಲ್ಪನೆ ಇತ್ತೀಚಿನದಲ್ಲ. ನಮ್ಮ ದೇಶದಲ್ಲಿ ನಾಟಕಕ್ಕೆ ಸುದೀರ್ಘ ಇತಿಹಾಸವಿರುವುದು ಕಂಡುಬಂದಿದೆ. ಐತಿಹಾಸಿಕ ದೃಷ್ಟಿಯಿಂದ ಇದಕ್ಕೆ ಋಗ್ವೇದದಲ್ಲಿ ಯಮ-ಯಮೀ ಸಂವಾದ ಮತ್ತು ಪುರೂರ ವಸ್ತು – ಊರ್ವಶೀ ಇವರ ಸಂವಾದಗಳೇ ಹಿಂದೂಸ್ಥಾನದೊಳಗಿನ ನಾಟಕ ಕಲ್ಪನೆಯ ಅಡಿಗಟ್ಟೆಂದು

ಪಾಶ್ಚಾತ್ಯರು ಅಭಿಪ್ರಾಯಪಟ್ಟಿದ್ದಾರೆ (ಲೇ: ಆತ್ಮರಾಮಶಾಸ್ತ್ರೀ, ನಾಟಕಕಲೆ, ೧೯೨೪ : ಪು. ೪೪). ಕ್ರಿ.ಪೂ. ೧೫೦ರ ಸುಮಾರಿನಲ್ಲಿ ರಚನೆಯಾದ ಪತಂಜಲಿಯ 'ಮಹಾಭಾಷ್ಯ'ದಲ್ಲಿ 'ಕಂಸವಧ' ಮುಂತಾದ ನಾಟಕಗಳ ಉಲ್ಲೇಖವಿದೆ

ಎರಡು ಸಾವಿರ ವರ್ಷಗಳ ಹಿಂದೆಯೇ ನಮ್ಮ ದೇಶದಲ್ಲಿ 'ನಾಟಕ' ಉಗಮಗೊಂಡಿತ್ತು ಎಂಬುದು ಇದರಿಂದ ಖಚಿತವಾಗುತ್ತದೆ. ನಾಟಕದ ಸ್ಪಷ್ಟತೆ ಪಾಣಿನಿಯ ಕಾಲಕ್ಕಾಗಲೇ ಒಂದು ನಿರ್ದಿಷ್ಟ ರೂಪವನ್ನು ಪಡೆದಿತ್ತು. ನಾಟಕದ ಕುರಿತಂತೆ ಭರತಮುನಿಯಿಂದ ರಚಿಸಲ್ಪಟ್ಟಿರುವ 'ಭರತನಾಟ್ಯ ಶಾಸ್ತ್ರ'ವು ಪೂರಕ ಅಂಶವನ್ನು ಒದಗಿಸಿದೆ. ಭರತನಾಟ್ಯಶಾಸ್ತ್ರದ ೨೧ನೇ ಅಧ್ಯಾಯದಲ್ಲಿ ಆಂಗಿಕ ಅಭಿನಯದ ಜೊತೆಗೆ ಯಾವ ಪಾತ್ರಗಳು ಹೇಗೆ ವೇಷಧರಿಸಿ ಸಿದ್ಧವಾಗಬೇಕೆಂಬ ವಿವರಣೆ ಕಂಡುಬರುತ್ತವೆ.

"ಕ್ರಿಸ್ತಪೂರ್ವದಲ್ಲೇ ಈಜಿಪ್ಟ್‌ನಲ್ಲಿ 'ಒಸ್ಯೆರಸ್' ದೇವತೆಯ ಉತ್ಸವದಲ್ಲಿ ನಡೆಸುತ್ತಿದ್ದ ಚಟುವಟಿಕೆಗಳೇ ನಾಟಕ ಕಲೆಗೆ ಮೂಲ ಎನ್ನುವ ಒಂದು ಹೇಳಿಕೆಯೂ ಇದೆ" (ಜ್ಞಾನ ಗಂಗೋತ್ರಿ : ೧೯೭೩, ಪು. ೩೨೬) ಮತ್ತೊಂದು ಅಭಿಪ್ರಾಯದ ಪ್ರಕಾರ ಗ್ರೀಕರ ಕಾಲದಲ್ಲಿ 'ಡಿಥಿರಂಬೋಸ್' (ಅಜಗೀತೆ) ಎಂಬ ಜಾತ್ರೆಯ ಸಂದರ್ಭದಲ್ಲಿ ಕಂಡುಬರುತ್ತಿದ್ದ ಅಜಗೀತೆಯೇ ನಾಟಕಗಳ ಆರಂಭಕ್ಕೆ ಕಾರಣವೆನ್ನಲಾಗಿದೆ. ಈಸ್ಕಿಲಸ್ ಸೋಫೊಕ್ಲೀಸ್, ಯೂರಿಪಿಡಿಸ್ ನಾಟಕದ ಆರಂಭಿಕ ಸಂದರ್ಭದಲ್ಲಿನ ಪ್ರಮುಖ ಹೆಸರುಗಳಾಗಿವೆ. ಒಂದು ಅಟ್ಟಣಿಗೆಯ ಮೇಲೆ ಒಬ್ಬ ನಟ ನಿಂತು ಅಕ್ಕಪಕ್ಕ ಗುಂಪಾಗಿ ನಿಂತ ಮೇಳದ ಜೊತೆಗೆ ಸಂಭಾಷಣೆ ನಡೆಸುತ್ತಾ ಇರುತ್ತಾನೆ. ನಾಟಕ ಮುಂದುವರಿಕೆಗೆ ಮೇಳ ಪ್ರಮುಖ ಪಾತ್ರ ವಹಿಸುವುದನ್ನು ಕಾಣಬಹುದು. ನಟನೊಡನೆ ಪಾತ್ರದ ಪ್ರತಿ ಸಂಭಾಷಣಾಕಾರರಾಗಿ, ಸಂತಾಪ ಸೂಚಿಸುತ್ತಲೇ ಸಂತಸಪಡುವಾಗ ಹೂಂಗೊಡುತ್ತಲೋ ನಾಟಕದ ಬೆಳವಣಿಗೆಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದವು. ಕಾಲಾನಂತರ ಇಬ್ಬರು ನಟರು, ತದನಂತರದಲ್ಲಿ ಮೂವರು ನಟರು ಇತ್ತೀಚಿನ ವರ್ಷಗಳಲ್ಲಿ ವೇದಿಕೆಯ ಮೇಲೆ ಲೆಕ್ಕವಿಲ್ಲದಷ್ಟು ನಟರು, ಸಂಗೀತಗಾರರು, ಜೀವಂತ ಪ್ರಾಣಿಗಳನ್ನೇ ರಂಗಭೂಮಿಯಲ್ಲಿ ಕಾಣಬಹುದು. ಇಂಥ ಹೆಗ್ಗಳಿಕೆಗೆ ಕಾರಣರಾದವರು ಗುಬ್ಬಿ ವೀರಣ್ಣ ಇವರ

ಕಂಪನಿಯಲ್ಲಿ ಅಸಂಖ್ಯಾತ ನಟರು, ಪ್ರಾಣಿಗಳನ್ನು ಬಳಸಿಕೊಂಡ ಹಿರಿಮೆಯನ್ನು ಗುರುತಿಸಬಹುದು.

'ಅಭಿನಯ' ಎಂಬುದು ಪರಕಾಯ ಪ್ರವೇಶವಿದ್ದಂತೆ. ಯಾವುದೇ ಪಾತ್ರಗಳನ್ನು ಅರಿತು, ಅದರಂತೆಯೇ ಅನುಸರಿಸಿ, ಆಂಗಿಕ ಭಂಗಿಯಲ್ಲಾಗಲೀ, ಭಾಷಿಕ ಸಂಭಾಷಣೆ ರೂಪದಲ್ಲಿ ಅಂತೆಯೇ ಆಗಿ ನಡೆಯುವುದನ್ನು ನಾಟಕ ಎನ್ನಬಹುದು.

"ಪಾಶ್ಚಾತ್ಯರಲ್ಲಿ "Drama" ಎಂಬ ಪದಕ್ಕೆ "Deed Action" (ಕ್ರಿಯೆ) ಎಂಬ ಅರ್ಥಗಳಿವೆ. ಮುಂದೆ ಅರ್ಥ ವಿಸ್ತಾರ ಹೊಂದಿ A representation by persons ಎಂಬಂತಾಯಿತು. ಅದಕ್ಕೂ ಮುಂದೆ "ವೇಷ ಬದಲಿಸಿದ ವ್ಯಕ್ತಿಗಳಿಂದ ನಡೆಯುವ ಕ್ರಿಯೆ" ಎಂಬಂತೆಯೂ ರೂಪಾಂತರ ಹೊಂದಿತು (Encyclopaedia of Religion and Ethics ; 1954, P. 867) ನಟರಿಂದ ನಡೆಯುವ ಕ್ರಿಯೆಗೆ ಸಂಬಂಧಿಸಿದಂತೆ ಬರೆಯುವ ಸಾಹಿತ್ಯವೇ 'ನಾಟಕ' ಎಂಬುದಾಗಿ ಪಾಶ್ಚಾತ್ಯರ ಅಭಿಪ್ರಾಯ (Encyclopaedia Americana, Vol. 9, 1969, ಪು. 333). ಹಿಂದೆ ಪುರಾಣದ ಕಲ್ಪನೆಗಳನ್ನು ತಿಳಿಸುವುದಕ್ಕೆ ಅಥೆನ್ಸ್‌ನಲ್ಲಿ ನಾಟಕ ಪ್ರದರ್ಶನಗೊಳ್ಳುತ್ತಿತ್ತು. "Drama" ಎಂಬುದು "Dran'ನಿಂದ ಬಂದುದು. ಅಂದರೆ `to do' (ಮಾಡು) ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು. Domenon ಎಂದರೆ 'the thing done' ಎಂಬರ್ಥ (Encyclopaedia Americana, Vol. 9, 1969, ಪು. 333). ದೃಶ್ಯರೂಪಕದಲ್ಲಿ ಬರುವ ನಾಟಕ ಪ್ರಕಾರವು "ನಟರ ಮೂಲಕ ಒಂದು ಕಥೆಯನ್ನು ಪೂರ್ತಿಯಾಗಿ ನಟಿಸಿ ತೋರಿಸುವುದೇ ನಾಟಕ" (The world Book Encyclopaedia, Vol. 4, P. 268) ಎಂದು ಕರೆಯಲ್ಪಟ್ಟಿದೆ.

ಕನ್ನಡದಲ್ಲಿ 'ನಾಟಕ' ಎಂಬ ಪದ ಬಳಕೆ ಕ್ರಿ.ಶ. ೯೯೩ರ ಕಾಲದಲ್ಲಿ ರಚಿತವಾಗಿರುವ ಅಜಿತಪುರಾಣದಲ್ಲಿ ಗುರುತಿಸಬಹುದು (ಕ.ಸಾ.ಪ.ಪ : ಕನ್ನಡ ನಾಟಕದ ಹಳಮ : ಎಂ.ಗೋವಿಂದ ಪೈ : ಪು. ೫೨), ಕವಿ ಗೋವಿಂದ ಪೈ ರವರು ಅಭಿಪ್ರಾಯಪಡುವಂತೆ ಕ್ರಿ.ಶ. ೯ನೇ ಶತಮಾನದಿಂದಲೇ ಕನ್ನಡ ನಾಟಕ ಸಾಹಿತ್ಯ ರಚನೆಯಾಗಿರಬೇಕೆಂದು ಊಹಿಸುತ್ತಾರೆ. ರಂ.ಶ್ರೀ. ಮುಗಳಿಯವರು "ಸಾವಿರಾರು ವರ್ಷಗಳ ಕರ್ನಾಟಕದ ಇತಿಹಾಸದಲ್ಲಿ ನೃತ್ಯ ನಾಟಕ ಪ್ರಧಾನವಾದ

ರಂಗಭೂಮಿಯಿತ್ತೆಂದು ತಿಳಿಯಲು ಆಧಾರಗಳಿರುತ್ತವೆ"(ಕ.ಸಾ.ಇ. ೧೯೬೩ : ಪು. ೧೯೧) ಎಂದಿದ್ದಾರೆ.

ದೊರಕಿರುವ ಕೃತಿಗಳ ಆಧಾರದ ಮೇಲೆ ಸಿಂಗಾರಾರ್ಯನ "ಮಿತ್ರಾವಿಂದ ಗೋವಿಂದ"ವೇ ಕನ್ನಡದ ಮೊದಲ ನಾಟಕವೆಂದು ಕರೆಯಬಹುದಾಗಿದೆ. ಕ್ರಿ.ಶ.೧೯೮೦ರಲ್ಲಿ ರಚಿತವಾಗಿರಬಹುದಾದ ಈ ನಾಟಕವು ಶ್ರೀ ಹರ್ಷನು ಸಂಸ್ಕೃತದಲ್ಲಿ ರಚಿಸಿರುವ 'ರತ್ನಾವಳಿ' ನಾಟಕದ ನೇರ ಅನುವಾದವಾಗಿದೆ. ನಾಟಕದಲ್ಲಿ ಹಳಗನ್ನಡ ಬಳಸಿ ರಚಿಸಿದ್ದಾರೆ. ಅನುವಾದ ಕೃತಿಯಾದರು ಕನ್ನಡದಲ್ಲಿ ಹೇಳುವ ಕವಿಯ ಜಾಣ್ಮೆ ಶ್ಲಾಘ್ಯವಾದುದು. ಈ ಕೃತಿಯಿಂದ ಮುಂದಿನ ಪೀಳಿಗೆಯ ಲೇಖಕರಿಗೆ ಭಾಷಾಂತರ, ರೂಪಾಂತರಗಳಿಗೆ ಮಾರ್ಗದರ್ಶಿಯಾಯಿತೆನ್ನಬಹುದಾಗಿದೆ. 'ರತ್ನಾವಳಿ' ನಾಟಕವನ್ನು ಬಸವಪ್ಪಶಾಸ್ತ್ರಿಗಳು ಅದೇ ಹೆಸರಿಟ್ಟು ಅನುವಾದಿಸಿದ್ದಾರೆ. ಬಸವಪ್ಪಶಾಸ್ತ್ರಿಗಳ ಕೃತಿ 'ಶಾಕುಂತಲ'ವು ಕೂಡ ಗಮನಾರ್ಹ. ಇದೂ ಕೂಡ ಸಂಸ್ಕೃತದ ಭಾಷಾಂತರ ಕೃತಿ.

ನಾಟಕ ಪ್ರಕಾರವು ದೃಶ್ಯ ಕಾವ್ಯವಾಗಿಯೂ, ಶ್ರವ್ಯ ಕಾವ್ಯವಾಗಿಯೂ ಬಳಕೆ ಉಂಟು. ಓದುತ್ತಾ ರಸಾನುಭೂತಿ ಉಂಟಾದಂತೆ, ನೋಡುವಿಕೆಯ ಮೂಲಕ ಮತ್ತಷ್ಟು ಕೃತಿ ಅರ್ಥವಾಗುತ್ತದೆ ಎನ್ನಬಹುದು. "ಗದ್ಯ ಅಥವಾ ಪದ್ಯದಲ್ಲಿ ನಟನೆ ಮತ್ತು ಮಾತುಗಳಿಂದ ರಂಗಸ್ಥಳದ ಮೇಲೆ ಪಾತ್ರಗಳನ್ನು ಪ್ರತಿನಿಧಿಸುತ್ತಾ ಕಥೆಯನ್ನು ಹೇಳುತ್ತಾ ಹೋಗುವ ಕಲೆ" ಎಂದು ಪಿ.ವಿ.ಶಾಸ್ತ್ರೀಯವರು (ಸಾಹಿತ್ಯ ಚರಿತ್ರೆ, ಪು. ೯೯)

ಅನುಕರಣ ಕಲೆಯಾದ ನಾಟಕದಲ್ಲಿ ಕಲೆ, ಭಾಷೆ, ಅಭಿನಯ, ನಿರ್ದೇಶನ ರಂಗ ಸಜ್ಜಿಕೆ, ಸಂಗೀತ, ಚಿತ್ರಕಲೆ, ನೃತ್ಯ ಇವೆಲ್ಲವುಗಳ ಸಮ್ಮಿಳನವೇ 'ನಾಟಕ'ವೆನಿಸಿಕೊಳ್ಳುತ್ತದೆ ಎನ್ನಬಹುದು. ನಾಟಕದ ಪ್ರಮುಖ ಲಕ್ಷಣವೆಂದರೆ ಸಂಭಾಷಣೆ. ಸಂಭಾಷಣೆಯಿಮದಲೇ ಸನ್ನಿವೇಶ, ಪಾತ್ರಪೋಷಣೆ, ರಸಾಭಿವ್ಯಕ್ತಿ ಆಗುತ್ತದೆ. ಅನೇಕ ನಾಟಕೀಯ ಅಂಶಗಳನ್ನು ಹಳಗನ್ನಡ ಕಾವ್ಯಗಳಲ್ಲಿ ಗುರುತಿಸಬಹುದಾಗಿದೆ. ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ರನ್ನನ 'ಗದಾಯುದ್ಧ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ನಾಟಕದ ಸ್ವರೂಪವನ್ನು ಕಾಣಬಹುದು.

ಹೀಗೆ 'ನಾಟಕ'ವೆಂಬುದು ಅನುಕರಣ ಕಲೆಯಾಗಿ, ರಂಗಭೂಮಿಗೆ ಬಂದಾಗ ರಂಗಕೃತಿಯಾಗಿ ಬಳಕೆಯಾಗುತ್ತಿದೆ. ನಾಟಕಗಳಲ್ಲಿ ಹಲವು ವಿಧ. ಐತಿಹಾಸಿಕ,

ಪೌರಾಣಿಕ, ಜನಪದೀಯ ಸಾಮಾಜಿಕ, ವೈಚಾರಿಕ, ಕಂಪನಿ, ವೃತ್ತಿಪರ ಹಾಗೂ ಬೀದಿನಾಟಕಗಳೆಂದು ಗುರುತಿಸಬಹುದು.

ನಾಟಕಗಳು ಸಾಹಿತ್ಯ ಕೃತಿಗಳ ಪ್ರತಿಪಾದಕತ್ವವಾಗುತ್ತಲೇ, ಸಮಕಾಲೀನ ಘಟನಾವಳಿಗೆ ಪರೋಕ್ಷವಾಗಿ ತಳಕು ಹಾಕಿಕೊಂಡಿರುವುದನ್ನು ಕಾಣಬಹುದು. ಗಾದೆ, ಹಾಸ್ಯ, ಲಾವಣಿ, ಭಜನೆ, ಒಗಟುಗಳನ್ನು ಅಲ್ಲಲ್ಲಿ ಅಳವಡಿಸಿಕೊಳ್ಳುತ್ತಾ ಸಂಗೀತ ಪ್ರಕಾರವನ್ನು ಸಮೀಕರಿಸಿ ನಾಟಕ ಮತ್ತಷ್ಟು ಆಕರ್ಷಣೀಯವಾಗುವಂತೆ ಮಾಡಲಾಗುತ್ತದೆ.

ಹವ್ಯಾಸಿ ಕಲಾವಿದರು ಇರುವ ಜಾಗದಲ್ಲೇ, ಇರುವಷ್ಟೇ ಪರಿಕರದಲ್ಲಿ, ಸರಳ ವೇಷಭೂಷಣ, ವೇದಿಕೆಯನ್ನೇ ಬಳಸಿಕೊಂಡು ಅಭಿನಯಿಸಿದರೆ, ವೃತ್ತಿರಂಗ ಭೂಮಿಯವರು ನೃತ್ಯ, ಹಾಸ್ಯ, ಇನ್ನೂ ಹಲವಾರು ತಂತ್ರಗಳ ಮುಖೇಣ, ದ್ವಂದ್ವಾರ್ಥ ಸಂಭಾಷಣೆ ಬಳಸಿಕೊಂಡು ಪ್ರೇಕ್ಷಕರನ್ನು ಆಕರ್ಷಿಸುತ್ತಾರೆ. ಬೀದಿನಾಟಕಗಳು ಸರ್ಕಾರದ ಯೋಜನೆ, ಸವಲತ್ತುಗಳನ್ನು ರೋಗರುಜಿನ ನಿವಾರಣೆಯ ಮಾರ್ಗೋಪಾಯಗಳನ್ನು ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮಗಳನ್ನು ಬೀದಿನಾಟಕ ಪ್ರಸ್ತುತಪಡಿಸುತ್ತವೆ. ನೈರ್ಮಲ್ಯ ಕುರಿತಂತೆ, ಶೈಕ್ಷಣಿಕ ಸುಧಾರಣೆ ಕುರಿತಂತೆ, ವೈಚಾರಿಕ ವಿಷಯಗಳ ಕುರಿತು, ಸಾಮಾಜಿಕ ಸುಧಾರಣೆಗಳನ್ನು ಕುರಿತಂತೆ ಬೀದಿ ನಾಟಕಗಳು ಮೂಡಿಬಂದಿವೆ.

ನಾಟಕಕಾರ ಲಿಂಗದೇವರು ಹಳೆಮನೆಯವರು ಕೂಡ ಅನೇಕ ಬೀದಿನಾಟಕ–ಗಳನ್ನು ಸಾಕ್ಷರತಾ ಗೀತೆಗಳನ್ನು ನೀಡಿದ್ದಾರೆ. ಮುದ್ದಣ್ಣ ಮನೋರಮೆಯರ ಸಂಭಾಷಣೆಯಿಂದ ಆಧುನಿಕ ಕನ್ನಡದ ನಾಟಕದ ಸ್ವರೂಪವನ್ನು ಗುರುತಿಸುತ್ತಲೇ ಚಂದ್ರಶೇಕರ ಕಂಬಾರ, ಸಂಸ, ಗಿರೀಶ್ ಕಾರ್ನಾಡ್, ಕುವೆಂಪು, ಟಿ.ಪಿ.ಕೈಲಾಸಂ, ಮಾಸ್ತಿ ಮುಂತಾದ ನಾಟಕಕಾರರನ್ನು ಈ ಸಂದರ್ಭದ್ಲಲಿ ನೆನಪಿಸಿಕೊಳ್ಳಲೇಬೇಕಾಗುತ್ತದೆ.

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ಆಗರವಾಗಿದ್ದು ಹತ್ತು ಹಲವಾರು ಪ್ರಕಾರಗಳನ್ನು ತನ್ನದೇ ಆದ ವಿಶಿಷ್ಟ ಪರಂಪರೆ – ಸ್ಪಷ್ಟರೂಪು ಸದೃಢವು ಆದುದಾಗಿದೆ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕತೆ, ಕಾದಂಬರಿ, ಸಂಗೀತ, ಕಾವ್ಯ, ಸೃಜನಶೀಲಸಾಹಿತ್ಯ, ನಾಟಕ, ಆತ್ಮಕತೆ, ಮುನ್ನುಡಿ, ವಿಮರ್ಶೆ, ಜಾನಪದ ಸಾಹಿತ್ಯ, ಹೀಗೆ ಸಾಹಿತ್ಯಲೋಕ ಸಮೃದ್ಧವೇ ಆಗಿದೆ.

ಕನ್ನಡ ಸಾಹಿತ್ಯ ಪ್ರಕಾರದಿ "ನಾಟಕ"ಗಳು ಕೂಡ ತನ್ನದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದೆ ಎಂಬಲ್ಲಿ ಎರಡು ಮಾತಿಲ್ಲ. ನಾಟಕವೆಂಬುದು ರಂಗವೇದಿಕೆಗೆ ಸೀಮಿತವಾದುದಾಗಿದ್ದು ಅಲ್ಲ. ಸಂಭಾಷಣೆ, ಸಂಗೀತ, ಹಾಡುಗಾರಿಕೆ, ಹಾಸ್ಯಚಟಾಕಿಗಳು, ಪಾತ್ರಧಾರಿಗಳು, ವಸ್ತು ವಿಷಯದ ಹಿನ್ನೆಲೆ, ತಾಂತ್ರಿಕ ನೆರವು ವಿದ್ಯುತ್ ಅಲಂಕಾರ, ಶಬ್ಧಮಾಧ್ಯಮದ ಉಪಕರಣಗಳು, ಧ್ವನಿಬೆಳಕಿನ ನೈಪುಣ್ಯತೆ ದೃಶ್ಯಾವಳಿಗಳು ಹೀಗೆ ವಿಷಯದ ಹಿನ್ನೆಲೆಯಲ್ಲೇ ಪಾತ್ರಧಾರಿಗಳ ಮನಃಸ್ಥಿತಿ ಪ್ರಸ್ತುತ ನಾಟಕದ ಆಶಯ ಸಂದರ್ಭ, ನಿಲುವು ಸಂಅಿದವನ್ನು ಕಿಂಚಿತ್ತೂ ಮಸುಕಾಗದಂತೆ ಸ್ತ್ರೀಪುರುಷ, ಇತರೆ ಎಲ್ಲಾ ಪಾತ್ರಧಾರಿಗಳು ಪ್ರಖರ ವೇದಿಕೆ ಜನಸ್ತೋಮದೆದುರು ರಂಗಭೂಮಿಯಲ್ಲಿ ಆ ಪಾತ್ರದಲ್ಲೇ ಲೀನವಾಗಿ ಪ್ರತಿಯೊಬ್ಬರ ಮನಮುಟ್ಟುವಂತೆ ಪ್ರದರ್ಶನ ನೀಡುತ್ತಾರೆ.

"ಭಾರತದಲ್ಲಿ ಮೂರು ರೀತಿಯ ರಂಗಭೂಮಿಗಳು ಪ್ರಚಲಿತದಲ್ಲಿವೆ.

೧) ಭಾರತೀಯ ರಂಗಭೂಮಿ – ಸಂಸ್ಕೃತ ರಂಗಭೂಮಿ ಪರಂಪರೆಯದು

೨) ಪಾಶ್ಚಾತ್ಯ ರಂಗಭೂಮಿ

೩) ಗ್ರಾಮೀಣ ರಂಗಭೂಮಿ (ಜಾನಪದ ರಂಗಭೂಮಿ)

ಭಾರತದಲ್ಲಿ ಈ ಮೂರು ರಂಗಭೂಮಿಗಳನ್ನು ಅತ್ಯಂತ ಸಶಕ್ತವಾಗಿ ಪ್ರದರ್ಶನಕ್ಕೆ ಅಳವಡಿಸಿದ ರಂಗನಿರ್ದೇಶಕರ ಪಾತ್ರ ಅವಿಸ್ಮರಣೀಯವಾಗಿದೆ. ಅವರಲ್ಲಿ ಮುಖ್ಯವಾದವರು

೧) ಭಾರತೀಯ ಪರಿಕಲ್ಪನೆಗೆ ಬಿ.ವಿ.ಕಾರಂತರು ಮಹತ್ವದ ಕೊಡುಗೆ ಕೊಟ್ಟು ಒಂದು ಸ್ಪಷ್ಟಸ್ವರೂಪ ನೀಡಿದ್ದಾರೆ.

೨) ಪಾಶ್ಚಾತ್ಯ "ಇಬ್ರಾಹಿಂ ಅಲ್ಕಾಜಿ" ಪಾಶ್ಚಾತ್ಯ ರಂಗಭೂಮಿಯನ್ನು ಜನಪ್ರಿಯಗೊಳಿಸುವಲ್ಲಿ ಹೆಚ್ಚು ಶ್ರಮಿಸಿರುತ್ತಾರೆ.

ಈ ಎರಡು ಪ್ರಧಾನಧಾರೆಗಳ ಮಧ್ಯೆ ಅಲಕ್ಷ್ಯಕ್ಕೆ ಈಡಾಗಬಹುದಾಗಿದ್ದ ಭಾರತದ ಜಾನಪದ (ಗ್ರಾಮೀಣ್ಯ ರಂಗಭೂಮಿ)ಗೆ ಮಹತ್ತರ ಕೊಡುಗೆ ನೀಡಿದವರು. 'ಹಬೀಬ್ ತನ್ವೀರ್' ರವರು ಉರ್ದು ಮತ್ತು ಹಿಂದಿಯಲ್ಲಿ ನಾಟಕಗಳನ್ನು ಬರೆದು ನಾಟಕಗಳನ್ನು

ನಿರ್ದೇಶಿಸಿ ಭಾರತೀಯ ಜಾನಪದ ಪ್ರದರ್ಶಕ ಕಲೆಗಳನ್ನು ಆಧುನಿಕ ರಂಗಭೂಮಿಗೆ ಅತ್ಯಂತ ಶಕ್ತವಾಗಿ ಕಸಿ ಮಾಡಿದರು.

ಹಬೀಬ್ ತನ್ವೀರ್‌ರವರು – ಅಪ್ಪಟ ದೇಸಿ ನಾಟಕಕಾರ ಮತ್ತು ರಂಗ ನಿರ್ದೇಶಕರು. ದೇಸೀ ರಂಗಭೂಮಿಯಲ್ಲಿ ಹಿಂದುಳಿದ ಬುಡಕಟ್ಟು ಜನಸಮುದಾಯದ ಮಧ್ಯೆ ಕೆಳವರ್ಗ, ಜನಸಮುದಾಯದ ಮಧ್ಯೆ ಕೆಲಸ ಮಾಡುತ್ತ ತಮ್ಮದೇ ಆದ ಗ್ರಾಮೀಣ ರಂಗಭೂಮಿಯ ಅವಿಷ್ಕಾರಿಸಿದರು. ೧೯೫೧ರಿಂದ ತಮ್ಮದೇ ರಂಗ–ಮಾಧ್ಯಮದಲ್ಲಿ ನಾಟಕ ಪ್ರದರ್ಶಿಸುತ್ತಾ ತಮ್ಮ ನಾಟಕದಲ್ಲಿ ಕಾವ್ಯಭಾಷೆ, ನಗರಭಾಷೆ, ಗ್ರಾಮೀಣಭಾಷೆಯನ್ನು ಬಳಸಿಕೊಂಡು ಅದ್ಭುತ ಪ್ರದರ್ಶನಗಳನ್ನು ನೀಡುತ್ತಾ ಇಡೀ ಹಳ್ಳಿಯ ಜನರನ್ನೇ ರಂಗಭೂಮಿಯ ಮೇಲೆ ತಂದಿದ್ದರು. ಹಿಂದೂಸ್ಥಾನಿ ಥಿಯೇಟರ್ ಸ್ಥಾಪಿಸಿ ವಿವಿಧ ಬುಡಕಟ್ಟುಗಳ ಸಂಸ್ಕೃತಿ ಮತ್ತು ಪ್ರದರ್ಶನ ಮಾಡಿದ್ದರು. (ಲಿಂಗದೇವರು ಹಳೆಮನೆಯವರ ಸಂವಾದ ೨೪೪/೪೫). ರಂಗಮಂಚದ ಹಿಂದೆ ಪರದೆ ಇರುವಂತೆ (ಜೀವನವೆಂಬ ನಾಟಕದ ಪರದೆಯೂ ಇದೆ) ಪ್ರೇಕ್ಷಕರಿಗೆ ನಾಟಕದ ಪರದೆಯ ಮುಂಭಾಗದಲ್ಲಿ ಇರುವ ಆಕರ್ಷಣೀಯವಾದ ದೃಶ್ಯ ಕಾಣಿಸುತ್ತದೆಯೇ ಹೊರತು ಪರದೆಯ ಹಿಂಭಾಗ ಕಾಣಿಸುವುದಿಲ್ಲ. ರಂಗಮಂಚದ ಮೇಲೆ ಮತ್ತೇ ಮತ್ತೇ ಅದೇ ನಾಟಕ ಪ್ರದರ್ಶನಗೊಳ್ಳಬಹುದು. ಪರದೆಯ ಹಿಂದೆ ಹೋದ ಕಲಾವಿದ ರಂಗಮಂಚದ ಮೇಲೆ ಮತ್ತೆ ಬಂದು ಅದೇ ಪಾತ್ರವನ್ನು ಅಭಿನಯಿಸಬಹುದು. ಆದರೆ ಒಂದೊಂದು ಪ್ರದರ್ಶನವೂ ವಿಭಿನ್ನ ವೈವಿಧ್ಯತೆಯಿಂದ ಪುನರಾವರ್ತನೆಗೊಳ್ಳುತ್ತದೆ. ವಿಷಯ ಅದೇ ಆದರೂ ಪಾತ್ರಧಾರಿಗಳು ದಿನದಿಂದ ದಿನಕ್ಕೆ ನುರಿತ ಕಲಾವಿದರು ತಮ್ಮ ಅನುಭವದಿಂದ ಪರಿಪಕ್ವಗೊಂಡು ಸಂಭಾಷಣೆಯು ಪೂರಕವಾಗಿರುವಮತೆ ಯಶಸ್ವಿಗೊಳ್ಳುವರು. ಕಲಾವಿದನಿಂದ ಪಾರದರ್ಶಕತೆ ಅನುಭವಿಗಳ ಸದನ ಅದಕ್ಕೆ ತನ್ನದೇ ಆದ ಘನತೆ, ಗೌರವ ಸ್ಥಾನಮಾನವಿದೆ. ಈ ನಿಟ್ಟಿನಲ್ಲಿ ನಿರ್ದೇಶಕರ ಕಲಾವಿದರು, ನಿರೂಪಕರ ವ್ಯವಸ್ಥೆ ಕಠಿಣ ಪ್ರಯತ್ನ ನಾಟಕದ ಸಂಪೂರ್ಣ ಯಶಸ್ಸಿಗೆ ಅರ್ಥಪೂರ್ಣ ದಿಕ್ಸೂಚಿ ಎಂದರೆ ತಪ್ಪಾಗಲಾರದು. ಭಾಷೆಯನ್ನು, ಶ್ರೀಮಂತ–ಗೊಳಿಸುವಲ್ಲಿ ಭಾಷೆ, ಜ್ಞಾನವು ಹರಡಲೂ ಹಾಗೇ ಯಥೇಚ್ಛವಾದ ಬಾಯಿಪಾಠ (ಕಂಠಪಾಠ)ದಿಂದ ಹೊರಹೊಮ್ಮುತ್ತದೆ. ಅವಿದ್ಯಾವಂತನಾದರೂ ತರ್ಕಬದ್ಧವಾಗಿ ಸಮಯ ಸಂದರ್ಭಕ್ಕೆ ತಕ್ಕಂತೆ ಭಾಷೆಯ ಬಳಕೆ ಧ್ವನಿಯ ಏರಿಳಿತ, ಭಾವನಾತ್ಮಕ

ಮುಖಚರ್ಯೆ ಎಂಥ ವಿದ್ಯಾವಂತನೂ ಕಣ್ಣರಳಿಸಿ ನೋಡುವ ಆಕರ್ಷಣೆ ಅದ್ಭುತಶಕ್ತಿ, ವಾಗ್ಝರಿ ನಮ್ಮ ನಾಟಕಗಳ ದೊಡ್ಡ ಗುಣ ಯಶಸ್ಸಿನ ಸಾಧನೆ ಪ್ರಗತಿಯ ಹೆದ್ದಾರಿಯನ್ನು ಕಂಡುಕೊಳ್ಳುವ ಒಳಗಣ್ಣು ಸಾಹಿತ್ಯಿಕ ಸಂವೇದನೆಗಳು, ಅಭಿವ್ಯಕ್ತಿಗೆ ಹತ್ತಿರವಾಗಿ ವ್ಯಂಗ್ಯ, ವಿಡಂಬನೆ, ಹಾಸ್ಯ ಕಟಕಿ, ಗಾಂಭೀರ್ಯ, ದುರಹಂಕಾರ ಪ್ರವೃತ್ತಿ, ವಿಶಿಷ್ಟ ಆಶಯದೊಂದಿಗೆ ಪ್ರದರ್ಶದಿಂದ ನಾಟಕಗಳು ಪ್ರಜ್ಞಾವಲಯವನ್ನು ವಿಸ್ತರಿಸುತ್ತಾ ಅತ್ಯಂತ ಆತ್ಮೀಯವಾಗಿ ವಿಷಯವನ್ನು ವಿವರಿಸುತ್ತದೆ.

ನಾಟಕವನ್ನು ಕಿವಿಯಿಂದ ಕೇಳಬಹುದಾದರೂ ಮೂಲತಃ ಗದ್ಯಪದ್ಯ ಕಿವಿಯ ವಿಷಯ; ನಾಟಕ ಕಣ್ಣಿನ ವಿಷಯ. ಈ ಅರ್ಥದಲ್ಲಿ ಅಭಿನಯ ಪ್ರಕಾರವಾದ ನಾಟಕ ಪ್ರೇಕ್ಷಕರ ಆಹಾರ. ಸಾಹಿತ್ಯ ಪ್ರಕಾರವಾದ ಗದ್ಯಪದ್ಯ ಶ್ರೋತೃಗಳ ಆಹಾರ. ಹೀಗಿದ್ದರೂ ಏಕಕಾಲಕ್ಕೆ ಕಣ್ಣು ಮತ್ತು ಕಿವಿಗಳಿಗೆ ವಿಷಯ ಸುಖವನ್ನುಂಟುಮಾಡುವ ಕಲಾಪ್ರಭೇದವೇ ನಾಟಕ.

ನಾಟಕ ಹಲವು ಕಲೆಗಳು ಸೇರಿದ ಅಪೂರ್ವ ರಮಣೀಯತೆಯನ್ನು ತಂದುಕೊಡುವ ಒಂದು ಕಲಾ ಪ್ರಕಾರ. ಇದೊಂದು ದೃಶ್ಯಕಾವ್ಯ. ನಾಟಕದಲ್ಲಿ ಕಾವ್ಯ, ನೃತ್ಯ, ಸಂಗೀತ, ಗಾಯನ, ಹಾಗೇ ಪ್ರದರ್ಶಿಸಲು ಚಿತ್ರಶಿಲ್ಪಿ ಮುಂತಾದ ಕುಶಲವಿದ್ಯೆಗಳ ಹೂರವಣವೇ ನಾಟಕ.

ಅಭಿನಯವು ನಾಟಕದಲ್ಲಿ ಬಹುಮುಖ್ಯವಾದದ್ದು. ಅಭಿನಯವು ಅಂಗಿಕ, ವಾಚಕ, ಆಹಾರ್ಯಕರ, ಸಾತ್ವಿಕ ಎಂಬ ೪ ವಿಧ ಕಂಡುಬಂದರೆ ಅಂಗಿಕಾಭಿನಯ ಶಾರೀರಿಕವಾಗಿದ್ದು ನಟನಾದವನಿಗೆ ತನ್ನ ಶರೀರರವೇ ಅಭಿನಯದ ಮೂಲ.

ವಾಚಕವೆಂದರೆ – ನಾಟಕದಲ್ಲಿ ನಟ ಭಾಷೆಯನ್ನು ಪ್ರಯೋಗಿಸುವ ರೀತಿ ಎನ್ನಬಹುದು.

ನಾಟಕ ಪ್ರದರ್ಶನಕ್ಕೆ ವೇಷಭೂಷಣ, ವಸ್ತ್ರವಿನ್ಯಾಸ, ಪರಿಕರಗಳು ಭಾವಗಳ ಪ್ರದರ್ಶನ ಭಾವನೆಗಳ ಅಭಿವ್ಯಕ್ತಿ ಆಧುನಿಕ ಕಾಲದಲ್ಲಿ ಕನ್ನಡ ನಾಟಕಗಳ ಪರಂಪರೆ ಕ್ರಿಯಾಶೀಲವಾಗಿ ಪ್ರಾರಂಭವಾದದ್ದು ವೃತ್ತಿನಾಟಕ ಕಂಪನಿಗಳಿಂದ ೧೮೮೦ ಶಾಂತಕವಿ ಗದುಗಿನಲ್ಲಿ "ಕರ್ನಾಟಕ ನಾಟಕ ಕಂಪನಿ" ಎಂಬ ಹೆಸರಿನಿಂದ ಆರಂಭವಾಗಿ ಅನೇಕ ವೃತ್ತಿನಿರತ ಕಂಪನಿಗಳು ಹುಟ್ಟಿಕೊಂಡವು. ಅವುಗಳಲ್ಲಿ ಗುಬ್ಬಿವೀರಣ್ಣ ಕಂಪನಿ ಉತ್ತಮ

ಪ್ರದರ್ಶಕಗುಣಗಳಿಂದ ನಾಟಕವು ಸಮೃದ್ಧವಾಗಿಯೇ ಬೆಳೆಯತೊಡಗಿ ಮೈಸೂರಿನ ಇತಿಹಾಸವನ್ನು ಕುರಿತು ನಾಟಕವನ್ನು ಬರೆದವರು. ಹಾಗೆ ಹೆಣ್ಣುಪಾತ್ರಗಳನ್ನು ಗಂಡಸರೇ ಮಾಡುತ್ತಿದ್ದರು.

ಪ್ರಯೋಗಗಳ ಮೂಲಕವೇ ನಾಟಕದ ಸಾರ್ಥಕತೆ ಎಂದವರು ಭರತಮುನಿ ನಾಟಕ ಎಂದರೆ ಪ್ರಯೋಗ ಪ್ರಧಾನ ಎಂದೇ ಅರ್ಥೈಸಲಾಗುತ್ತದೆ. ಹೀಗ ನಾಟಕಗಳು ತಂಡಗಳು ಹುಟ್ಟಿಕೊಂಡವು. ಇವಕ್ಕೆ ವಿಲಾಸಿ "ರಂಗಭೂಮಿ" ಎನ್ನುವರು.

ರಂಗಭೂಮಿ

ರಂಗಭೂಮಿಯ ವ್ಯಕ್ತಿರೂಪ ಸೂತ್ರದಾರ
ಸೂತ್ರಧಾರನ ವ್ಯಕ್ತಿರೂಪ ರಂಗಭೂಮಿ

ರಂಗಸಜ್ಜಿಕೆ, ನಟರ ಅಭಿನಯಗಳಿಂದ ಕಣ್ಣನ್ನು ತುಂಬುತ್ತ ಹಿಮ್ಮೇಳಗೀತೆ ನಟರ ಸಂಭಾಷಣೆಗಳಿಂದ ಕಿವಿಯನ್ನು ತುಂಬುತ್ತಾ ಕಾಲದೇಶ ಪರಿಸರಗಳಿಗೆ ತಕ್ಕಂತ ಈ ರಂಗಭೂಮಿಯನ್ನು ಅರಳಿಸುವವ ಸೂತ್ರಧಾರ.

ಕಾಲಗತಿಸಿದಂತೆ ನಾಟಕಕೃತಿ ವಿದ್ವಾಂಸರ ಕೈವಶವಾಗುವಲ್ಲಿ, ಸೂತ್ರಧಾರನ ಸೃಷ್ಟಿಯಾಗಿದ್ದ ರಂಗಭೂಮಿ ಈಗ ನಾಟಕಕಾರನ ಪ್ರಧಾನ ಮತ್ತು ಜಾನಪದ ರಂಗಭೂಮಿ ಎಂದು ೨ ಹೋಳಾಯಿತು. ಅನಿವಾರ್ಯವಾಗಿ ನಾಟಕಕೃತಿ ನಾಟ್ಯಗ್ರಹ ನಟರು ಮತ್ತು ಪ್ರೇಕ್ಷಕರು ಎಂಬಂತೆ ರಂಗಭೂಮಿ ೪ ಘಟಕಗಳಾಗಿ ಒಡೆಹೊಡೆದು ೨ ಹೋಳಾದವು. (ರೂಪರೂಪಗಳನು ದಾಟಿ ನಾಟಕ, ಡಾ. ಎಂ.ಎಂ.ಕಲಬುರ್ಗಿಯವರ ಜಾನಪದ ಪ್ರೇಕ್ಷಕರ ವರ್ಗ). ಹಾಗೆಯೇ ರಂಗಭೂಮಿ ನಾಗರೀಕ ರಂಗಭೂಮಿ (೧) ರಾಜಪೋಷಿತ (೨) ಪ್ರಜಾಪೋಷಿತ

ಕೇಳಿ ಸುಖಿಸುವ ಸಹೃದಯವನ್ನು ಶ್ರೋತೃವೆಂದು ಕರೆದ ಭಾರತೀಯ ಕಾವ್ಯ ಮೀಮಾಂಸಕರು, ನೋಡಿ ಸುಖಿಸುವ ಹೃದಯವನ್ನು ಪ್ರೇಕ್ಷಕ ಎಂದು ಕರೆದಿದ್ದಾರೆ. ಒಟ್ಟಾರೆ ನಾಟಕ ಭಿನ್ನಭಿನ್ನ ರುಚಿಯವರನ್ನು ರಂಜಿಸುವ ಒಂದು ಕಲಾಪ್ರಭೇದವಾಗಿದೆ. ಒಳ್ಳೆಯ ಪ್ರೇಕ್ಷಕನಿಗೆ ೩ ಕಣ್ಣುಗಳಿರಬೇಕು. ಹಾಗೇ ಒಂದು ಕಿವಿ ಸಾಕು ಎಂಬುದನ್ನು ಧ್ವನಿಸುತ್ತದೆ.

ಹಳೇಮನೆ ಹಿಂದುಳಿದ ವರ್ಗದಿಂದ, ಬಡಕುಟುಂಬದಿಂದ ೧೯೭೦ರ ದಶಕದಲ್ಲಿ ರಂಗಭೂಮಿ ಪ್ರವೇಶ ಮಾಡಿದವರು. ಸಾಮಾಜಿಕ ನ್ಯಾಯ ಕುರಿತು ಅನೇಕ ನಾಟಕಗಳನ್ನು ನಿರ್ದೇಶಿಸಿದವರು. ಕೆಲವು ಭದ್ರತೆಯೊಂದಿಗೆ ನಾಟಕಗಳನ್ನು ನಿರ್ದೇಶನ ಮಾಡಬೇಕೆಂಬ ಮನಃಸ್ಥಿತಿ ಹೊಂದಿದ್ದರು. ಮೊದಲಿಗೆ ಮಾರ್ಕ್ಸ್‌ವಾದಿ-ಯಾದ ಹಳೇಮನೆಯವರು ಸಮುದಾಯದ ಸಂಘಟನೆಗೆ ಹೆಚ್ಚು ಒಲವು ಕೋರಿ ಮೊದಲಿಗೆ ಶುರು ಆದದ್ದೇ "ಬೀದಿನಾಟಕ" ಬೆಲ್ಚಿ ಎಂಬ ಅದ್ಭುತವಾದ ನಾಟಕ ಬರೆದು ಕರ್ನಾಟಕಾದಾದ್ಯಂತ ಹೆಸರು ಮಾಡಿ ನಂತರ ಪ್ರೈಸೀನಿಯಂ ರಂಗಭೂಮಿಗೆ ಬಂದರು. ದಲಿತಸಮುದಾಯದ ಸಮಸ್ಯೆಗಳನ್ನು ರಂಗಭೂಮಿಯ ಮೇಲೆ ಅಷ್ಟೊಂದು ಪರಿಣಾಮಕಾರಿಯಾಗಿ "ಒಡಲಾಳ" ನಾಟಕದ ಮೂಲಕ ರಂಗದ ಮೇಲೆ ತಂದು "Created a history in Kannada theatre" ಕಣ್ಣೋ ಎಂಬ ಮಾತು ಅನುಭವಗಳ ಸಂಪತ್ತು ಕೆಳಜಾತಿಯವರ ಸಮಸ್ಯೆಯನ್ನು ಪ್ರತಿಬಿಂಬಿಸದೇ ಇರುವಷ್ಟು ಜನ, ಸಮಾಜವು ಜಡವಾಗಿ ಬಿಟ್ಟಿದೆ. ಈ ಥರದ ಪರಂಪರೆಯ ವಿರುದ್ಧ ಕೆಲಸಮಾಡಿ ಹೊಸ ಹೊಸ ಪ್ರತಿಭೆ ಅದು ಕೆಳಜಾತಿಯಿಂದ ಬಂದವರನ್ನು ಹುಡುಕಿ ಹೊರತೆಗೆದರು. ಕೆಳಜಾತಿ ಬಗ್ಗೆ ಏಕೆ ಈ ಕೀಳರಿಮೆ? ಇದನ್ನೇ ಅಂಬೇಡ್ಕರ್ "Seizure of Social Mobilities" ಎಂದಿದ್ದಾರೆ. ನಮ್ಮ ಜಾಗೃತ ಸಮಾಜದಲ್ಲಿ ಇದೊಂದು ದುರಂತ ಪರಂಪರೆ".

ಪೌರಾಣಿಕ ನಾಟಕ ರಂಗಗೀತೆಗಳು ಒಂದು ಕಾಲದ ರಂಗ ವೈಭವದ ಭಾಗವಾಗಿದ್ದವು. ನೋಡುಗರ ಮತ್ತು ಕೇಳುಗರ ಭಾವ ಶ್ರೀಮಂತಿಕೆಯನ್ನು ಅವು ಬಡಿದೆಬ್ಬಿಸುತ್ತಿದ್ದವು. ನಾಟಕಗಳು ಅಕ್ಷರಸ್ಥನಿರಲಿ ಅನಕ್ಷರಸ್ಥನಿರಲಿ, ನಗರದವರಿರಲಿ, ಹಳ್ಳಿಯವರಿರಲಿ ಈ ನಾಟಕದ ಸಂಭಾಷಣೆ, ಉಡುಗೆ, ತೊಡುಗೆ ನೋಡಲು, ಕೇಳಲು ಪ್ರೇಕ್ಷಕರು ಕಿಕ್ಕಿರಿಯುತ್ತಿದ್ದರು. ಬರಬರುತ್ತಾ ವೃತ್ತಿ ಕಂಪನಿಗಳು ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುವುದನ್ನು ನಿಲ್ಲಿಸಿವೆ. ಹಾಗೆ ಹಿಂದೆ ಇದ್ದ ವೃತ್ತಿನಿರತ ನಟರು ಪೌರಾಣಿಕ ನಾಟಕದ ಪಾತ್ರಗಳಿಗೆ ಹೊಂದುವಂತಹ ಶರೀರ ಮತ್ತು ಶಾರೀರಗಳನ್ನು ನಟರೇ ಹಾಡುವುದು ಅಭಿನಯಿಸುವುದು ಒಂದು ಭಾಗವಾಗಿತ್ತು.

ಗಾಯನ, ಅಭಿನಯ ಇವೆರಡೂ ನಟ, ನಟಿಯರ ವೃತ್ತಿ ಬದುಕಿನ ಅವಿಭಾಜ್ಯ ಅಂಗಗಳಾಗಿಯೇ ಇರುತ್ತಿದ್ದವು. ಇಂದು ಅದು ಕನಸಿನ ಮಾತಾಗೆ ಕಂಡುಬರುತ್ತದೆ.

ಇಂಥ ಪೌರಾಣಿಕ ನಾಟಕವನ್ನು ಪ್ರದರ್ಶಿಸುವುದು ಇಂದಿಗೆ ಯಮಸಾಹಸವೇ ಸರಿ. ಖರ್ಚು ಹೆಚ್ಚು ಪರಿಶ್ರಮಜಾಸ್ತಿ ಅಷ್ಟೆಲ್ಲಾ ರಿಸ್ಕ್ ತೆಗೆದುಕೊಂಡು ಮಾಡಿದರೂ ನೋಡುವ ಆಸಕ್ತಿ ಇರುವವರ್‍ಯಾರು? ಅಂದರೆ ಇವೆಲ್ಲ ಇತಿಹಾಸದ ಪುಟದಲ್ಲಿ ದಾಖಲೆಗಳಾಗಿ ಉಳಿಯುವಲ್ಲಿ ೨ ಮಾತಿಲ್ಲ.

ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವಾರು ಹಬ್ಬ-ಹರಿದಿನಗಳಲ್ಲಿ ವಾರ್ಷಿಕ ಒಂದೋ – ಎರಡೋ ಪೌರಾಣಿಕ ನಾಟಕವಾಗಿ ರಾಮಾಯಣ, ಮಹಾಭಾರತ, ಶನಿಪ್ರಭಾವ ಇವು ನಮ್ಮ ಹಳ್ಳಿಯ ಜನರಿಂದ ದೂರವಾಗಲೂ ಸಾಧ್ಯವಿಲ್ಲ. ಅಂದರೆ ಮುಖ್ಯವಾಗಿ ಯುವ ಜನಾಂಗದ ಅಭಿರುಚಿ ಬದಲಾಗಿದೆ. ಪೌರಾಣಿಕ ನಾಟಕವು ಫೀನಿಕ್ಸ್ ಪಕ್ಷಿಯ ಮಿಥ್ ಇದ್ದಂತೆ. ನಾಟಕಗಳ ಭಾವ ಶ್ರೀಮಂತಿಕೆ, ಬಂಧ ನುಡಿಗಟ್ಟು, ಅವುಗಳ ನಿರ್ವಹಣೆ ಇವೆಲ್ಲಾ ಸೇರಿ ಅವಕ್ಕೊಂದು ಸಾವಯವ ಸಮೃದ್ಧಿಯನ್ನು ಒದಗಿಸಿಕೊಟ್ಟಿವೆ. ಎಲ್ಲಾ ಆಧುನಿಕತೆ ನಡುವೆಯೂ ಹಾರ್ಮೋನಿಯಂ ಮನೆಗಳು ನುಡಿಯುತ್ತವೆ. ಪೌರಾಣಿಕ ರಂಗವೇದಿಕೆ ಕೊಡುವ ಅನುಭವ ಅಂಥದ್ದು, ಅನನ್ಯ ಅಪೂರ್ವ.

ಅಧ್ಯಾಯ – ೩

ನಾಟಕಕಾರರಾದ ಶ್ರೀ ಲಿಂಗದೇವರು ಹಳೆಮನೆಯವರ ಪರಿಚಯ

ನಾಡಿನ ಹೆಸರಾಂತ ರಂಗಸಂಸ್ಥೆ, ರಂಗಾಯಣದ ಹಿರಿಯ ನಾಟಕಕಾರ, ಭಾಷಾತಜ್ಞ ಲಿಂಗದೇವರು ಹಳೇಮನೆಯವರು ಆರಂಭದ ದಿನದಿಂದಲೂ ರಂಗಾಯಣದ ಜತೆ ನಿಕಟ ಸಂಪರ್ಕಹೊಂದಿದ್ದು, ಸದಸ್ಯರಾಗಿ, ಭಾರತೀಯ ರಂಗಶಿಕ್ಷಣ ಕೇಂದ್ರದ ಗೌರವ ಪ್ರಾಂಶುಪಾಲರಾಗಿ, ಬಹುರೂಪಿ ನಾಟಕಗಳು, ವಿಚಾರಸಂಕಿರಣಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಭಾಷಾ ವಿದ್ವಾಂಸರು.

ರಂಗಾಯಣದ ನಿರ್ದೇಶಕ ಹುದ್ದೆ, ಸಿ.ಐ.ಐ.ಎಲ್.ನಲ್ಲಿ ಸೇವೆ ಹಾಗೂ ಬೆಂಗಳೂರಿನ ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್‌ನ ಛೇರ್ಮನ್, ಕನ್ನಡ ಸಂಸ್ಕೃತಿ ಇಲಾಖೆ ರಂಗ ಸಮಾಜದ ಅಧ್ಯಕ್ಷರಾಗಿ ಸೇವೆಸಲ್ಲಿಸಿರುತ್ತಾರೆ.

"ಬಹುರೂಪಿ ಪ್ರತಿಭೆ ಲಿಂಗದೇವರು ಹಳೇಮನೆ" ವೃತ್ತಿಯಲ್ಲಿ ಮೇಷ್ಟ್ರು ಹಾಗೂ ಸಂಶೋಧಕರು. ಇವರ ವ್ಯಕ್ತಿತ್ವಕ್ಕೆ "ಇದಮಿತ್ಥಂ" ಎಂದು ಚೌಕಟ್ಟು ಕೂರಿಸುವುದು ಕಷ್ಟಕರ. ಸಾಹಿತ್ಯ, ವಿಮರ್ಶೆ, ವಯಸ್ಕರ ಶಿಕ್ಷಣ ಹಾಗೂ ಅಂಕಣ ಸಾಹಿತ್ಯಕ್ಷೇತ್ರಗಳಲ್ಲಿ ಇವರ ಸೇವೆ ಅಪಾರ. ಬ್ರೆಕ್ಟ್‌ನ ಮಹತ್ವದ ನಾಟಕಗಳನ್ನು ಕನ್ನಡೀಕರಿಸಿದ್ದು ಅನುವಾದದಲ್ಲೂ ಇವರದು ಎತ್ತಿದ ಕೈ ಎಂದರೆ ತಪ್ಪಾಗಲಾರದು.

ಇದೆಲ್ಲಾ ಮೀರಿ ಭಾಷಾಶಾಸ್ತ್ರದ ದೃಷ್ಟಿಯಿಂದ ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಅನೇಕ ಸವಾಲುಗಳು ಎದುರಾಗಿ, ಬುಡಕಟ್ಟು ಭಾಷೆಗಳ ಪಾಡಂತೂ ಮತ್ತೂ ಶೋಚನೀಯ. ಈ ಹಿನ್ನೆಲೆಯಲ್ಲಿ "ಭಾಷೆಯ ಸ್ಥಿತ್ಯಂತರಗಳನ್ನು ಗುರ್ತಿಸುವುದು. ಭಾಷೆಗೆ ವ್ಯಾಕರಣವನ್ನು ರೂಪಿಸುವುದು" ಈ ಮೂಲಕ ಭಾಷೆಯನ್ನು ಜೀವಂತವಾಗಿರಿಸಲು ತೊಡಗಿಸಿಕೊಂಡು ಸವಾಲಿನ ಪ್ರಕ್ರಿಯೆಗಳನ್ನು ಮಾಡಿತೋರಿಸಿದ ಮಹಾನ್ ಚಿಂತಕ.

ಇವರಿಂದ ಕನ್ನಡ ಕಲಿತ ಅನೇಕರು ಕನ್ನಡೇತರರು ತಾವು ಕಲಿತದ್ದನ್ನು ಇತರರಿಗೆ ಕಲಿಸುವ ಕಾಯಕದಲ್ಲಿ ವಿಶ್ವಾದ್ಯಂತ ನಿರತರಾಗಿದ್ದಾರೆ.

ಲಿಂಗದೇವರು ಅವರು ಭಾಷೆಯಿಂದ ಭಾವೈಕ್ಯತೆಗೆ ಸಹಕಾರಿಯಾದವರು. ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ಮಕ್ಕಳಿಗಾಗಿ ಇಂಗ್ಲಿಷಿನ ಮೂಲಕವೇ ಕನ್ನಡ ಕಲಿಯಲು ಇವರು ರಚಿಸಿರುವ "ಎ ಸೆಲ್ಫ್ ಇನ್‌ಸ್ಟ್ರಕ್ಷನಲ್ ಕೋರ್ಸ್ ಇನ್ ಕನ್ನಡ" ಹಾಗೂ "ಆ್ಯನ್ ಇಂಟೆನ್ಸಿವ್ ಕೋರ್ಸ್ ಇನ್ ಕನ್ನಡ" ಪುಸ್ತಕಗಳು ಜನಪ್ರಿಯ ಪುಸ್ತಕವಾಗಿದ್ದು ಕನ್ನಡ ಬೆಳವಣಿಗೆಗೆ ಉಪಯುಕ್ತವಾಗಿವೆ.

ಜನನ : ೬-೩-೧೯೪೪

ಶಿಕ್ಷಣ : ಭಾಷಾಶಾಸ್ತ್ರದಲ್ಲಿ ಅಣ್ಣಾಮಲೈ ವಿ.ವಿ.ಯಿಂದ ಸ್ನಾತಕೋತ್ತರ ಪದವಿ.

ಮೈಸೂರು ವಿ.ವಿ. - ಎಂ.ಎ. ಕನ್ನಡ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್, ೪ ಚಿನ್ನದ ಪದಕ, ೨ ನಗದು ಬಹುಮಾನವನ್ನು ಶಿಕ್ಷಣ ಕ್ಷೇತ್ರದಲ್ಲಿ ಪಡೆದಿದ್ದಾರೆ.

ಮಲೇಷಿಯಾ, ಸಿಂಗಪೂರ್, ಜರ್ಮನಿ, ಶ್ರೀಲಂಕಾ ಮುಂತಾದ ದೇಶ ವಿದೇಶಗಳನ್ನು ಸುತ್ತಿರುತ್ತಾರೆ.

ರಂಗಭೂಮಿ ಉಳಿಯಬೇಕು-ಬೆಳೆಯಬೇಕು ಎಂಬ ಆಸೆ ಹಳೆಮನೆ ಲಿಂಗದೇವರು ಅವರದು. ರಂಗಭೂಮಿಯ ಮುಖ್ಯ ಪ್ರೇರಕ ಶಕ್ತಿಯಾಗಿ ಬೆಳೆದು ನಿಂತವರು. ಇವರಿಗೆ ಅಂತರಂಗ, ಬಹಿರಂಗ, ಸಮೀಪದೂರ ಇವೆಲ್ಲವನ್ನು ಒಂದೇ ಅಭಿಪ್ರಾಯ ಮೂಡಿಸುವಂತಹ ವ್ಯಕ್ತಿತ್ವ ಅವರದು.

ಕಿಂಚಿತ್ತೂ ಗತ್ತಿಲ್ಲದ, ಸ್ನೇಹಮಯಿ, ಮೃದುಮಾತು, ಉತ್ತಮ ವಿದ್ಯಾರ್ಥಿ ಸ್ನೇಹಿತರನ್ನು ಹೊಂದಿ ಮೈಸೂರಿನ ಹವ್ಯಾಸಿ ರಂಗಭೂಮಿಗೆ ಚಿರಪರಿಚಿತರಾಗಿ ರಂಗನಿರ್ದೇಶಕರಾಗಿ ಬರವಣಿಗೆಯತ್ತ ಅವರ ಒಲವು ಹೆಚ್ಚಾಗಿ ಹಾಗೇ ನಿರ್ದೇಶನದತ್ತ ಸ್ವತಂತ್ರ ನಾಟಕಗಳನ್ನು ಬರೆದಿದ್ದಾರೆ. ಬೇರೆ ಬೇರೆ ಭಾಷೆಗಳಿಂದ ನಾಟಕಗಳನ್ನು ಅನುವಾದಿಸಿ, ಅತ್ಯುತ್ತಮ ರಂಗಗೀತೆಗಳನ್ನು ರಚಿಸಿದ್ದಾರೆ. ನಾಟಕ ತಂಡ, ಸದಸ್ಯರನ್ನು ಪ್ರೋತ್ಸಾಹಿಸಿ ಹೆಗ್ಗಳಿಕೆಯನ್ನು ಪಡೆದಿದ್ದಾರೆ. ಹಳೆಮನೆ ಲಿಂಗದೇವರು ಅತ್ಯಂತ ಸಂವೇದನಾಶೀಲರು, ಆಳವಾದ ಅಧ್ಯಯನ ಮಾಡಿದವರು. ಹಾಗೆಯೇ ರಂಗಸಿದ್ಧಾಂತ ಮತ್ತು ರಂಗಭೂಮಿಯ ವಿವಿಧ ಆಯಾಮಗಳ ಬಗ್ಗೆಯೂ ಅನೇಕ ಪ್ರದರ್ಶನ ಪಾತ್ರಕ್ಕೆ ಬೇಕಾದ ಅಭಿನಯದ ಅನ್ವೇಷಣೆ ಕಲಾವಿದರಲ್ಲಿ ಆತ್ಮವಿಶ್ವಾಸ ಮೂಡಿಸಿ ರಂಗಭೂಮಿ ಉಳಿಯಲು ಕಾರಣವಾಗಿದ್ದಾರೆ.

ರಂಗಭೂಮಿಯ ಸೇವೆಯನ್ನು ಪರಿಗಣಿಸಿ ಕರ್ನಾಟಕ ನಾಟಕ ಅಕಾಡೆಮಿ ಅವರಿಗೆ ಹಲವಾರು ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ತಮ್ಮ ಉಪನ್ಯಾಸಕ ಹುದ್ದೆಯ ಮಧ್ಯೆಯೂ ಔಪಚಾರಿಕ ಶಿಕ್ಷಣವನ್ನು ಬದಿಗೊತ್ತಿ ರಂಗಶಿಕ್ಷಣಕ್ಕೆ ಭದ್ರಬುನಾದಿಗೆ ಮುಂದಾಗುತ್ತಾರೆ. ಅನಕ್ಷರತೆ ವಿರುದ್ಧ ನಿರಂತರ ಸತತ ಹೋರಾಟದಿಂದ ಪೂರಕವಾಗಿ ಅನಕ್ಷರಸ್ಥನ ಬಾಯಿಂದ ಅದೆಷ್ಟು ಸರಾಗವಾಗಿ ಸ್ಪಷ್ಟವಾಗಿ ಭಾಷೆಯಲ್ಲಿ ಸಮತೋಲನ ಕಾಪಾಡಿ ಕಲಾವಿದರಲ್ಲಿ ಆತ್ಮವಿಶ್ವಾಸತಂದವರು.

ವಾಸ್ತವದಲ್ಲಿ ನಾಟಕದ ಭಾಷೆ ಬಗ್ಗೆ ತುಂಬಾ ಸೊರಗಿದೆ ಎನ್ನುವ ಅವರು ಬರೆಯುವ ಪ್ರತಿನಾಟಕದಲ್ಲೂ ಹೊಸಭಾಷೆಗ ತಡಕಾಡುತ್ತಿದ್ದರು. ಹಾಗೆ ತನ್ನ ಪರಿಸರದ ಭಾಷೆಯನ್ನೆ ಹಿಡಿದು, ಅದರಲ್ಲೇ ಹೊಸಶಕ್ತಿಯನ್ನು ಹೊರಡಿಸಲು ಯತ್ನಿಸುತ್ತಿದ್ದರು.

ಸಾಂಪ್ರದಾಯಿಕ ನಾಟಕಕ್ಕೂ, ಶ್ರೀಮಂತರು ರಾಜಪ್ರಭುತ್ವದ ನಾಟಕಕ್ಕೂ ವ್ಯತ್ಯಾಸವಿದೆ. ಇಲ್ಲಿ ರಾಜರು ಶ್ರೀಮಂತಿಕೆ ಭೋಗ ಲಾಲಸೆಗಳಲ್ಲಿ ಮೆರೆದು ಮೈಮರೆತರೆ ಅಲ್ಲಿ ಸೈನಿಕ, ರೈತ, ಚಾಲಾಕಿಗಳೇ ಹೀರೋಗಳು ಅಂದಿನ ಉದ್ದೇಶ ಸಮಕಾಲೀನ ಸಮಾಜದಲ್ಲಿ ಇರುವ ಸಾಮಾಜಿಕ ರಾಜಕೀಯ ಸ್ವರೂಪವನ್ನು ತಿಳಿಸಿ ಹೇಳುವುದರ ಜೊತೆಗೆ ಸಾಮಾನ್ಯ ಮನುಷ್ಯರ ವಿರುದ್ಧ ನಡೆಯುವ ಅನ್ಯಾಯವನ್ನು ಪ್ರೇಕ್ಷಕರಿಗೆ ಅರ್ಥವಾಗುವಂತೆ ತಿಳಿಹೇಳುವುದು ಹಾಗೆ ಅವರಿಗೆ ವಂಶಪಾರಂಪಾರಿಕ ತಂತ್ರಗಳು, ಮೌಲ್ಯಗಳು ಒಂದೆಡೆಯಾದರೆ ರಾಜರ ರಸಿಕತನ, ಸೌಂದರ್ಯಪ್ರಜ್ಞೆಯ ಆಯ್ಕೆಯನ್ನು ಸೂಚಿಸುತ್ತದೆ. ಹಾಗೆಯೇ ರಾಜಕೀಯ ನಿಲುವನ್ನು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸುವುದಕ್ಕೆ ಈ ನಾಟಕಗಳ ಗುಚ್ಛ, ನಿಲುವುಗಳು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸುತ್ತವೆ. ರಂಗಭೂಮಿಯನ್ನು ರಾಜರ ಆಡಳಿತ ಹಾಗೂ ಜನಸಾಮಾನ್ಯರೊಡನೆ ಸಮನ್ವಯಿಸಿ ಅದರ ಬಲಾಬಲಗಳನ್ನು ಉತ್ತಮವಾಗಿ ದುಡಿಸಿಕೊಂಡಿರುವುದು ಆ ಪಾತ್ರಗಳಿಗೆ ತೋರುವ ಗೌರವವೂ ಆಗಿದೆ.

ಸಂದ ಗೌರವ, ಸೇವೆ ಸಲ್ಲಿಸಿದ ಹುದ್ದೆ

೧೯೯೭ರಲ್ಲಿ – ರಂಗಭೂಮಿ ನಾಟಕಕ್ಷೇತ್ರಗಳ ಸಾಧನೆಯನ್ನು ಗುರ್ತಿಸಿ "ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ"

೧೯೮೭ರಿಂದ ೧೯೯೧ ಸ್ಟೇಟ್ ರಿಸೋರ್ಸ್‌ಸೆಂಟರ್, ಮೈಸೂರು ನಿರ್ದೇಶಕರಾಗಿ

೧೯೯೧ ರಿಂದ ಭಾರತ ಸರ್ಕಾರದ ರಾಷ್ಟ್ರೀಯ ಸಾಕ್ಷರತಾ ಆಂದೋಲನದ ಕನ್ಸಲ್ಟೆಂಟ್

೧೯೯೫-೧೯೯೮ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ ಸೇವೆ

೨೦೦೦ ರಂಗಸಮಾಜದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರಿನ ರಂಗಚಟುವಟಿಕೆಗಳ ಒಕ್ಕೂಟ ಸಮುದಾಯದ ಸ್ಥಾಪಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಪ್ರಕಟಿತ ನಾಟಕಗಳು

೧) ಚಿಕ್ಕದೇವಭೂಪ (೧೯೮೨)

೨) ಹೈದರ್ (೧೯೮೭)

೩) ಅಂತೆಂಬರ ಗಂಡ (೧೯೯೫)

೪) ತಷ್ಕರ (೧೯೯೬)

೫) ಶಾಪ (೨೦೦೦)

ಇತರ ಕೃತಿಗಳು

೧) ಮಾತುಕತೆ, ಭಾಷೆ, ಪ್ರಸ್ತುತ ಅಂಕಣ ಬರಹಗಳು

೨) ಶ್ರೀ ಎಂ.ವಿಶ್ವೇಶ್ವರಯ್ಯ (ಎನ್.ಬಿ.ಟಿ.) ಸಾಮಾಜಿಕ – ಆರ್ಥಿಕ ಶೈಕ್ಷಣಿಕ ಉದ್ದೇಶದ ೧೨ ಬೀದಿ ನಾಟಕಗಳ ಪ್ರಕಟಣೆ

೩) ಸಾಹಿತ್ಯ, ಭಾಷಾಶಾಸ್ತ್ರ, ರಂಗಭೂಮಿ ನಾಟಕ ಇತ್ಯಾದಿ ವಿಷಯಗಳ ಬಗ್ಗೆ ಅನೇಕ ಸಂಶೋಧನಾ ಬರಹಗಳು

೪) ೨೦೦೩ರಿಂದ ೨೦೦೪ರಲ್ಲಿ ೫೧ ಲೇಖನಗಳನ್ನು ಐತಿಹಾಸಿಕ ಮಹತ್ವ ಮತ್ತು ದಾಖಲಾತಿಯ ಗುಣಗಳಿಂದ ಕೂಡಿದ ಲೇಖನಗಳನ್ನು ಪ್ರಕಟಿಸಿದ್ದಾರೆ.

ಹಳೇಮನೆ – ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಸಂಸ್ಕೃತಿ – ಉಪಸಂಸ್ಕೃತಿಯ ಬಗ್ಗೆ ಮಹತ್ವದ ಚರ್ಚೆ ಪ್ರಾರಂಭಿಸಿ, ಉಪಸಂಸ್ಕೃತಿ ಕುರಿತು ಸಾಕಷ್ಟು ಬರೆದಿದ್ದಾರೆ. ಮುಖ್ಯವಾಗಿ ಕರ್ನಾಟಕದ ಉದ್ದಗಲಕ್ಕೂ ಇರುವಂತಹ ಅಲಕ್ಷಿತ – ನಿರ್ಲಕ್ಷಿತ ಸಮುದಾಯದ ಸಂಸ್ಕೃತಿಯನ್ನು ಕುರಿತು, ಆಚಾರ-ವಿಚಾರಗಳನ್ನು ಕುರಿತು

ಸಾಕಷ್ಟು ಕೆಲಸಮಾಡಿದ್ದಾರೆ. ಬಹುರೂಪತೆ ಎಂಬುದು ಭಾರತೀಯ ಮೆಟಾಫರ್. ಈ ಬಹುರೂಪತೆ ಎನ್ನುವುದು ಇಡೀ ಭಾರತದ ವೈವಿಧ್ಯತೆಯನ್ನು ಹೇಳುತ್ತವೆ.

ಹಳೆಮನೆಯವರಿಂದ ಸ್ಫೂರ್ತಿಗೊಂಡು ಬೆಳೆದವರು ಅನೇಕರಾದರೂ ಅವರಲ್ಲಿ ಸ್ವಂತ ಪರಿಶ್ರಮದಿಂದ ಸಾಕಷ್ಟು ಬೆಳೆದಿದ್ದಾರೆ. ಉದಾ: ಗದ್ಯದಲ್ಲಿ ದೇವನೂರು ಮಹಾದೇವ, ಪದ್ಯದಲ್ಲಿ ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ ವಿಮರ್ಶೆ ವಿದ್ವತ್ತಿನ ಹಿನ್ನೆಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದರೂ ಆದರೆ ಒಬ್ಬ ನಾಟಕಕಾರ ದೊಡ್ಡ ಪ್ರಮಾಣದಲ್ಲಿ ಬೆಳೆಯಲಿಲ್ಲ. "ಆಸಕ್ತಿ ಎನ್ನೋದು ಯಾರಪ್ಪನ ಮನೆಯ ಸೊತ್ತು ಅಲ್ಲ" "ನಾನು ನನ್ನನ್ನು ನನ್ನ ತೆವಲಿಗೆ ಬಳಸಿಕೊಂಡೆ ಎಂದು ಮುಖ್ಯವಾಗಿ ಆಸಕ್ತಿ ಇದ್ದೆಡೆ ಅವಕಾಶ ಕಟ್ಟಿಟ್ಟ ಬುತ್ತಿ. Anywhere you keep me, I am a dominant person. ನಮ್ಮಂಥವರು ಎಲ್ಲರ ಸ್ವೀಕೃತ ಧ್ವನಿಗಳಾಗಬಹುದು, ಆ ರೀತಿಯ ಬಹುಜನ ಸ್ವೀಕೃತ ಧ್ವನಿಯಾಗಬೇಕೆಂಬುದೇ ನನ್ನ ಆಸೆ" ಎಂದು ಹಳೆಮನೆಯವರು ಎನ್ನುತ್ತಿದ್ದರು.

ಹಳೆಮನೆ ಲಿಂಗದೇವರು ಕಲೆ ಸಾಹಿತ್ಯದಲ್ಲಿ ಸದಭಿರುಚಿ ಹೊಂದಿದ್ದು ಅದರಲ್ಲೂ ವಿಶೇಷವಾಗಿ ನಾಟಕ ಮತ್ತು ರಂಗಭೂಮಿಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ತಾವೇ ಸ್ವತಃ ನಾಟಕಕಾರರಾಗಿ ಹಲವಾರು ನಾಟಕಗಳನ್ನು ಬರೆದರು.

೧೮-೧೯ನೇ ಶತಮಾನದ ರಾಜತ್ವದ ಆಳ್ವಿಕೆಯ ಬಗ್ಗೆ ರಂಗಭೂಮಿಯ ಮೂಲಕ ಜನರಿಗೆ ವಿಷಯ ತಿಳಿಸಬೇಕೆಂಬ ಹಂಬಲ ಅವರಿಗಿತ್ತು. ಅದಕ್ಕಾಗಿಯೇ ಅವರು ತಮ್ಮದೇ ಆದ ಕಲಾತಂಡವನ್ನು ಆಸಕ್ತಿಯಿಂದ ರಚಿಸಿ ರಂಗಶಾಲೆಯನ್ನು ಪ್ರಾರಂಭಿಸಿ ನಿರ್ದೇಶಿಸಿದರು.

ಹ.ಲಿಂ.ರವರ ಜನಪರ ಕಾಳಜಿಗಳನ್ನು ಪ್ರಗತಿಪರ ಆಲೋಚನೆಗಳನ್ನು ರಾಜತ್ವವನ್ನು ಪರಿಚಯಿಸಬೇಕೆಂಬ ತುಡಿತವೂ ಇದೆ. ಅದರ ಪರಿಣಾಮವಾಗಿ ಇಂದು ರಾಜತ್ವದ ಯದುವಂಶದ ಅರಸರ ಅಧಿಕಾರ, ರಸಿಕತೆ ಸಮಾಜದ ವಿವಿಧಸ್ತರ ಜನಶಕ್ತಿ, ಜನರ ಶೋಷಣೆ, ಜನರ ಭಾವದಲ್ಲಿ **"ರಾಜಪ್ರತ್ಯಕ್ಷದೇವತಾ"** ಎಂಬ ಮನೋಭಾವದ ದ್ವಂದ್ವ-ಗೊಂದಲ ಐಶಾರಾಮಿಜೀವನ, ರೈತ, ಸೈನಿಕ ಸಮುದಾಯದ ಐತಿಹಾಸಿಕ ವಾಸ್ತವವನ್ನು ಬರಹದ ಮೂಲಕ ಪ್ರತಿಬಿಂಬಿಸಿದ್ದಾರೆ. ತಮ್ಮ ನಾಟಕದಲ್ಲಿ ವಿವರಣಾತ್ಮಕ ಸನ್ನಿವೇಶ ನಿರ್ಮಾಣ, ನಾಟಕೀಯ ಸನ್ನಿವೇಶ ನಿರ್ಮಾಣ ಪ್ರಧಾನವಾಗಿದ್ದು ಅವರ ಪ್ರಬುದ್ಧ ನಾಟಕಗಳಲ್ಲಿ ಪ್ರೌಢಿಮೆ ಅಸಾಧಾರಣವಾದ ಸಂಭಾಷಣೆ, ಭಾಷೆಗಳಲ್ಲಿ ಪಾತ್ರಕ್ಕೆ

ತಕ್ಕಂತೆ ಶಿಷ್ಟ, ಗ್ರಾಮ್ಯ, ಆಡುಭಾಷೆಗಳನ್ನು ಬಳಸುವ ಮೂಲಕ ಆಯಾಪಾತ್ರಕ್ಕೆ ನೈಜತೆಯನ್ನು ಒದಗಿಸಿ ಕನ್ನಡದಲ್ಲಿ ಅಪರೂಪದ ನಾಟಕಗಳಲ್ಲಿ ಒಂದಾಗಿದೆ. ಸಾಹಿತ್ಯದಲ್ಲಿ ಅಗಾಧ ಪ್ರಬುದ್ಧತೆ ಪರಿಶ್ರಮ ಅವರಲ್ಲಿ ಕಾಣಬಹುದು.

ರಾಜತ್ವದ ಅದೆಷ್ಟೋ ವಿಷಯಗಳು ಅನೇಕ ಅಂಶಗಳನ್ನು ಕೃತಿಯ ನೆರಳಲ್ಲಿ ಸಮರ್ಥ ನಾಟಕಗಳ ಮೂಲಕ ತೆರೆದಿಡುವಲ್ಲಿ ಸಮರ್ಥ ನಾಟಕದ ಎಲ್ಲಾ ಲಕ್ಷಣಗಳನ್ನು ಅವರ ಸೃಜನಶೀಲ ಸಾಹಿತ್ಯದ ಮೂಲಕ ಗಟ್ಟಿಗೊಳಿಸಿದ್ದಾರೆ.

ಸಮಕಾಲೀನ ಕನ್ನಡದ ಚಿಂತಕರ ನಡುವೆ ಹಳೇಮನೆಯವರು ಗುರುತರವಾದ ಹೆಸರು. ನಾಟಕಕಾರರಾಗಿ ಸಾಂಸ್ಕೃತಿಕ ಚಿಂತಕರಾಗಿ ರಂಗಭೂಮಿಯ ಒಳನೋಟವನ್ನೇ ನೀಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

ಅವೆಲ್ಲಕ್ಕಿಂತ ಹೆಚ್ಚಾಗಿ ಹಳೆಮನೆಯವರು ಸಮಾಜದ ಆಗುಹೋಗುಗಳ ಬಗ್ಗೆ ಮಾಡಿರುವ ವ್ಯಾಖ್ಯಾನ, ವಿಮರ್ಶೆಗಳು ಸಮಾಜವನ್ನು ಒಂದೇ ಕಣ್ಣಿನಿಂದ ನೋಡುವವರ ಮತ್ತೊಂದು ಕಣ್ಣನ್ನು ತೆರೆಸುವಂತಿದೆ. ಪ್ರತೀ ನಾಟಕದಲ್ಲಿ ಸ್ಥಳೀಯ ಜಾಗತೀಕ ವಿದ್ಯಾಮಾನಗಳ ಕುರಿತು ಅವರ ಲೇಖನಗಳು ಆರೋಗ್ಯಕರ ಸಮಾಜವೊಂದಕ್ಕೆ ದೀವಿಗೆಯಂತಿವೆ.

ವಿದ್ವತ್ತು ಮತ್ತು ಜನಪರತೆ ಎರಡೂ ಒಂದೆಡೆ ಇರುವುದು ಅತಿವಿರಳ ಅಂತಹವರ ಸಾಲಿನಲ್ಲಿ ಲಿಂಗದೇವರು ಹಳೇಮನೆಯವರದು ಗುರುತರವಾದ ಹೆಸರು.ರಿವರ ನಾಟಕಗಳು ಪ್ರಸ್ತುತಕ್ಕೆ ಚಿಂತನಾ ಪ್ರಕ್ರಿಯೆಗೆ ನಾಂದಿಹಾಡಿತೆಂಬುದು ನಿಜ. ಪ್ರತಿಯೊಂದು ಅನುಸಂದಾನದಲ್ಲೂ ವಿಶಿಷ್ಟವಾದ ಹಿನ್ನೆಲೆ, ಸತ್ಯ, ಅನುಭವವನ್ನು ಓದುಗರಿಗೆ ಮುಟ್ಟಿಸುವಲ್ಲಿ ಸಫಲರಾಗುತ್ತಾರೆ. ಹಳೇಮನೆಯವರು ಸೃಷ್ಟಿಸಿದ ಪಾತ್ರಗಳು, ಕ್ರಿಯಾಶೀಲತೆಯ ಪರಿ ಅನನ್ಯವಾದುದು. ರಂಗಾಯಣದ ಕಲಾತ್ಮಕ ಅಭಿವ್ಯಕ್ತಿ ಮತ್ತು ಸಾಂಘಿಕ ಸ್ವರೂಪ ಇವೆರಡನ್ನೂ ಏಕಕಾಲದಲ್ಲಿ ತಮ್ಮ ಯಶಸ್ವಿ ನಾಟಕಗಳ ಮೂಲಕ ಗಟ್ಟಿಯಾಗಿ ಸಾಕಾರಗೊಳಿಸಿದ ರಂಗಕರ್ಮಿ, ಯಶಸ್ವಿ ನಾಟಕಗಳನ್ನು ನಿರ್ದೇಶಿಸಿ ಅಭೂತಪೂರ್ವ ಯಶಸ್ಸು ಗಳಿಸುತ್ತಾ ಜೊತೆಜೊತೆಗೆ ಮೈಸೂರು ಚರಿತ್ರೆಯ ತಥ್ಯಗಳು ಬೇಕೆಂದು ಕಥೆಗೆ ಸತ್ಯಗಳನ್ನು ಗಟ್ಟಿಗೊಳಿಸುವಿಕೆಯನ್ನು ನಾಟಕಗಳಲ್ಲಿ ಪಾತ್ರಗಳು ಸಂಭಾಷಣೆಯ ಮೂಲಕ ಜೀವಧ್ವನಿ ನೀಡಿರುವುದು ಒಂದು ವಿಸ್ಮಯ ಕಥೆಯನ್ನು ಹರಳುಗಟ್ಟಿಸುವಂತಿದೆ. ಭಾಷಾಕೌಶಲ "ಶಾಪ" ಪ್ರಜಾಪ್ರಭುತ್ವವಾದಿ ನೆಲೆಯಲ್ಲಿ

ಸಮಾಜದ ಸಮಸ್ಯೆಗಳನ್ನು ಅಭಿವ್ಯಕ್ತಿಸಿ ನಿರ್ದಾಕ್ಷಿಣ್ಯವಾಗಿ ರಾಜರವರಿಗೆ ಪ್ರಜ್ಞಾವಂತರು ಅಸಹನೆ ವ್ಯಕ್ತಪಡಿಸುವಂತಿದೆ. ಅದು ಐತಿಹಾಸಿಕ ಘಟನೆ ಎನಿಸಿದರೂ ಇಂಥ ಅಮಾನವೀಯ ಅಸಮಾನ ಮೂಲಭೂತ ಹೇಳಿಕೆಗಳನ್ನೆ ಪ್ರಶ್ನಿಸುವಂತಹ ಚಿಂತನೆ ಓದುಗರಲ್ಲಿ ಅಧಿಕಾರದಾಹ, ಸ್ವಾರ್ಥದ ಬಗ್ಗೆ ಅಸಹನೆ ಬೇಸರ ತರಿಸುತ್ತದೆ. ಅಂದರೆ ಅಂದಿನ ಪ್ರಭುತ್ವ ಜನರ ಜಲ-ನೆಲ, ಗಡಿಯನ್ನು ರಕ್ಷಿಸುವುದಿರಲಿ ಭಕ್ಷಿಸದಿದ್ದರೆ ಸಾಕೆಂಬ ಕರಾಳದಿನಗಳಾಗಿ ಭರವಸೆಯ ದಿನಗಳು ಭವಿಷ್ಯದಲ್ಲಿ ಮರೆಯಾದವು.

ಹಿಂದಿನ ಕಾಲದಲ್ಲಾಗಿದ್ದರೆ ಒಬ್ಬ ಮಹಿಷಾಸುರ, ಒಬ್ಬ ರಕ್ತಬೀಜಾಸುರ. ಈಗಾದರೆ ಸಹಸ್ರಾರು ಮಹಿಷಾಸುರರು, ರಕ್ತಬೀಜಾಸುರರು, ಜನರೇನು? ದೇವತೆಯು ಸ್ವಯಂ ರಕ್ಷಣೆಗೆ ರೂಪ ತಳೆದು ಬರಬೇಕಾಗಬಹುದು. ಅಂದಿಗೂ ಇಂದಿಗೂ ರಂಗಪ್ರದರ್ಶನದಲ್ಲಿ ಅನೇಕ ಬದಲಾವಣೆಗಳ ಸಾಮ್ಯತೆಯು ಕಂಡುಬರುತ್ತದೆ.

ಅಭಿವೃದ್ಧಿ ಆಧುನೀಕರಣದ ಹೆಸರಲ್ಲಿ ದೇಶದ ಬಗ್ಗೆ ರೈತರ ಬಗ್ಗೆ ಬಡಜನಸಮುದಾಯದ ಬಗ್ಗೆ ಕಿಂಚಿತ್ತೂ ಚಿಂತಿಸದೆ ಅಂದಿನಿಂದ ಈವರೆಗೂ ಶಿಕ್ಷಣ, ಆರೋಗ್ಯ, ವಸತಿ ಮುಂತಾದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲಾಗಿಲ್ಲ ಎಂಬ ಕಟುಸತ್ಯ ಎಲ್ಲರೂ ಅರಗಿಸಿಕೊಳ್ಳಲೇಬೇಕು. ಈ ವಿಕೃತವಾದ ಆಡಳಿತ ಅದು ರಾಜತ್ವ, ಇಂದು ಸರ್ಕಾರ ಜನ ಸಾಮಾನ್ಯರ ದೊಡ್ಡ ಶೋಷಕ ಸಂಸ್ಥೆಯಾಗಿರುವಲ್ಲಿ ಎರಡು ಮಾತಿಲ್ಲ ಎಂಬುದು ಸಾಹಿತಿಯವರ ಮನದಾಳದ ನೋವು. ಮುಂದಿನ ದಿನಗಳಲ್ಲಿ ಸಾಮಾನ್ಯ ಜನರಿಗೆ ಭವಿಷ್ಯ ಇದ್ದಂತಿಲ್ಲ ಎಂಬುದನ್ನು ತಮ್ಮ ನಾಟಕಗಳಲ್ಲಿ ಘರ್ಜಿಸಿರುತ್ತಾರೆ. ನಿಸ್ವಾರ್ಥ ಆಡಳಿತ, ಜನರಕ್ಷಣೆ ಆಗಬೇಕೆಂದು ತಮ್ಮ ನಾಟಕಗಳ ಮೂಲಕ ಹೇಳುತ್ತಾರೆ.

ಆಧುನಿಕ ರಂಗಭೂಮಿಯ ನಾಟಕಕಾರರಲ್ಲಿ ಲಿಂಗದೇವರು ಮೊದಲನೆಯವರು, ಪ್ರಮುಖರು. ಭಾಷಾವಿಜ್ಞಾನಿಯಾಗಿ, ನಾಟಕಕಾರರಾಗಿ, ಅನುವಾದಕರಾಗಿ, ಅಂಕಣ-ಕಾರರಾಗಿ, ಸಂಸ್ಕೃತಿ ಚಿಂತಕರಾಗಿ ಹಲವಾರು ವಿಷಯಗಳಲ್ಲಿ ವ್ಯಾಪಿಸಿಕೊಂಡಿರುವ ಹಳೆಮನೆಯವರ ಪ್ರತಿಭೆ ಮೂಲದಲ್ಲಿ ರಂಗಭೂಮಿಯದ್ದಾಗಿದೆ.

ಕನ್ನಡದ ಪ್ರಬುದ್ಧ ರಂಗಭೂಮಿಯ ದಿಕ್ಕುದೆಸೆ ಬದಲಾಯಿಸಿದ ಅನೇಕ ನಾಟಕಗಳು ಹಳೆಮನೆಯವರ ಲೇಖನಿಯಿಂದ ಬಂದವು. ಜಗತ್ತಿನ ಶ್ರೇಷ್ಠ

ನಾಟಕಕಾರರ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಅಮೋಘ ಕೊಡುಗೆ ಸಲ್ಲಿಸಿರುತ್ತಾರೆ.

ಸಮುದಾಯದ ಸಂಘಟನೆಯ ಬೆನ್ನೆಲುಬಾಗಿ ಕರ್ನಾಟಕದ ಸಾಹಿತ್ಯಿಕ, ರಾಜಕೀಯ ಚಳುವಳಿಗಳ ಹಿನ್ನೆಲೆಯಾಗಿ ಕೆಲಸಮಾಡಿ ಬದ್ಧರಾಗಿ ರಂಗಭೂಮಿಗೆ ಅಪಾರ ಕೊಡುಗೆ ನೀಡಿರುವ ಇವರಿಗೆ ಸಂದ ಗೌರವಗಳು ಅಪಾರ.

ಅಧ್ಯಾಯ – ೪

ಲಿಂಗದೇವರು ಹಳೆಮನೆಯವರ ನಾಟಕಗಳ ವಿಭಿನ್ನ ನೋಟಗಳು

ಶಿಕ್ಷಣ ತಜ್ಞ, ನಾಟಕಕಾರ ಲಿಂಗದೇವರು ಹಳೆಮನೆಯವರು, ಕನ್ನಡನಾಡಿನಲ್ಲಿ ಆಳ್ವಿಕೆ ನಡೆಸಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ರಾಜರುಗಳನ್ನು ಕೇಂದ್ರವಾಗಿಟ್ಟುಕೊಂಡು ಐದು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಾಲ್ಕು ನಾಟಕಗಳನ್ನು ಆರಿಸಿಕೊಂಡು ಅಧ್ಯಯನದ ದೃಷ್ಟಿಯಿಂದ ನಾಲ್ಕು ವಿಭಾಗಗಳ-ನ್ನಾಗಿಸಿಕೊಂಡಿದ್ದು ಅವು ಹೀಗಿವೆ.

೧) ಐತಿಹಾಸಿಕ ಹಿನ್ನೆಲೆ

೨) ರಾಜಕೀಯ ಹಿನ್ನೆಲೆ

೩) ಸಾಮಾಜಿಕ ಹಿನ್ನೆಲೆ

೪) ಧಾರ್ಮಿಕ ಪರಿಸರ

(೧) ಐತಿಹಾಸಿಕ ಹಿನ್ನೆಲೆ

ಲಿಂಗದೇವರುರವರು ರಚಿಸಿರುವ ಐದು ನಾಟಕಗಳು ಐತಿಹಾಸಿಕ ನಾಟಕಗಳಾಗಿವೆ. ಮೈಸೂರು ಸಂಸ್ಥಾನದಲ್ಲಿ ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ನಡೆಸಿದ ರಾಜ, ದಳವಾಯಿಗಳ ವ್ಯಾಪಕ ಪ್ರಭಾವವನ್ನು ನಾಟಕದಲ್ಲಿ ನೋಡಬಹುದಾಗಿದೆ. ಇತಿಹಾಸದಲ್ಲಿ ತಮ್ಮದೇ ಆದ ಅಸ್ತಿತ್ವ ಛಾಪು ಮೂಡಿಸಿರುವ ಮೈಸೂರು ಸಂಸ್ಥಾನದ ಅರಸರ ಆಳ್ವಿಕೆಯ ಜೊತೆಗೆ ಅಂದು ನಡೆದಿರಬಹುದಾದ ಸಂಚು, ಒಳಸಂಚು, ಒಬ್ಬರು ಮತ್ತೊಬ್ಬರ ಕಾಲೆಳೆಯುವುದನ್ನು ನಾಟಕದುದ್ದಕ್ಕೂ ಕಾಣಬಹುದು. ರಾಜಪ್ರಭುತ್ವ ಎಂಬುದು ನೆಮ್ಮದಿ, ಶಾಂತಿಯ ತಾಣವಲ್ಲ. ಆಳುವ ಅರಸರಿಗೆ ಸದಾ ಮುಳ್ಳಿನ ಮೇಲೆ ಕೂತಂಥ ಅನುಭವ. ಸದಾ ಕಾಲ ಸಿಂಹಾಸನ, ಅಧಿಕಾರ, ಜೀವ ಉಳಿಸಿಕೊಳ್ಳುವುದೇ ಅವರ ದಿನನಿತ್ಯದ ಕರ್ಮವಾಗಿರುವುದನ್ನು ನಾಟಕಗಳಿಂದ ತಿಳಿಯಬಹುದಾಗಿದೆ.

ಸಾಮಾನ್ಯವಾಗಿ ಒಂದು ದೇಶದ ರಾಜ ತನ್ನ ಬಿರುದಾವಳಿಗಳನ್ನು, ಬಲ್ಮೆಯನ್ನು ಸಾರುವುದಕ್ಕಾಗಿ, ತನ್ನ ಆಸ್ಥಾನದ ವಿದ್ವಾಂಸರಿಂದ ಉತ್ಪ್ರೇಕ್ಷೆಯಿಂದ ಕೂಡಿದ,

ಪೂರ್ವಾಗ್ರಹಪೀಡಿತ ದಾಖಲೆಗಳನ್ನು ವ್ಯಾಖ್ಯಾನಿಸಿರುವುದು ಸಾಮಾನ್ಯವಾಗಿ ಕಂಡುಬಂದಿರುವುದೇ ಆಗಿದೆ. ಇತಿಹಾಸವಿರುವುದು ಸೃಷ್ಟಿಸುವುದಕ್ಕಲ್ಲ. ಪುನರ್ ಪ್ರತಿಪಾದಿಸುವುದಕ್ಕೆ. "ಹಿಂದೆ ನಡೆದ ಅದೆಷ್ಟೋ ಘಟನೆಗಳು ಇತಿಹಾಸಕಾರರ ಅಜಾಗರೂಕತೆಯಿಂದಲೋ, ಜಾಗರೂಕತೆಯಿಂದಲೋ ಮುಚ್ಚಿಹೋಗಿ ಸತ್ಯ ನಮಗೆ ತಿಳಿಯದಂತಹ ಪರಿಸ್ಥಿತಿ ಒದಗಿ ಬಂದಿರುವ ಸನ್ನಿವೇಶಗಳನ್ನು 'ಚಿಕ್ಕದೇವ ಭೂಪ' ನಾಟಕದಲ್ಲಿ ಕಾಣಬಹುದಾಗಿದೆ.

ಹಳೆಮನೆಯವರು ರಚಿಸಿರುವ ನಾಟಕಗಳು ವಿಭಿನ್ನ ಕಾಲಘಟ್ಟಗಳಲ್ಲಿ ರಚಿತವಾದಂಥವು. "ಸಂಸದ ಇತಿಹಾಸದ ದೃಷ್ಟಿಕೋನ ಸಾಂಪ್ರದಾಯಿಕ ಭಾರತೀಯ ಮನಸ್ಸಿಗೆ ಹತ್ತಿರವಾದ ದೃಷ್ಟಿಕೋನ. ಅಷ್ಟೇ ಅಲ್ಲ, ಇತಿಹಾಸದ ನೆಲೆ–ಬೆಲೆಗಳು, ಅರ್ಥೈಸಿಕೊಳ್ಳುವ ಕ್ರಮ ಈಗ ಬದಲಾಗಿದೆ. ಇಂಥ ಬದಲಾದ ಸಮಕಾಲೀನ ಇತಿಹಾಸ ದೃಷ್ಟಿಕೋನದ ಮಾದರಿಯಾಗಿ ಹಳೆಮನೆಯವರ ನಾಟಕಗಳು ಕಾಣಿಸುತ್ತವೆ" (ಹೆಚ್.ಎಸ್.ಉಮೇಶ್, ಪು. ೩೨೮, ಮೈಸೂರು ಸಂಸ್ಥಾನದ ನಾಲ್ಕು ನಾಟಕಗಳು) ಎಂದು ಖ್ಯಾತ ನಾಟಕಕಾರ ಹೆಚ್.ಎಸ್. ಉಮೇಶ್ ಅಭಿಪ್ರಾಯಪಡುತ್ತಾರೆ.

ಇತಿಹಾಸದ ತಂದೆಯಾಗಿ ಗುರುತಿಸಲ್ಪಡುವ ಹೆರೋಡೇಟಸ್ ಹಾಗೂ ಅವನ ಶಿಷ್ಯ ಪರಂಪರೆಗೆ ಸೇರಿದ ಇತಿಹಾಸಕಾರರ ದೃಷ್ಟಿಯಲ್ಲಿ "ಇತಿಹಾಸಕ್ಕೆ ಕಾಲದ ಹಂಗಿಲ್ಲ" ಎಂದು ಉಮೇಶ್ ಉಲ್ಲೇಖಿಸುತ್ತಾರೆ. ಖ್ಯಾತ ಇತಿಹಾಸಕಾರ ಪೌವ್ಯೆ ಇತಿಹಾಸವನ್ನು ಆಧರಿಸಿ ಬರೆಯುವ ಬಗ್ಗೆ ಹೀಗೆ ಹೇಳುತ್ತಾರೆ. "ಇತಿಹಾಸವನ್ನು ವ್ಯಾಖ್ಯಾನಿಸಬೇಕೆಂಬ ನಮ್ಮ ಹಂಬಲ ಎಷ್ಟು ಆಳವಾಗಿ ಬೇರೂರಿದೆ ಎಂದರೆ, ಭೂತಕಾಲವನ್ನು ನಾವು ರಚನಾತ್ಮಕವಾಗಿ ನೋಡದಿದ್ದರೆ, ಅದು ನಮ್ಮನ್ನ ರಹಸ್ಯವಾದಕ್ಕೆ ಅಥವಾ ಸಿನಿಕತನಕ್ಕೆ ಎಳೆದೊಯ್ಯುತ್ತದೆ" – ಇದರ ಅರ್ಥವೆಂದರೆ ಇತಿಹಾಸದ ವಸ್ತು, ಘಟನಾವಳಿಗಳನ್ನು ಸಿನಿಕತನದಿಂದ, ಭ್ರಮೆಯಿಂದ ನೋಡದೆ ಸಹಜ ಪ್ರಕ್ರಿಯೆಯಾಗಿ ದಾಖಲಿಸಬೇಕಾದ ಅಗತ್ಯತೆ ಕುರಿತಂತೆ ಪೌವ್ಯೆ ಹೇಳಿದ್ದಾರೆ.

ಲಿಂಗದೇವರು ಹಳೆಮನೆಯವರು ಮೈಸೂರಿನ ಅರಸರ ಗುಣಾವಗುಣಗಳನ್ನು ದಾಖಲಿಸುವಾಗ ನಾಟಕದಲ್ಲಿ ಉಲ್ಲೇಖಿಸುವಾಗ ಎಲ್ಲೂ ಭಾವಾವೇಶಕ್ಕೆ ಒಳಗಾಗದೆ, ಪೂರ್ವಾಗ್ರಹಪೀಡಿತರಾಗದೆ ವಸ್ತುತಃ ವಿಷಯಕ್ಕೆ ಒತ್ತುನೀಡಿದ್ದಾರೆ. 'ಚಿಕ್ಕದೇವಭೂಪ'

ಎಂಬ ಐತಿಹಾಸಿಕ ನಾಟಕದಲ್ಲಿ ಮೈಸೂರಿನ ಒಡೆಯರ ಹಿನ್ನೆಲೆಯ ದಾಖಲೆಯನ್ನು ಲಾವಣಿಯ ಮೂಲಕ ಹೀಗೆ ಕಟ್ಟಿಕೊಟ್ಟಿದ್ದಾರೆ.

ಕೇಳಿರಿ ಕೇಳಿರಿ ಕನ್ನಡ ಜನರೆ
ಕನ್ನಡ ರಾಜರ ಕಥೆಯನ್ನು
ನಾಡನು ಆಳುವ ರಾಜರು ದೇವರು
ಎಂದಾ ಜನಗಳ ವ್ಯಥೆಯನ್ನು

ಜನಗಳ ಸೇವೆಯ ಮಾಡುವೆವೆಂದು
ಜನಗಳ ಧರ್ಮದ ಉಳಿಸುವೆವೆಂದು
ರಾಜನ ಕೊಂದು ರಾಜನು ಬಂದು
ಜನಗಳ ಗಾಳಕೆ ತಳ್ಳಿದರು

ಮೈಮನವೆರಡಕು ಮೋಜನು ಉಣಿಸುತ
ಮದಿರೆಯ ಮತ್ತಲಿ ಹೆಣ್ಣಿನ ಮೋಹದಿ
ಮೋದವನಾಡುತ ಮೈಮನ ಮರೆತ
ಕನ್ನಡ ರಾಜರ ಕಥೆಯನ್ನು

ಮಹಿಶೂರ ನಾಡಿಗೆ ದುರ್ಗೆಯ ತಂದು
ದುರ್ಗೆಯ ಹೆಸರಲಿ ದುರ್ಗವ ಕಟ್ಟಿ
ದರ್ಪವ ಮೆರೆದ ಕುಂಭಗೌಡರ
ಗೌಡಾಧಿಪತ್ಯದ ಕತೆಯನ್ನು

ದ್ವಾರಕೆ ಮುಗಿಸಿ ಇಲ್ಲಿಗೆ ಬಂದು
ಬಡವರ ರಕ್ತವ ಗಟಗಟ ಕುಡಿದು
ರಕ್ತದ ಬದಲಿಗೆ ರತ್ನವ ಬೆಳೆಸಿದ
ರತ್ನ ಸಿಂಹಾಸನದ ಕತೆಯನ್ನು

ಮೈಸೂರಿನ ಒಡೆಯರನ್ನು 'ಯದುವಂಶ'ದವರೆಂದು ಎಲ್ಲರೂ ಭಾವಿಸಿ ನಂಬಿರುವಾಗ ಈ ಬಗ್ಗೆ ಅನೇಕ ಸಂಗೀತ, ಸಾಹಿತ್ಯವನ್ನು ಅರಮನೆಯ ವಿದ್ವಾಂಸರು ರಚಿಸಿರುವಾಗ ನಮಗೆ ಅರಿವಿಲ್ಲದ, ಮುಚ್ಚಲ್ಪಟ್ಟ ಇತಿಹಾಸವನ್ನು ವಿಶ್ಲೇಷಿಸಿ ಹಳೆಮನೆಯವರು ತುಂಬಾ ಮಾರ್ಮಿಕವಾಗಿ ನಾಟಕದ ಪಾತ್ರಗಳ ಮುಖೇನ ಒಡೆಯರ ಮೂಲವನ್ನು ತಿಳಿಸಿಕೊಟ್ಟಿದ್ದಾರೆ.

ಮೈಸೂರಿನ ಒಡೆಯರಲ್ಲಿ ಒಬ್ಬರಾದ ಚಿಕ್ಕದೇವರಾಜನ ಬಗ್ಗೆ 'ಚಿಕ್ಕದೇವರಾಜ ವಿಜಯ'ದಲ್ಲಿ ನಿಜಸ್ವರೂಪ ಮರೆಮಾಡಿ ಉಲ್ಲೇಖಿಸಲಾಗಿದೆ. 'ಮೈಸೂರಿನ ಚರಿತ್ರೆ'-ಯಲ್ಲಿ, ದೇವಚಂದ್ರನ 'ರಾಜಾವಳಿ ಕಥೆ(೧೭೭೦)ಯಲ್ಲಿ, ಕರ್ನಲ್ ಮಾರ್ಕ್ ವಿಲ್ಸ್‌ನ (೧೮೧೦) 'ಹಿಸ್ಟಾರಿಕಲ್ ಸ್ಕೆಚ್ ಆಫ್ ಸೌತ್ ಇಂಡಿಯಾ'ದಲ್ಲಿ ಹಾಗೂ ಮೈಸೂರು ಗೆಜೆಟಿಯರ್‌ನಲ್ಲಿ ಇ.ಪಿ.ರೈಸ್ ಹಾಗೂ ಹಯವದನರಾವ್ ಅವರು ಕೂಡ 'ಚಿಕದೇವರಾಜ'ನ ಬಗ್ಗೆ ಉಲ್ಲೇಖಿಸಿದ್ದಾರೆ.

ಚಿಕದೇವರಾಜನ ಆಳ್ವಿಕೆಯ ಕಾಲದಲ್ಲಿ ಎಲ್ಲವೂ ಸುಗಮವಾಗಿತ್ತು ಎಂಬುದು ಸುಳ್ಳಾಗಿದ್ದು ಆ ಕಾಲದಲ್ಲಿ ಚಿಕ್ಕದೇವರಾಜ ಒಡೆಯ ಅಧಿಕಾರಕ್ಕೆ ಬಂದಾಗ ನಾಡಿನಲ್ಲಿ ಪಾಳೆಗಾರರ ಪುಂಡಾಟಿಕೆ ಹೆಚ್ಚಾಗಿತ್ತು, ಶತ್ರುಗಳ ಆಕ್ರಮಣ ಭೀತಿ ಮತ್ತೊಂದೆಡೆ. ಹೀಗಾಗಿ ನೂತನ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ, ಅರಮನೆಯನ್ನು ಉನ್ನತೀಕರಿಸಿ, ಖಜಾನೆಯನ್ನು ತುಂಬಿಸಿಕೊಳ್ಳುವ ಸಲುವಾಗಿ ಆದಾಯದ ಮೂಲಕ್ಕೆ ಹುಡುಕಾಟ ನಡೆಸುತ್ತಿರುವಾಗ ವಿಶಾಲಾಕ್ಷ ಪಂಡಿತನ ಕುಮ್ಮಕ್ಕಿನಿಂದ ಚಿಕ್ಕದೇವರಾಜ ಮೊದಲೇ ತೆರಿಗೆಯ ಭಾರದಿಂದ ಕುಗ್ಗಿರುವ ಪ್ರಜೆಗಳ ಮೇಲೆ ಹುಲ್ಲುಹಣ ತೆರಿಗೆ, ನಷ್ಟತೆರಿಗೆ, ಮಾರಾಟ ತೆರಿಗೆ ಒಂದು ನೇಗಿಲಿಗೆ ಎರಡು ಚಿನ್ನದ ಹಣ ಮುಂತಾದ ಸುಂಕ ಹೇರುತ್ತಾರೆ.

ಷಡಕ್ಷರಯ್ಯನವರು ಹೆಚ್ಚುವರಿ ತೆರಿಗೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೂ ಜೋಗಿ ಜಂಗಮರ ಮೇಲೂ ಸುಂಕ ವಿಧಿಸಲು ನಿರ್ಧರಿಸುತ್ತಾರೆ. ಕಂದಾಯ ವಸೂಲಿಯಲ್ಲಿ ಕಡಿಮೆ ಹಣ ಸಂಗ್ರಹವಾದರೆ ಆ ಕಡಿಮೆ ಬಿದ್ದ ಹಣವನ್ನು ಪಟೇಲನೇ ತುಂಬಿಕೊಡಬೇಕೆಂಬ ಕಟುನಿರ್ಧಾರಕ್ಕೆ ಬರುತ್ತಾರೆ. ಈ ಸಂದರ್ಭದಲ್ಲಿಯೇ ಚಿಕುಪಾಧ್ಯಾಯ "ನಮ್ಮ ರಾಜ್ಯದಲ್ಲಿ ಎಲ್ಲಾ ಜಾತಿಯ ಪ್ರಜೆಗಳೂ ತೆರಿಗೆ ಕೊಡುತ್ತಿರುವಾಗ ಜೋಗಿ ಜಂಗಮರು ಕೊಡಬಾರದೆಂದರೆ .? ಅವರು ಮಾತ್ರ ಧಾರ್ಮಿಕರು ಮಿಕ್ಕವರು ಅಧಾರ್ಮಿಕರ" (ಮೈಸೂರು ಸಂಸ್ಥಾನದ ನಾಲ್ಕು ನಾಟಕಗಳು, ಪುಟ. ೩೩) ಎಂದು ಪ್ರಶ್ನಿಸಿ, ರಾಜಚಿಕ್ಕದೇವರಾಜರು "ನಮಗೆ ವರಮಾನ ಮುಖ್ಯವೇ ಹೊರತು ಮತಮಾನ್ಯಗಳಲ್ಲ" (ಮೈಸೂರು ಸಂಸ್ಥಾನದ ನಾಲ್ಕು ನಾಟಕಗಳು, ಪುಟ. ೩೩) ಎಂಬ ಮಾತಿಗೆ ಕಾರಣನಾಗುತ್ತಾನೆ.

ಮಗ್ಗದ ಕಂದಾಯ, ಕೂಡಿಕೆ ತೆರಿಗೆ, ಮದುವೆ ತೆರಿಗೆ, ಉಬ್ಬೆ ಕಾಣಿಕೆ, ಕುರಿತೆರಿಗೆ, ಗುಳದ ತೆರಿಗೆ ಮುಂತಾದ ತೆರಿಗೆಗಳ ಭಾರದಿಂದ ಜನಸಾಮಾನ್ಯರು, ರೈತರು

ದಂಗೆ ಎದ್ದು ಅರಮನೆಗೆ ನೀರು ಹೋಗದಂತೆ ಮಾಡಿ ತಮ್ಮ ಪ್ರತಿಭಟನೆ ತೋರಿಸುತ್ತಾರೆ. ಹಳ್ಳಿಹಳ್ಳಿಗಳಲ್ಲಿ ರೈತರುಗಳೆಲ್ಲ ಒಗ್ಗಟ್ಟಾಗಿ ಯುವಕರ ಸಾರಥ್ಯದಲ್ಲಿ ಸಂಘಟನೆ ಏರ್ಪಟ್ಟು ಇಡೀ ನಾಡಿನಲ್ಲಿ ಅರಾಜಕತೆ ತಲೆದೋರುತ್ತದೆ. "ಮಳೆ ಬೆಳೆ ಸರಿಯಾಗಿ ಆಗದಿದ್ದರೂ ತೆರಿಗೆ ಕೊಡಬೇಕೆಂದರೆ ಹೇಗೆ ಮಹಾಸ್ವಾಮಿ?" (ಅಡಿಟಿಪ್ಪಣಿ, ಮೈ.ಸಂ. ನಾಲ್ಕು ನಾಟಕಗಳು, ಪು. ೫೫) ಎಂದು ಯುವ ರೈತರು ಪ್ರಶ್ನಿಸುವ ಧೈರ್ಯತೋರುತ್ತಾರೆ.

ಸಮಸ್ಯೆ ಎದುರಾದಾಗ ಪ್ರಜೆಗಳ ಮನಃಸ್ಥಿತಿ ಅರಿತು ಅದನ್ನು ನಿವಾರಿಸುವ ದಾರಿ ಹಿಡಿಯುವುದನ್ನು ಬಿಟ್ಟು ರಾಜ ಚಿಕ್ಕದೇವರಾಜ, ವಿಶಾಲಾಕ್ಷ ಪಂಡಿತನ ಜೊತೆಸೇರಿ ಸೇಡಿನ ದಾರಿ ಹಿಡಿದು ರೈತರುಗಳಿಗೆ ಮಾತುಕತೆಗೆ ಆಹ್ವಾನಿಸಿ ಆತಿಥ್ಯ ಸ್ವೀಕರಿಸಿರೆಂದು ಕಳುಹಿಸಿ ಮೋಸದಿಂದ ಯುವ ರೈತ ಮುಖಂಡರುಗಳನ್ನು ಕೊಲ್ಲಿಸುತ್ತಾನೆ.

ಒಡಲಾಳದೊಳಗಿನ ದಳ್ಳುರಿಯಿಂದ
ಅರಮನೆ ಬೊಕ್ಕಸ ತುಂಬೋಯಿತೋ
ನೇಗಿಲ ಗುಳವೆಲ್ಲ ಭರ್ಜಿಯ ಮೊನೆಯಾಗಿ
ರೈತರ ಎದೆಗೂಡು ಬಿಚ್ಚೋಯಿತೋ! ರೈತರು
ಮಣ್ಣಲ್ಲಿ ಬೆರೆತು ಹೋದರೋ

ಈ ಮೇಲಿನ ಲಾವಣಿ ಹಾಡು ರೈತರ ಧಾರುಣ ಅಂತ್ಯವನ್ನು, ಹತ್ಯೆಯನ್ನು ವಿಷಾದಯುಕ್ತವಾಗಿ ಕಟ್ಟಿಕೊಡುತ್ತದೆ. ರೈತರ ಹತ್ಯೆಯ ಬಗ್ಗೆ ರಾಜನಿಗೆ ಖಂಡಿತ ಎಳ್ಳಷ್ಟು ದುಃಖವಿರದೇ ಬದಲಾಗಿ ತನ್ನ ನಿಲುವನ್ನು ಆತ ಸಮರ್ಥಿಸಿಕೊಳ್ಳುತ್ತಾನೆ. "ರಾಜರನ್ನು ಧಿಕ್ಕರಿಸುವವರಿಗೆಲ್ಲಾ ಎಂಥ ಸನ್ಮಾನ ಕಾದಿದೆಯೆಂಬುದನ್ನು ರೈತರು ಇನ್ನೂ ಚೆನ್ನಾಗಿ ತಿಳಿಯಬೇಕಾಗಿದೆ" (ಮೈ.ಸಂ. ನಾಲ್ಕು ಕತೆಗಳು, ಪು. ೫೮) ಎಂದು ರೈತರನ್ನು ಮತ್ತಷ್ಟು ಹೀಗಳೆದು ಮಾತನಾಡುತ್ತಾನೆ. ದಂಗೆ ಎದ್ದ ರೈತರೊಡನೆ ಮಾತನಾಡುವುದಾಗಿ ನಂಜನಗೂಡಿಗೆ ಕರೆಸಿಕೊಂಡ ಚಿಕ್ಕದೇವರಾಜ ಸೈನಿಕರಿಂದ ರೈತರುಗಳನ್ನು ಹತ್ಯೆಮಾಡಿಸುವುದು ಒಂದು ದುರಂತವೇ ಸರಿ.

ಸುಮಾರು ನಾಲ್ಕು ನೂರಕ್ಕಿಂತಲೂ ಹೆಚ್ಚಿನ ರೈತರು ಈ ಸಂದರ್ಭದಲ್ಲಿ ಹತರಾಗುತ್ತಾರೆ. ಆದರೆ ಹಯವದನರಾವ್, ಇ.ಪಿ.ರೈಸ್ ಸಂಪಾದಿತ ಗೆಜೆಟಿಯರ್‌ನಲ್ಲಿ

ವಾಸ್ತವಾಂಶ ದಾಖಲಾಗದೆ ಎಲ್ಲವೂ ಅಂದು ಚೆನ್ನಾಗಿತ್ತು ಎಂಬುದಾಗಿ ದಾಖಲಾಗಿದ್ದರ ಕಾರಣದಿಂದ ಇತಿಹಾಸದ ವಾಸ್ತವಾಂಶಗಳನ್ನು ಸರ್ವರಿಗೂ ತಿಳಿಸುವ ಸಲುವಾಗಿ 'ಮೈಸೂರು ಚರಿತ್ರೆ'ಯ ಸಾಹಿತ್ಯದ ಹಿನ್ನೆಲೆಯಿಂದ ಈ ನಾಟಕ ರಚನೆಯಾಗಿದೆ ಎಂದು ಲಾವಣಿಕಾರನ ಸಂಭಾಷಣೆಯಿಂದ ತಿಳಿಯಬಹುದು.

'ನವಕೋಟಿ ನಾರಾಯಣ' ಎಂಬ ಬಿರುದು ಚಿಕ್ಕದೇವರಾಜನಿಗೆ ಪಿತ್ರಾರ್ಜಿತ ಆಸ್ತಿಯಿಂದ ಬಂದಿರದೆ ಇಪ್ಪತ್ತು ಬಗೆಯ ಹೊಸ ತೆರಿಗೆಯಿಂದ, ರಕ್ತಸಿಕ್ತ ರೈತರ ತ್ಯಾಗದಿಂದ, ಕೊಲೆಗಳಿಂದ ಬಂದಿದೆ ಎಂಬ ವಾಸ್ತವಾಂಶವನ್ನು 'ಚಿಕ್ಕದೇವರಾಜ ಭೂಪ' ಬಿಂಬಿಸುತ್ತದೆ. ರೈತಕ್ರಾಂತಿಯ ನಡುವೆ ಜಂಗಮರುಗಳಿಂದ ವಿಶಾಲಾಕ್ಷ ಪಂಡಿತ ಹತನಾಗುತ್ತಾನೆ.

'ಚಿಕ್ಕದೇವರಾಜ ಭೂಪ' ನಾಟಕದಲ್ಲಿ ಒಡೆಯರ ವಂಶದ ಇತಿಹಾಸ ಕತೆಯ ಜೊತೆಗೆ ಮುಚ್ಚಿಹೋಗಿದ್ದ ಅನಾಚಾರ, ಒಡೆಯನಿಗಿದ್ದ ಸ್ತ್ರೀ ವ್ಯಾಮೋಹ, ಹಣ, ಚಿನ್ನದ ಅತಿಆಸೆಯನ್ನು ಬಿಂಬಿಸುತ್ತದೆ. ಲಿಂಗದೇವರ ಮೊದಲ ನಾಟಕವಾದ ಈ 'ಚಿಕ್ಕದೇವರಾಜಭೂಪ' ರಾಜನನ್ನು ವೈಭವೀಕರಿಸದೆ, ವಾಸ್ತವಾಂಶಗಳನ್ನು ಕಟ್ಟುಕೊಟ್ಟಿದೆ ಎಂಬುದಕ್ಕೆ ಪೂರಕವಾಗಿ ಡಾ. ಎಚ್.ಎಮ್.ಚನ್ನಯ ಹೀಗೆ ಅಭಿಪ್ರಾಯಪಟ್ಟಿದ್ದಾರೆ. “ಹಳೆಮನೆಯವರ ಮೊದಲ ನಾಟಕವಾದ ಚಿಕ್ಕದೇವರಾಜಭೂಪ ಉಳಿದ ಸಾಂಪ್ರದಾಯಿಕ ಚಾರಿತ್ರಿಕ ನಾಟಕಗಳಿಂದ ಭಿನ್ನವಾಗಿದೆ; ಅವರು ರಾಜತ್ವವನ್ನು ವೈಭವೀಕರಿಸದೆ, ಸಂಸ್ಕೃತಿಯ ವಾರಸುದಾರರು ರಾಜರೇ, ಎಂದು ಆದರ್ಶೀಕರಿಸದೆ, ಅವರ ಕೃತ್ಯಗಳನ್ನು ವೀರಕಾರ್ಯಗಳೆನ್ನುವಂತೆ ಉತ್ಪ್ರೇಕ್ಷಿಸಿ ಚಿತ್ರಿಸದೆ, ಚರಿತ್ರೆಯನ್ನು ಸರಿಯಾದ ಪ್ರಗತಿಪರ ದೃಷ್ಟಿಯಲ್ಲಿ ಕಂಡು ನಾಟಕವಾಗಿಸುವ ಸಾಮೂಹಿಕ ಪ್ರಯತ್ನದಲ್ಲಿ ತೊಡಗಿರುವುದು ವಿಶಿಷ್ಟವಾದ ಅಂಶವಾಗಿದೆ” (ಮೈ.ಸಂ. ನಾಲ್ಕು ನಾಟಕಗಳು, ಪು. ೧೪೬) ಎಂದು ಪ್ರತಿಕ್ರಿಯಿಸಿದ್ದಾರೆ.

ಮುನ್ನೂರು ವರ್ಷಗಳ ಹಿಂದೆ ನಡೆದ ಈ ರೈತ ಬಂಡಾಯ, ರೈತ ಹೋರಾಟ ಪ್ರಸ್ತುತ ಸನ್ನಿವೇಶದ ರೈತಹೋರಾಟಕ್ಕೂ ಸಾಮ್ಯತೆಗಳನ್ನು ಗುರುತಿಸಬಹುದು. “ದುಡಿಯುವ ವರ್ಗದ ಆಶಯ ಮತ್ತು ಬದುಕುವ ಹಕ್ಕಿಗೆ ಹೋರಾಟದ ಛಲ ಇತಿಹಾಸದಲ್ಲಿ ಎಲ್ಲಾ ಕಾಲಕ್ಕೂ ಒಂದೇ ಎಂಬುದು ಸ್ಪಷ್ಟವಾಗುತ್ತದೆ” (ಮೈ.ಸಂ. ನಾಲ್ಕು ನಾಟಕಗಳು, ಲಿಂಗದೇವರು ಹಳೇಮನೆ, ಪು. ೩೪೦) ಕ್ರಾಂತಿ ಒಂದೆಡೆ

ನಡೆಯುತ್ತಿದ್ದಂತೆ ಅದನ್ನು ದಿಕ್ಕು ತಪ್ಪಿಸುವ, ನಾಶಮಾಡುವ ಎಲ್ಲಾ ಸಾಧ್ಯತೆಗಳು ಸದಾ ಕಾಲ ನಡೆದೇ ನಡೆದು ಈ ಸಂದರ್ಭದಲ್ಲಿ ಜಾತಿ ವೈಷಮ್ಯವು, ಜಾತಿ ರಾಜಕಾರಣವು ಸಮಯ ಸಾಧಿಸಿ ತನ್ನ ಕೆಲಸ ಸಾಧಿಸಿಕೊಳ್ಳುತ್ತದೆ.

ಕಾರ್ಲ್‌ಮಾರ್ಕ್ಸ್ 'ಎಲ್ಲಾ ಬಗೆಯ ವರ್ಗ ಸಂಘರ್ಷಗಳು ರಾಜಕೀಯ ಸಂಘರ್ಷಗಳೇ' ಎಂದು ಅಭಿಪ್ರಾಯಪಡುತ್ತಾನೆ. ಇದರ ಸುಳುಹುಗಳನ್ನು ಹಳೆಮನೆಯವರ 'ಅಂತೆಂಬರ ಗಂಡ' ನಾಟಕದಲ್ಲಿ ಕಾಣಬಹುದಾಗಿದೆ. ಸಂಸರ ನಾಟಕಗಳ ಅಧ್ಯಯನದಿಂದ ಪ್ರೇರಿತರಾಗಿ 'ಅಂತೆಂಬರ ಗಂಡ' ರಚಿಸಿರುವ ಹಳೆಮನೆಯವರು 'ಗಂಡಭೇರುಂಡ' ಪ್ರತಿಮೆಯ ಮೂಲಕ, ರಣಧೀರರ ಕುಟಿಲ ತಂತ್ರಗಳನ್ನು ಜೊತೆಗೆ ನಿರೀಶ, ನಿರೀಶನ ತಂದೆಯ ಚಾಣಾಕ್ಷತನ ಅವನತಿಯಾಗುವುದನ್ನು 'ಅಂತೆಂಬರಗಂಡ' ನಾಟಕದಲ್ಲಿ ನೋಡಬಹುದು. ಈ ನಾಟಕದ ಆರಂಭವೇ ವಿಶೇಷವಾದದ್ದು. ನಾಟಕ ಪಾತ್ರಧಾರಿಗಳ ಮೂಲಕ ರಣಧೀರನ ಕತೆಯನ್ನು ಪ್ರಸ್ತುತಪಡಿಸುವುದಾಗಿ ಹೇಳುತ್ತಾ ಕನ್ನಡ ಸಿನಿಮಾ 'ರಣಧೀರ' ತಾನಲ್ಲ ಎಂದು ರಾಜ ರಣಧೀರ ಪಾತ್ರಧಾರಿ ಹೇಳುವ ಮೂಲಕ ಮೈಸೂರಿನ 'ಇಂತೆಂಬರ ಗಂಡ' ಬಿರುದಾಂಕಿತ ರಣಧೀರನ ಕತೆ ಎಂಬುದು ತಿಳಿಯುತ್ತದೆ. 'ಅಂತೆಂಬರ ಗಂಡ' ಒಂದು ಐತಿಹಾಸಿಕ ನಾಟಕ, ರಣಧೀರನ ತಂದೆ ಬೆಟ್ಟದ ಚಾಮರಾಜ ಒಡೆಯ ಮೈಸೂರಿನ ಅರಮನೆಯ ಗೋಜಲುಗಳು ಬೇಡವೆಂದು ತೆರಕಣಾಂಬಿಯಲ್ಲಿ ನೆಲೆಸಿದ್ದರು. ಕಂಠೀರವ ನರಸರಾಜ ಒಡೆಯರು ಎಂದೇ ಕರೆಸಿಕೊಂಡಿರುವ ರಣಧೀರನಿಗೆ ಮೊದಲಿನಿಂದಲೂ ಕುಸ್ತಿಯಾಟ, ಮಲ್ಲ ವಿದ್ಯೆಯಲ್ಲಿ ಆಸಕ್ತಿ ಜಾಸ್ತಿ, ಎಲ್ಲೇ ಕುಸ್ತಿ ಪಂದ್ಯವಾಗುತ್ತಿರಲಿ ಅಲ್ಲಿಗೆ ನಡೆದುಬಿಡುವ 'ನರಸರಾಜ'ನು ಒಮ್ಮೆ ತಿರುಚಿನಾಪಳ್ಳಿಗೆ ಹೋಗಿ ಕೊಂಗರ ಮಲ್ಲ ಜೆಟ್ಟಿಯನ್ನು ಮಣಿಸುವ ಸಂದರ್ಭದಲ್ಲಿ ಪಟ್ಟಾಕತ್ತಿಯನ್ನು ಸೊಂಟ ಪಟ್ಟಿಯಾಗಿಟ್ಟುಕೊಂಡು ಯಾರಿಗೂ ಅರಿಯದಂತೆ ಜಟ್ಟಿಯನ್ನು ಕೊಂದ ವಿಷಯದಿಂದ ತಿರುಮಲನಾಯಕ ಸೇಡು ತೀರಿಸಿಕೊಳ್ಳಲು ಬರುವ ವಿಷಯ ಅರಿತ ಶಾಸ್ತ್ರೀ ನರಸರಾಜನನ್ನು ಅವರಿಂದ ರಕ್ಷಿಸಲು "ರಾಜ್ಯ ಶಕ್ತಿಯನ್ನು ಎದುರಿಸಲು ರಾಜ್ಯ ಶಕ್ತಿಯೇ ಬೇಕಾಗುತ್ತದೆ" (ಮೈ.ಸಂ. ನಾಲ್ಕು ನಾಟಕಗಳು, ಪು. ೮೮) ಎಂದು ಭಾವಿಸಿ ನರಸರಾಜನಿಗೆ ಮೈಸೂರು ಸಂಸ್ಥಾನದಲ್ಲಿನ ಪಟ್ಟ ಪಡೆಯಲು ಅನೇಕ ತಂತ್ರಗಳನ್ನು ಹೂಡುತ್ತಾನೆ. ಸದಾಕಾಲ ಶೃಂಗಾರ

ವಿಲಾಸದಲ್ಲಿ ಕಾಲ ಕಳೆಯುವ ಪುಟ್ಟಸ್ವಾಮಿ ಇಮ್ಮಡಿ ರಾಜ ಒಡೆಯನನ್ನು ಮುಗಿಸಿ ಆ ಜಾಗಕ್ಕೆ ನರಸರಾಜ ರಣಧೀರನನ್ನು ಕರೆತರುವ ಸಾಹಸಕ್ಕೆ ತಂತ್ರರೂಪಿಸಿಅವಸಾನವೇ ಅಧಿಕಾರ ಪಡೆಯುವ ದಾರಿ ಎಂದಾಗ ನರಸರಾಜನಿಗೆ ಇದು ಸಹ್ಯವಾಗವುದಿಲ್ಲ, "ಕೊಲೆಯಿಂದ ಚಿಮ್ಮುವ ರಕ್ತದ ಚಿತ್ತಾರದ ಮೇಲೆ ಕೂರುವ ಆಸೆ ನನಗಿಲ್ಲ" ಎನ್ನುತ್ತಾನೆ. ಆದರೆ ವಿಶ್ವೇಶ್ವರ ಶಾಸ್ತ್ರಿ "ಸೌಮ್ಯವಾಗಿ ಅಧಿಕಾರ ಹಸ್ತಾಂತರವಾಗದು ನರಸ. ಅಧಿಕಾರವೆಂಬುದು ಹಿಂಸೆಯ ಒಳಗರ್ಭದಿಂದಲೇ ಮೂಡಿಬರುತ್ತದೆ" (ಮೈ.ಸಂ. ನಾಲ್ಕು ನಾಟಕಗಳು, ಪು. ೧೪೬) ಎಂದು ಹಿತೋಪದೇಶ ಮಾಡಿ ಮುಂದೆ ಪುಟ್ಟಸ್ವಾಮಿಯ ಅವಸಾನಕ್ಕೆ ಕಾರಣೀಭೂತನಾಗುತ್ತಾನೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರ 'ಕಾಕನಕೋಟೆ' ನಾಟಕದಲ್ಲಿಯೂ ರಣಧೀರ ಕಂಠೀರವನ ಶೃಂಗಾರ ಪ್ರಿಯತೆಯನ್ನು, ಮಲ್ಲಯುದ್ಧದ ಆಸಕ್ತಿಯನ್ನು ಕುರಿತು ಮಾಹಿತಿ ಇದೆ. ಪುಂಡರಿಬ್ಬರು ಜಗಳ ಮಾಡಿಕೊಂಡರೆ ನಮ್ಮ ರಾಜ ಅಲ್ಲಿ ಪ್ರತ್ಯಕ್ಷ ಎಂಬ ವ್ಯಂಗ್ಯದ ಮಾತಿನಲ್ಲಿ ಕುಸ್ತಿಪಂದ್ಯದ ಬಗೆಗಿನ ರಾಜನ ವ್ಯಾಮೋಹದ ಅತಿರೇಕತೆಯನ್ನು ಗುರುತಿಸಬಹುದು.

ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಒಬ್ಬ ರಾಜನ ಅಧಿಕಾರಕ್ಕಾಗಿ ಮತ್ತೊಬ್ಬ ರಾಜನ ಕೊಲೆ, ಅವನತಿಯನ್ನು ಕುತಂತ್ರದಿಂದಲೇ ನಡೆಸಿರುವುದು 'ಅಂತೆಂಬರ ಗಂಡ' ನಾಟಕದಲ್ಲಿ ಉಲ್ಲೇಖಿತವಾಗಿದೆ. ಪುಟ್ಟಸ್ವಾಮಿಯ ಅವನತಿಗೆ ವಿಕ್ರಮ ದುಡ್ಡು ಹಾಕಿ ವೇದಿಕೆ ರೂಪಿಸಿದರೆ, ವಿಕ್ರಮನ ಮರಣದ ಮೇಲೆ ನರಸನ ಪಟ್ಟಾಭಿಷೇಕ ನಡೆಯುವ ಪರಿ ರಕ್ತ ಸಿಕ್ತ ಇತಿಹಾಸಕ್ಕೆ ಸಾಕ್ಷಿಯಾಗಿದೆ.

ಮೈಸೂರಿನ ರಾಜವಂಶದವರ ಚಿಹ್ನೆಯಾದ ಗಂಡಭೇರುಂಡದ ಮೂಲಕ ನಾಟಕದ ಕಥೆಯು ಮುಂದುವರೆಯುತ್ತದೆ. ನೋಡಲು ನರಸರಾಜನಂತೆಯೇ ಇರುವ ನಿರೀಶ ರಣಧೀರನ ನೆರಳೇ ಆಗಿ ದೇಹ ಒಂದು ಪ್ರಾಣವೆರಡರಂತಾಗಿ ಸದಾ ರಣಧೀರನ ರಕ್ಷಣೆ ನಿಂತಿರುತ್ತಾನೆ. ಆದರೆ ರಾಜನಿಗೆ ಮುಂದೆ ಅವನ ಮೇಲೆ ಸಂಶಯ ಮೂಡಿ ನಿರೀಶನನ್ನು ರಣಧೀರ ಬಂಧಿಸುತ್ತಾನೆ.

ಹಿಂದೆ ಇತಿಹಾಸದ ಪುಟದಲ್ಲಿ ರಾಜ, ಮಹಾರಾಜರುಗಳು ಶತ್ರುಗಳನ್ನು ಸಂಹರಿಸಲು ಸುಂದರ ಹೆಣ್ಣುಗಳನ್ನು ಬಳಸುತ್ತಿದ್ದರು. ವಿಷಕನ್ಯೆಯರಾಗಿಯೋ ಅಥವಾ

ರಾಜನನ್ನು ಮುಗಿಸಲು ವ್ಯೂಹ ರಚಿಸುವ ಸಲುವಾಗಿಯೋ ಸುಂದರಿಯರ ಬಳಕೆ ನಡೆಯುತ್ತಿತ್ತು. ಅಂಥದ್ದೇ ಒಂದು ಸಂದರ್ಭ ರಣಧೀರನಿಗೆ ಎದುರಾಗುತ್ತವೆ. 'ದೊಡ್ಡಿ, ದೊಡ್ಡಮ್ಮ, ದೊಡ್ಡದೇವಿ' ಎಂದು ಕರೆಸಿಕೊಳ್ಳುತ್ತಿದ್ದ ಹೆಣ್ಣೊಬ್ಬಳು ಕೊಂಗ ಕರುವಿಯನ್‌ನ ಆಣತಿಯಂತೆ ರಣಧೀರನನ್ನು ಒಲಿಸಿಕೊಳ್ಳಲು ಹೋಗಿ ತಾನೇ ಅವನ ಶೌರ್ಯ, ಸೌಂದರ್ಯಕ್ಕೆ ಮಾರುಹೋಗಿ ತಾನು ಬಂದ ಕಾರ್ಯವನ್ನೇ ಮರೆಯುತ್ತಾಳೆ. ಅದರ ಫಲವಾಗಿ ಜಗಜಟ್ಟಿಯ ತಮ್ಮ ಶೆಂದಲ್ಯೆ ಮಲ್ಲನ ಕೋಪಕ್ಕೆ ಗುರಿಯಾಗಿ ಕಠಾರಿ ಇರಿತಕ್ಕೆ ಒಳಗಾಗಿ ಸಾಯುತ್ತಾಳೆ. ಸಾಯುವ ಮುಂಚೆ ರಣಧೀರನಿಂದ ಮಾತೊಂದನ್ನು ಪಡೆಯುತ್ತಾಳೆ.

"ನಾನಂತೂ ನಿಮ್ಮ ಪಟ್ಟದರಸಿಯಾಗಲಾರೆ. ಇತಿಹಾಸದಲ್ಲಿ ಉಳಿಯಲಾರೆ, ನಾನು ಬಡ ಕುಟುಂಬದಿಂದ ಬಂದವಳು. ಬಡವರ ಕಷ್ಟ ಸುಖ ತಿಳಿದವಳು. ಈ ರಾಜ್ಯದಲ್ಲಿ ಬಡವರು ಬರಗಾಲದಿಂದ ಬೇಸತ್ತಿದ್ದಾರೆ, ಬಸವಳಿದಿದ್ದಾರೆ. ನನ್ನ ಹೆಸರಿನಲ್ಲಿ ಒಂದು ಕಾಲುವೆ ಕಟ್ಟಿಸಿ ಕಾವೇರಿ ನೀರನ್ನು ಅದರಲ್ಲಿ ಹರಿಸಿ, ಅವರ ಬಾಳಿಗೆ ದಾರಿ ಮಾಡಿಕೊಡಿ. ಇಷ್ಟೇ ನಾನು ಬೇಡುವುದು. ಜನ ಬಂಗಾರದೊಡ್ಡಿ ನಾಲೆ ಅಂತಾದರೂ ನನ್ನ ಹೆಸರು ಜ್ಞಾಪಿಸಿಕೊಳ್ಳಲಿ" (ಮೈ.ಸಂ. ನಾಲ್ಕು ನಾಟಕಗಳು, ಪು. ೧೫೦) ಎಂದು ಹೇಳಿ ಪ್ರಾಣಬಿಡುತ್ತಾಳೆ.

ಶೆಂದಲ್ಯೆಮಲ್ಲ ಈ ಸಂದರ್ಭದಲ್ಲಿ ನಿರೀಶನಿಂದಲೇ ತಾನಿಂದು ಇವರುಗಳನ್ನು ಪತ್ತೆಹಚ್ಚಲು ಸಾಧ್ಯವಾಯಿತೆಂದು ಸುಳ್ಳು, ಸುದ್ದಿ ಹೇಳಿ ರಣಧೀರನ ಕೆಂಗಣ್ಣಿಗೆ ನಿರೀಶ ಗುರಿಯಾಗುವಂತೆ ಮಾಡುತ್ತಾನೆ.

'ಅಂತೆಂಬರ ಗಂಡ' ಬಿರುದಾಂಕಿತ ರಣಧೀರನ ವಿಷಯ ಲೋಲುಪತೆ ಜೊತೆಗೆ, ರಣಧೀರನಿಗಿದ್ದ ಮಲ್ಲವಿದ್ಯೆಯ ಬಗೆಗಿನ ಅಪಾರ ಒಲವು, ಹತ್ತಿರದವರನ್ನೇ ಮುಗಿಸಿ ಅಧಿಕಾರದಲ್ಲಿ ಮುಂದುವರಿಯುವ ಇತಿಹಾಸವನ್ನು 'ಅಂತೆಂಬರ ಗಂಡ' ನಾಟಕ ಕಟ್ಟಿಕೊಡುತ್ತದೆ. ಎಪಿಕ್ ರಂಗಭೂಮಿಯ ತಂತ್ರ ಅರಿತಿರುವ ಹಳೇಮನೆಯವರು ವೃತ್ತಿಪರ ಕಂಪನಿ ನಾಟಕಗಳ ಶೃಂಗಾರ ಹಾಡನ್ನು ಹೊಸದಾಗಿ ಬಳಸಿಕೊಂಡಿದ್ದಾರೆ. ಗಂಡಭೇರುಂಡ ತಂತ್ರದ ಮುಖೇನ ಸಾಗುವ ನಾಟಕದಲ್ಲಿ ಒಂದೆಡೆ ಕತ್ತಲು, ಒಂದೆಡೆ ಬೆಳಕನ್ನು ತೋರಿಸುತ್ತದೆ.

ಮತ್ತೊಂದು ಇತಿಹಾಸದಲ್ಲಿ ಮತ್ತೆ ಮತ್ತೆ ನೆನೆಪಿಸಿಕೊಳ್ಳುವ ಪ್ರಸಂಗವೆಂದರೆ ಅಲಮೇಲಮ್ಮನ 'ಶಾಪ' ಪ್ರಕರಣ. 'ಶಾಪ' ಎಂಬ ಹೆಸರಿನಿಂದಲೇ ಕರೆಸಿಕೊಳ್ಳುವ ಈ ನಾಟಕದಲ್ಲಿ ಸ್ವತಃ ನಾಟಕಕಾರರೇ ಹೇಳಿಕೊಳ್ಳುವಂತೆ "ಮೈಸೂರಿನ ರಾಜಮನೆತನದ ಇತಿಹಾಸದಲ್ಲಿ ಅಲಮೇಲಮ್ಮನ 'ಶಾಪ' ವಿಚಿತ್ರ ಕುತೂಹಲಕ್ಕೆ ಎಡೆಮಾಡಿಕೊಟ್ಟಿವೆ. ಒಂದು ಐತಿಹ್ಯದಂತೆ ಕಾಣುವ ಈ ಘಟನೆ ನಿಜವಾಗುತ್ತಿರುವ ಆಕಸ್ಮಿಕದಿಂದಾಗಿ ಇಂದಿಗೂ ಜನರ ಕುತೂಹಲಕ್ಕೆ ಕಾರಣವಾಗಿದೆ"(ಮೈ.ಸಂ. ನಾಲ್ಕು ನಾಟಕಗಳು, ಪು. ೩೪೯) ಎಂದಿದ್ದಾರೆ.

ಬಹುರೂಪ ಧರಿಸಿ ನಟಿಸುವ ವೇಷಗಾರರ ಸಂಭಾಷಣೆಯೊಂದಿಗೆ ಆರಂಭವಾಗುವ ಈ ಶಾಪ 'ನಾಟಕವು' ಆಧುನಿಕ ಪಾತ್ರಗಳ ಉಲ್ಲೇಖದೊಂದಿಗೆ ಆರಂಭವಾಗಿರುತ್ತದೆ. ಇಲ್ಲಿ ಬರುವ ನಾಟಕದ ಮುಖಂಡ ಶಾಂತಯ್ಯ "ಭೂತ, ವರ್ತಮಾನ; ಇತಿಹಾಸ, ಪುರಾಣ, ನಂಬಿಕೆ, ವಾಸ್ತವ ಇವುಗಳ ಕಲಸು ಮೇಲೋಗರದಲ್ಲೆ ಹೊಸನಾಟಕ ಕಟ್ತೀವಿ" ಎಂಬ ಸಾಲಿನಿಂದ ಆರಂಭವಾಗುವ ಈ ನಾಟಕ ಜನಪದ ನಂಬಿಕೆಯೊಂದರ ತಳಹದಿಯ ಮೇಲೆ ನಿಂತಿರುವ ಇತಿಹಾಸದ ಘಟನೆಯನ್ನು ಸೇರಿಸಿ ರಚಿತವಾದ ಈ ನಾಟಕವು ಅತ್ಯಂತ ಸ್ಫುಟವಾಗಿ ಗೊಂದಲವಿಲ್ಲದೇ ಮನದಟ್ಟಾಗುತ್ತವೆ. ತಲಕಾಡು ಮರಳಾದ ಬಗೆ, ಮಾಲಂಗಿ ಸುಳಿ ಬರುವ ಮಡುವಾದ ಬಗ್ಗೆ ಇಲ್ಲಿ ಪೂರಕವಾದ ಕತೆಯೊಂದರ ವಿವರಣೆ ಇದೆ.

ಲಿಂಗದೇವರು ಹಳೆಮನೆಯವರಿಂದ ರಚಿತವಾದ ಮೈಸೂರು ರಾಜಮನೆತನ ಕುರಿತ ನಾಲ್ಕನೇ ನಾಟಕವಾದ 'ಶಾಪ' ನಾಟಕದ ಹಿಂದೆ ಒಂದು ಕುತೂಹಲಕಾರಿ ಐತಿಹ್ಯ ಇದೆ. ವಿಜಯನಗರ ಆಡಳಿತ ವ್ಯಾಪ್ತಿಗೆ ಸೇರಿದ ಶ್ರೀರಂಗಪಟ್ಟಣದಲ್ಲಿ ರಾಜಪ್ರತಿನಿಧಿ ಶ್ರೀರಂಗರಾಯ ಪತ್ನಿ ಅಲಮೇಲಮ್ಮ ವಾಸಿಸುತ್ತಿರುತ್ತಾರೆ. ವಿಜಯನಗರ ಅವನತಿಯ ನಂತರ ಅಲ್ಲಿನ ರತ್ನ ಸಿಂಹಾಸನ, ಅಪಾರ ನಗನಾಣ್ಯಗಳು ಅವರ ಬಳಿ ಇದ್ದ ಕಾರಣದಿಂದ ಮೈಸೂರಲ್ಲಿ ಹದಿನಾಡನ್ನು ನೋಡಿಕೊಳ್ಳುತ್ತಿದ್ದ ರಾಜ ಒಡೆಯರು ಮೋಸದಿಂದ ಶಾಂತಯ್ಯ ಎಂಬ ಬಹುರೂಪಿ ವೇಷಧಾರಿಯನ್ನು ಶ್ರೀರಂಗನಿಗೆ ಉಂಟಾಗಿರುವ ಬೆನ್ನುನೋವಿಗೆ ಮದ್ದು ಕೊಡುವ ನೆಪವೊಡ್ಡಿ ಅವನ ಬೆನ್ನುಹುಣ್ಣು ಮತ್ತಷ್ಟು ಹೆಚ್ಚಾಗಲು ಕಾರಣನಾಗುತ್ತಾನೆ. ಹೆಚ್ಚಿನ ಚಿಕಿತ್ಸೆಗೆ ತಲಕಾಡಿಗೆ ತೆರಳಿದರೆ ಅಲ್ಲಿ ಸಿಗುವ ಗಿಡಮೂಲಿಕೆಗಳಿಂದ ಬೆನ್ನಿನ ವ್ರಣ ವಾಸಿಯಾಗುತ್ತದೆಂದು ಅಲಮೇಲಮ್ಮನಿಗೆ

ಭರವಸೆ ನೀಡಿ ಕರೆದೊಯ್ದು ಅಲ್ಲಿ ಕೆಲ ದಿನ ಇದ್ದ ಶ್ರೀರಂಗ ನಂಜಿನ ಔಷಧದ ಕಾರಣದಿಂದ ಸಾವನ್ನಪ್ಪುತ್ತಾನೆ. ಗಂಡನ ಅವಸಾನದ ಸಂದರ್ಭದಲ್ಲಿ ಶ್ರೀರಂಗಪಟ್ಟಣದಿಂದ ವಿಜಯನಗರದಿಂದ ತಂದಿದ್ದ ಅಪಾರ ಚಿನ್ನಾಭರಣಗಳನ್ನು ಗಂಟುಕಟ್ಟಿಕೊಂಡು ತಲಕಾಡಿಗೆ ಬಂದವಳು ಅಲ್ಲಿ ಗಂಡನ ಶವ ಸಂಸ್ಕಾರವನ್ನು ನೋಡಲಾರದೆ ಕೆಲವು ಮುತ್ತೈದೆ ಶಾಸ್ತ್ರಗಳನ್ನು ನಡೆಸಿದವಳು, ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಹಸುಗಂದನನ್ನು ತಾನು ಹೆರಲಾರದ ಸಂಧಿಗ್ದ ಪರಿಸ್ತಿತಿಗೆ ತೊಳಲಾಡಿ ಹಿಂದೆ ಬೆನ್ನಟ್ಟಿ ಬರುತ್ತಿದ್ದ ಮೈಸೂರಿನ ರಾಜ ಒಡೆಯರ ಸೈನ್ಯವನ್ನು ಎದುರಿಸಲಾರದೆ, ಜೊತೆಗೆ ತನ್ನ ಮಾನ, ಪ್ರಾಣ ಉಳಿಯಲಾರೆಂಬ ಕಟುಸತ್ಯ ತಿಳಿದಿದ್ದವಳು ಬಾಗಿನದೊಂದಿಗೆ, ಆಭರಣಗಳೊಂದಿಗೆ ಮಾಲಂಗಿ ದಡದಲ್ಲಿ ನಿಂತು ಬೇಗುದಿಯಿಂದ 'ತಲಕಾಡು ಮರಳಾಗಿ ಮಾಲಂಗಿ ಮಡುವಾಗಿ ಮೈಸೂರು ಒಡೆಯರಿಗೆ ಮಕ್ಕಳಾಗದಿರಲಿ' ಎಂದು ಅಲಮೇಲಮ್ಮ ಶಪಿಸುತ್ತಾಳೆ. ಕಿರಾತ ಕಾಡ ಆಗ ತಾಯಿ ತಲಕಾಡು, ಮಾಲಂಗಿ ನಾವು ಬದುಕಿ ಬಾಳಿದ ತಾಣಗಳೆಂದಾಗ ಅಲಮೇಲಮ್ಮ ವಿಷಾದದಿಂದ "ಇನ್ನೆಲ್ಲಿ ಬದುಕು ನಿಮಗಿಲ್ಲಿ? ಬರುವ ಶತ್ರು ಪಡೆಗಳು ಕೊಂದು ಕೂಗುವ ಮುನ್ನ ಹೊರಡಿ ಇಲ್ಲಿಂದ. ದೈವ ಭರವಸೆ ಇಲ್ಲವಾಯ್ತು. ವೇದೇಶ್ವರ ಕೈಬಿಟ್ಟ, ಕಾಪಾಡಲಿಲ್ಲ ತಲಕಾಡ ಅಮ್ಮ. ಈಗಿರುವುದೊಂದೆ ದಾರಿ ಮಾಲಂಗಿಯೊಳಗೆ ಹೋಗುವುದು. ಹೊರಡಿ ಇನ್ನು. ಅದೋ ಸೈನ್ಯ ಕಾಣುತ್ತಿದೆ. ಓಡಿ ಬೇಗ, ಕುಂಕುಮ ಭೂಮಿ ರಕ್ತ ಭೂಮಿಯಾಗುವ ಮುನ್ನ"(ಮೈ.ಸಂ. ನಾಲ್ಕು ನಾಟಕಗಳು, ಪು. ೨೦೪) ಎಂದು ಮಾಲಂಗಿ ಮಡುವಿಗೆ ನೆಗೆದು ಪ್ರಾಣ ಕಳೆದುಕೊಳ್ಳುತ್ತಾಳೆ.

'ಶಾಪ' ಎಂಬ ಕತೆಯಲ್ಲಿ ಅಲಮೇಲಮ್ಮಳ ಶಾಪವೇ ಮುಖ್ಯ ನಾಟಕದ ಕಥಾವಸ್ತುವಾಗಿದ್ದು, ತಲ ಮತ್ತು ಕಾಡ ಎಂಬ ಬೇಡರ ಬಗ್ಗೆಯೂ ಮಾಹಿತಿ ಇದೆ. ತಲ ಮತ್ತು ಕಾಡ ಎಂಬ ಇಬ್ಬರು ಬೇಡ ಪಂಗಡಕ್ಕೆ ಸೇರಿದವರು. ಒಮ್ಮೆ ಮರ ಕಡಿಯಲು ಹೊರಟ ಸಂದರ್ಭದಲ್ಲಿ ಮರವೊಂದರ ಮುಂದೆ ಕಾಡಾನೆಗಳು ಪೂಜೆಮಾಡುತ್ತಾ ನಿಂತಿರುವುದು ಕಂಡುಬಂದು, ಹತ್ತಿರ ಹೋಗಿ ನೋಡಿದರೆ ಅಲ್ಲೊಂದು ವಿಷ್ಣುವಿನ ವಿಗ್ರಹವಿರುತ್ತದೆ. ನೋಡ ನೋಡುತ್ತಿದ್ದಂತೆ ಆ ಆನೆಗಳು ಋಷಿಗಳಾಗಿ ಮಾರ್ಪಾಡಾಗುವುದನ್ನು ಕಂಡು ಇದನ್ನು ಕಂಡ ಆ ಬೇಡ ಪಂಗಡದ ಸಹೋದರರು ಆ ಮರವನ್ನೇ ಪೂಜಿಸತೊಡಗುತ್ತಾರೆ. ಆ ದಿನದಿಂದ ಆ ಊರಿಗೆ

'ತಲಕಾಡು' ಎಂಬ ಊರು ಬಂದಿತು ಎಂಬ ಕಥೆಯನ್ನು ಇತಿಹಾಸದಲ್ಲಿ ಕಾಣಬಹುದು.

'ಶಾಪ' ಕತೆಯೂ ಸಹ ಒಳ ಪಿತೂರಿಗಳ ತಂತ್ರ ಕುತಂತ್ರಗಳ ಕರಾಳ ಕತೆಯನ್ನು ಹೇಳುತ್ತದೆ. ವಿಜಯನಗರದ ಕೊನೆಯ ವಂಶದ ಕುಡಿ ರಾಜುಗೌಡರ ಚಿತಾವಣೆ, ಕುಟಿಲ ನೀತಿಯಿಂದ ಗರ್ಭಿಣಿ ಮುತ್ತೈದೆ ಅಸುನೀಗಬೇಕಾಗುತ್ತದೆ. ರಾಜುಗೌಡನು ಹಣ, ಒಡವೆಯ ದುರಾಸೆಗೆ ಹಿಂಸಾಮಾರ್ಗ ಅನುಸರಿಸುತ್ತಾನೆ. ಶ್ರೀರಂಗಪಟ್ಟಣ ಬಿಟ್ಟು ಹೊರಟ ಅಲಮೇಲಮ್ಮ ಇದ್ದ ಒಡವೆಗಳನ್ನೆಲ್ಲ ಸಾಗಿಸಿಕೊಂಡು ಹೋದಾಗ ಇದನ್ನು ಅರಿಯದ ರಾಜ ಒಡೆಯರ ದಂಡನಾಯಕ ಸೈನಿಕರಿಗೆ ಹೀಗೆ ಸೂಚಿಸುತ್ತಾನೆ; "ಹುಡುಕಿ ಶ್ರೀರಂಗನಾತನ ಅರ್ಚಕನನ್ನು ಕೇಳಿ ಹೇಳದಿದ್ದರೆ ಚರ್ಮ ಸುಲೀರಿ. ಅರಮನೆ ಹುಡುಕಿ, ಸಿಗದಿದ್ದರೆ ಗೋಡೆ ಅಗೀರಿ. ಅನುಮಾನ ಬಂದವರನ್ನು ಕಂಬಕ್ಕೆ ಬಡೀರಿ, ಉಸುರ್ತಾರೆ"(ಮೈ.ಸಂ. ನಾಲ್ಕು ನಾಟಕಗಳು, ಪು. ೧೯೪) ಎಂದು ಆದೇಶಿಸುವಲ್ಲಿ ಕಷ್ಟದಲ್ಲಿರುವವರ ಬಳಿ ಸಮಯ ಸಾಧಿಸಿ ಲೂಟಿ ಹೊಡೆಯುವವರ ಸ್ವಾರ್ಥತೆಯನ್ನು ಇದು ಬಿಂಬಿಸುತ್ತದೆ.

ಮೈಸೂರು ಸಂಸ್ಥಾನದ ಚುಕ್ಕಾಣಿ ಹಿಡಿಯುವುದಕ್ಕಾಗಿ ಒಬ್ಬರು ಮತ್ತೊಬ್ಬರ ಕಾಲೆಳೆಯುವ ಸಂಪ್ರದಾಯವನ್ನು 'ಹೈದರ್' ನಾಟಕದಲ್ಲಿಯೂ ಗಮನಿಸಬಹುದು. ಇಲ್ಲಿ ಅನಕ್ಷರಸ್ಥನಾಗಿದ್ದು ಸಾಮಾನ್ಯ ಸೈನಿಕನಾದ ವ್ಯಕ್ತಿ ನವಾಬನಾಗಿ ರೂಪುಗೊಂಡ ಬಗ್ಗೆ ಅತ್ಯದ್ಬುತ. ಅಂದು ಬ್ರಿಟಿಷರಿಂದ ಮಣ್ಣು ಮುಕ್ಕಿಸಿಕೊಳ್ಳುತ್ತಿದ್ದವರೇ ಹೆಚ್ಚು. ಅಂಥ ಸನ್ನಿವೇಶದಲ್ಲಿ ಬ್ರಿಟಿಷರನ್ನು ಸೋಲಿಸಿ ಮದ್ರಾಸ್ ಕರಾರುಪತ್ರವನ್ನು ತನಗಿಷ್ಟ ಬಂದಂತೆ ಬರೆಯಿಸಿಕೊಂಡ ಈತನ ರಾಜಕೀಯ ದಾಳ, ತಂತ್ರ ಬೆರುಗು ಹುಟ್ಟಿಸುವಂಥದ್ದು. ಅಕ್ಷರಸ್ಥರ ಬಗ್ಗೆ ಸ್ವಲ್ಪ ಹೆದರುವ ಈತ ಒಬ್ಬರ ಬಳಿ ಬರೆಯಿಸಿ ಮತ್ತೊಬ್ಬರ ಬಳಿ ಓದಿಸಿ ಪರೀಕ್ಷಿಸುತ್ತಿದ್ದ ಶೈಲಿ ಶ್ಲಾಘನೀಯವಾದದ್ದು. ಹೈದರ್‌ನ ತಂದೆ, ಚಿಕ್ಕಪ್ಪ ಕೂಡ ಸೈನಿಕರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಒಮ್ಮೆ ಸರ್ವಾಧಿಕಾರಿಗಳು ದೇವನಹಳ್ಳಿಗೆ ಬಂದ ಸಂದರ್ಭದಲ್ಲಿ ಹೈದರ್‌ನು ಬಹಳ ವಾಯುವೇಗದಲ್ಲಿ ಕುದುರೆ ಓಡಿಸುವುದನ್ನು ಕಂಡು ಮೈಸೂರಿನ ನಂಜರಾಜಯ್ಯ "ಇಂಥ ಹುಡುಗ ನಮ್ಮ ನದರಿನಲ್ಲಿ ಬೆಳೀಬೇಕು. ಇಟ್ಟ ಗುರಿ ತಪ್ಪುವುದಿಲ್ಲ. ಏರಿದ ಕುದುರೆ ನಿಲ್ಲುವುದಿಲ್ಲ. ಇಂಥವರು ರಾಜಧಾನಿಯಲ್ಲಿ ಇರಬೇಕು" (ಮೈ.ಸಂ. ನಾಲ್ಕು ನಾಟಕಗಳು, ಪು. ೨೨೦) ಎಂದು ಹೈದರ್‌ನನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಳ್ಳುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ಕೃಷ್ಣರಾಜ ನೆಪಮಾತ್ರಕ್ಕೆ ಸಿಂಹಾಸನಾಧೀಶ್ವರನಾಗಿದ್ದು, ಆತನ ಮಾವ ನಂಜರಾಜಯ್ಯ, ದೊಡ್ಡಪ್ಪ ದೇವರಾಜಯ್ಯರ ಬಳಿ ಅಧಿಕಾರವಿರುತ್ತವೆ. ಸದಾ ಮದಿರೆ, ಸಂಗೀತ, ನಾಟ್ಯ ಒಂಬತ್ತು ಜನ ಬಂಗಾರದ ಸ್ತ್ರೀಯರು, ಮೂವರು ಪತ್ನಿಯರೊಂದಿಗೆ ಒಡನಾಡುತ್ತಾ ಕಾಲಕಳೆಯುವಂತೆ ಮಾಡಿರುತ್ತಾರೆ. ರಾಜ ಪ್ರಜೆಗಳ ಸಮಸ್ಯೆ ತಿಳಿದುಕೊಳ್ಳಲು ಬಿಡದೆ ಅವರನ್ನು ಅಕ್ಷರಶಃ ಗೃಹಬಂಧಿಯಾಗಿಸಿ ಅಧಿಕಾರ-ಗಳನ್ನು ಕಿತ್ತುಕೊಂಡು ನಲುಗಿಸುತ್ತಾರೆ. ಕೃಷ್ಣರಾಜನಿಗೆ ರಾಣಿ ಲಕ್ಷ್ಮಮ್ಮಣಿಯಿಂದ ರಾಜ್ಯದಲ್ಲಿ ನಡೆಯುತ್ತಿರುವ ಮರಾಠರ ಆಕ್ರಮಣ, ಜನಸಾಮಾನ್ಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಲೂಟಿ, ಕೊಲೆ, ಸೈನಿಕರ ದಂಗೆ ಸೈನಿಕರಿಗೆ ಸಂಬಳ-ವಿಲ್ಲದಂತಾಗಿ ಸಾಮಾನ್ಯ ಜನ ಕೈಗೆ ಸಿಕ್ಕಿದ್ದನ್ನು ಲೂಟಿ ಮಾಡುತ್ತಿರುವ ವಿಷಯ ತಿಳಿದು ರಾಜ ಹೌಹಾರುತ್ತಾನೆ. ಹೀಗಾಗಿ ಕೃಷ್ಣರಾಜ ಸಂಸ್ಥಾನ ಪರ್ಯಟನೆಗೆ ಹೊರಡುವ ಇರಾದೆ ವ್ಯಕ್ತಪಡಿಸುತ್ತಾನೆ. ಆಗ ಆತನ ಮಾವ ನಂಜರಾಜಯ್ಯ “ಧೂಳು, ಬಿಸಿಲುಗಳಲ್ಲಿ ನಲಗುವ ಮೈಯಲ್ಲ ಇದು ಒಡೆಯರೇ, ಚಿಕ್ಕಂದಿನಿಂದ ಈ ಸುಕುಮಾರ ಶರೀರವನ್ನು ಕೊಬ್ಬಿಸಿ ಬೆಳೆಸುವುದಕ್ಕೆ ನಿಮಗಿಂತ ನಾವು ಹೆಚ್ಚು ಶ್ರಮವಹಿಸಿದ್ದೇವೆ. ನಮಗೆ ನಿಮ್ಮ ಮೈ ಮತ್ತು ಮೈಸೂರು ಸಂಸ್ಥಾನ ಎರಡು ಎರಡು ಕಣ್ಣಿದ್ದಂತೆ. ಶ್ರೀರಂಗನಾಥನ ಕೃಪೆಯಿಂದ ನಿಮ್ಮ ಮೈಗೆ ಇನ್ನೂ ಗಂಡಾಂತರ ಬಂದಿಲ್ಲ, ಬರುವಂತೆ ವರ್ತಿಸಬೇಡಿ” (ಮೈ.ಸಂ. ನಾಲ್ಕು ನಾಟಕಗಳು, ಪು. ೨೨೫) ಎಂದು ಹೆದರಿಸಿ ಇನ್ನು ಮುಂದೆ ಕೃಷ್ಣರಾಜರನ್ನು ಯಾರೂ ಭೇಟಿ ಮಾಡದಂತೆ ಆಜ್ಞಾಪಿಸುತ್ತಾನೆ.

ಮೈಸೂರು ಸಂಸ್ಥಾನದಲ್ಲಿ ತುಂಬಾ ದಿನದಿಂದ ಸೈನಿಕರಿಗೆ ಸಂಬಳ, ಸವಲತ್ತು ನೀಡದ ಕಾರಣ ಸೈನಿಕರು ದಂಗೆ ಎದ್ದು ಲೂಟಿ, ಕೊಳ್ಳೆ ಹೊಡೆಯುತ್ತಾ ಸೈನಿಕರನ್ನು ಕಂಡರೆ ಹೆಂಗಸರು ಮಕ್ಕಳು ಹೆದರಿ ಅಡಗಿ ಕುಳಿತುಕೊಳ್ಳುವಂತಾಗುತ್ತದೆ. ವರ್ತಕರು ಅರಮನೆಗೆ ಸಾಲಕೊಟ್ಟು ಕೊಟ್ಟು ಸದ್ಯದ ಪರಿಸ್ಥಿತಿಯಲ್ಲಿ ಸಿಟ್ಟಾಗಿರುವ ಸಂದರ್ಭದಲ್ಲಿ ಹೈದರ್‌ನ ಪ್ರವೇಶವಾಗಿ ನಂಜರಾಜಯ್ಯನಿಗೆ ಸೂಕ್ತ ಸಲಹೆ, ಸಹಾಯ ನೀಡುತ್ತಾ ಒಬ್ಬ ಸೈನಿಕನಾದ ವ್ಯಕ್ತಿಯೊಬ್ಬ ನವಾಬನಾಗುವ ಮಟ್ಟಿಗೆ ಆತನ ಬೌದ್ಧಿಕ ಚಾಣಾಕ್ಷತನ, ಕಾರ್ಯತತ್ಪರತೆ, ಮಿಂಚಿನ ವೇಗದ ಆಲೋಚನೆ, ಯೋಜನೆಗಳು, ಸಂಸ್ಥಾನದ ಒಳರಾಜಕೀಯ ಕಿತ್ತಾಟದಿಂದ ಲಾಭಗಳಿಸಲು ಸಾಧ್ಯವಾಗುತ್ತದೆ.

ಇದೇ ಸಂದರ್ಭದಲ್ಲಿ ರಾಣಿ ಲಕ್ಷ್ಮಮ್ಮ ಸಂಸ್ಥಾನದ ಸ್ಥಿತಿಯನ್ನು ಕಂಡು ನೊಂದು ಮರಾಠರ ನೆರವಿನಿಂದ ಸರಿಪಡಿಸಿಕೊಂಡು ಪರಿಸ್ಥಿತಿ ನಿಯಂತ್ರಿಸಲು

ಇಚ್ಛಿಸುತ್ತಾಳೆ. ಆಗ ಖಂಡೇರಾಯ "ಅವರು ನಮ್ಮ ಶತ್ರುಗಳು" ಎಂದಾಗ ಲಕ್ಷ್ಮಮ್ಮಣ್ಣಿ "ರಾಜಕೀಯದಲ್ಲಿ ಶತ್ರುಗಳು ಯಾರು, 'ಮಿತ್ರರು ಯಾರು ವಕೀಲರೆ? ಸಮಯಕ್ಕೆ ತಕ್ಕಂತೆ ನಡೆಯುವುದನ್ನು ಕಲಿಯಬೇಕು. ಯಾರಿಗೆ ಗೊತ್ತು? ಮುಂದಿನ ಕೆಲವು ದಿನಗಳಲ್ಲಿ ಯಾರು ಬೀಳುತ್ತಾರೋ, ಯಾರು ಏಳುತ್ತಾರೊ?" (ಮೈ.ಸಂ. ನಾಲ್ಕು ನಾಟಕಗಳು, ಪು. ೨೩೮) ಎಂದು ಸಲಹೆ ನೀಡುತ್ತಾಳೆ.

ಇತ್ತ ಆರ್ಕಾಟ್ ನವಾಬ ಮಹಮ್ಮದ್ ಆಲಿಪರ ಯುದ್ಧ ನಡೆಸಲು ಹೈದರ್ ನೇತೃತ್ವದಲ್ಲಿ ಸೈನ್ಯ ಹೊರಟು, ಹೈದರ್ ಎರಡು ತಿಂಗಳು ತಿರುಚಿನಪಳ್ಳಿಯ ಹೊರ ಆವರಣದಲ್ಲಿ ಕಾದು ಅವರಿಗೆ ಆಹಾರ ಪದಾರ್ಥಗಳು ಒಳಗೆ ಹೋಗದಂತೆ ತಡೆದು "ವರ್ತುಲ ಕಾಳಗ"ದ ಮೂಲಕ ತಂತ್ರಹೂಡಿ, ಚಾಂದ್‌ಸಾಬ್‌ಗೆ ಸಹಾಯ ಮಾಡಲು ಬಂದವರಿಗೆ ಹಣ ನೀಡಿ ಹಿಂದಿರುಗುವಂತೆ ಮಾಡಿ ಹೈದರ್ ಜಯಪಡೆಯುತ್ತಾನೆ. ಹೀಗಾಗಿ ನಂಜರಾಜಯ್ಯನಿಂದ ಫೌಜುದಾರನಾಗಿ ನೇಮಕವಾಗುತ್ತಾನೆ.

ಖಂಡೇರಾಯ ಹೈದರ್‌ನ ಪರಾಕ್ರಮ ಕಂಡು ಹೈದರ್‌ನ ಸಹಾಯದಿಂದ ನಂಜರಾಜಯ್ಯ, ದಳವಾಯಿಗಳನ್ನು ನಿಗ್ರಹಿಸಲು ಯತ್ನಿಸುತ್ತಾನೆ. ಹೈದರ್‌ನಿಗೆ ದಿವಾನಗಿರಿ ಆಸೆಯನ್ನು ತೋರಿಸುತ್ತಾರೆ. ಕೆಲಸವಾಗುತ್ತಿದ್ದಂತೆ ಹೈದರ್‌ನನ್ನು ಚಿವುಟಿ ಹಾಕಲು ಯೋಜನೆ ರೂಪಿಸುತ್ತಾರೆ. ಆದರೆ ಯೋಜನೆ ಅರಿತ ಹೈದರ್ ಖಂಡೇರಾಯರನ್ನು ಮುಗಿಸಿ ರಾಜ, ರಾಣಿಗೆ ವರ್ಷಕ್ಕೆ ೩ ಲಕ್ಷ ಖರ್ಚಿಗೆ ನೀಡಿ ಪ್ರತಿ ವರ್ಷ ದಸರಾ ಸಂದರ್ಭದಲ್ಲಿ ಮಾತ್ರ ರಾಜನ ದರ್ಶನ ಪ್ರಜೆಗಳಿಗೆ ಎಂದು ನಿಗದಿಪಡಿಸುತ್ತಾನೆ. ಹೀಗೆ ವಿಶಿಷ್ಟ ತಂತ್ರಗಾರಿಕೆ, ಚಾಣಾಕ್ಷತನದಿಂದ ಅರಮನೆಯ ಹಿಡಿತ ಸಾಧಿಸಿ ಮದರಾಸಿನ ಬ್ರಿಟಿಷ್ ಸಂಸ್ಥಾನಕ್ಕೆ ಸವಾಲೊಡ್ಡಿ ನವಾಬನಾಗುತ್ತಾನೆ.

'ಹೈದರ್' ನಾಟಕದಲ್ಲಿ ಲಿಂಗದೇವರು ಹಳೆಮನೆಯವರು ಹೈದರ್‌ನ ಬುದ್ಧಿ ಮತ್ತೆಯ ಹಲವು ಇತಿಹಾಸದ ಘಟನೆಗಳನ್ನು ಸಮರ್ಪಕವಾಗಿ ಅಭಿವ್ಯಕ್ತಿಸಿದ್ದಾರೆ. ಅಕ್ಷರ ಸಂಸ್ಕೃತಿಯಿಂದ ಆಗುವ ಅನಾಹುತದ ಬಗ್ಗೆ ಹೆದರಿದ್ದ ಹೈದರ್ ಆ ಪತ್ರ ಸಂಸ್ಕೃತಿ ಮೂಲಕವೇ ಶತ್ರುಗಳೊಡನೆ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳುತ್ತ ಹೋಗುತ್ತಾನೆ.

ಚಿಕ್ಕದೇವಭೂಪ – ಮೈಸೂರು ಒಡೆಯರ ಕಾಲದಲ್ಲಿ ನಡೆದ ರೈತಬಂಡಾಯ ಇಲ್ಲಿಯ ವಸ್ತುವಾದರೂ ನಾಲ್ಕು ಅಂಶಗಳು ಇಲ್ಲಿ ಮುಖ್ಯವಾಗಿ ಕಂಡುಬರುತ್ತದೆ.

೧) ಚಿಕ್ಕದೇವರಾಜ ತನ್ನ ಕಾಲದಲ್ಲಿ ತನ್ನ ವಂಶದ ಮೂಲವನ್ನು ವೈಭವೀಕರಿಸಿ ಚರಿತ್ರೆ ಬರೆಸಿರುವುದು.

೨) ರಾಜ ಬೊಕ್ಕಸ ತುಂಬಿಸಲು ರೈತರ ಮೇಲೆ ವಿಚಿತ್ರ ತೆರಿಗೆ/ಸುಂಕಗಳನ್ನು ಹೇರಿದ್ದು ರೈತರು ಬಂಡೆದದ್ದು

೩) ವೀರಶೈವರು ತಮ್ಮ ಮತ ಬಂಡಾಯವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲು ಪ್ರಯತ್ನ

೪) ಚಿಕ್ಕದೇವರಾಜನ ಪ್ರಧಾನಿ "ವಿಶಾಲಾಕ್ಷ ಪಂಡಿತ"ನು ಕೊಲೆಯಾದದ್ದು.

ಚಿಕ್ಕದೇವರಾಜ ೧೬೭೨ರಲ್ಲಿ ಅಧಿಕಾರಕ್ಕೆ ಬಂದರು ಹಲವಾರು ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ೧) ದಂಗೆಗಳು ೨) ಶತ್ರುದಾಳಿ (೩) ವಂಶದ ಛಾಪು ಮೂಡಿಸುವುದು (೪) ಬೊಕ್ಕಸ ತುಂಬಿಸುವುದು. ಈ ಐತಿಹಾಸಿಕ ಹಿನ್ನೆಲೆಗಳಿಂದ ಇತಿಹಾಸ ನಾವು ನಡೆಸಿದ ತಪ್ಪುಗಳಿಂದ ಪುನರಾವರ್ತನೆಗೊಳ್ಳುತ್ತಲೇ ಇರುತ್ತವೆ. ಇವುಗಳನ್ನು ಈ ವಿಭಾಗದಲ್ಲಿ ವಿವರಿಸುತ್ತಿದ್ದೇನೆ.

ಅಧಿಕೃತ ಮೈಸೂರು ಸಂಸ್ಥಾನದ ಹಿನ್ನೆಲೆಯಲ್ಲಿ ಹಳೇಮನೆ ಲಿಂಗದೇವರು ಬರೆದ ೦೫ ನಾಟಕಗಳು ಮೈಸೂರು ರಾಜಮನೆತನ ಇತಿಹಾಸಕ್ಕೆ ಸಂಬಂಧಿಸಿದೆ. ಇತಿಹಾಸದ ದೃಷ್ಟಿಕೋನದಿ ಸಾಂಪ್ರದಾಯಿಕ ಭಾರತೀಯ ಮನಸ್ಸಿಗೆ ಹತ್ತಿರವಿದ್ದು, ಇತಿಹಾಸದ ನೆಲೆ–ಬೆಲೆಗಳು ಅರ್ಥೈಸಿಕೊಳ್ಳುವ ಕ್ರಮ ಬದಲಾಗಿದೆ.

ಹಿಂದಿನ ಜನಾಂಗದ ಅನುಭವಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಪ್ರಸ್ತುತ ಅನುಭವಕ್ಕೆ ರೂಪನೀಡಿ ಭವಿಷ್ಯ ನಿರ್ಮಿಸಿಕೊಳ್ಳುವುದೇ ಮಾನವನ ಶಕ್ತಿಕೇಂದ್ರ ಎಂದರೆ ತಪ್ಪಾಗಲಾರದು. ಇತಿಹಾಸ ಸದಾ ಚಲನಶೀಲವಾದುದು, ಪರಿವರ್ತನಶೀಲ–ವಾದುದಾಗಿದೆ. ಹಿಂದಿನದನ್ನು ಕಲ್ಪಿಸುವುದು ಮತ್ತು ಭವಿಷ್ಯವನ್ನು ನೆನೆವುದು ಮುಖ್ಯವಾಗಿದೆ.

ವ್ಯಕ್ತಿಯ ಹಿಂದಿನ ಚೈತನ್ಯ, ಸಮಾಜದ ತುಡಿತ, ಸಾಮಾಜಿಕವಾಗಿ ಹೆಚ್ಚು ಒತ್ತು ನೀಡಿದೆ.

(೧) 'ಚಿಕ್ಕದೇವಭೂಪ'ದಲ್ಲಿ ರೈತ ಬಂಡಾಯ

(೨) ಹೈದರ್ ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಶ್ರಮದಿಂದ ಮೇಲೆರುವ ಚಿತ್ರಣ

(೩) ಶಾಪ-ಹೆಣ್ಣಿನ ಶೋಷಣೆಯನ್ನು ಬಿಂಬಿಸುತ್ತದೆ.

(೪) ಅಂತೆಂಬರ ಗಂಡ – ಜನಮಾನಸದಲ್ಲಿ ಆದರ್ಶನಾಗಿರುವ ಗುಣನಿಧಿಗೆ ಮಹತ್ವ ನೀಡುತ್ತಾರೆ. ಅಧಿಕೃತ ಚರಿತ್ರೆಯಲ್ಲಿ ಮುಚ್ಚಿಹಾಕಿದ್ದ ವಾಕ್‌ಪರಂಪರೆ "ಐತಿಹ್ಯ" ರೈತಬಂಡಾಯವನ್ನು ನರಸ, ನಿರೀಶರು – ಗಂಡುಭೇರುಂಡರಾಗಿ ಕಥೆಗೆ ದೇಹ ಒಂದು ೨ ಮುಖದ ರೂಪದಿ – ವಿರುದ್ಧ ನಿಲುವುಗಳನ್ನು ಬಿಂಬಿಸಿ ಇತಿಹಾಸ ಪುಟದಿ "ಗಂಡು-ಭೇರುಂಡ" ಮೈಸೂರು ರಾಜರ ಲಾಂಛನವಾಗಿ ಐತಿಹಾಸಿಕ ಮಹತ್ವವನ್ನು ಸಾರುತ್ತದೆ.

ದೊಡ್ಡ ಪಟ್ಟದರಸಿಯಾಗಿ ಇತಿಹಾಸದಲ್ಲಿ ಉಳಿಯುವುದಕ್ಕಿಂತ ಬಡವಳಾಗಿ ಜನರ ಪಾಲಿಗೆ ನಾಲೆಯ ಮೂಲಕ ಇತಿಹಾಸದಲ್ಲಿ ಉಳಿದಳು. ನಾಲೆಯ ಮೂಲಕ ಇತಿಹಾಸದಲ್ಲಿ ಉಳಿದಳು.

ಒಂದು ಕಡೆ ಆದರ್ಶ ಮತ್ತೊಂದೆಡೆ ವಿಕೃತ ಒಂದು ಕಡೆ ಬೆಳಕು ಇನ್ನೊಂದು ಕಡೆ ಕತ್ತಲೆ ಇಂತಹ ವಿರುದ್ಧಗತಿಯನ್ನು ಗಂಡುಭೇರುಂಡ ಏಕಕಾಲದಲ್ಲಿ ಹಿಡಿದಿಡುತ್ತದೆ.

'ಶಾಪ'ವನ್ನು ಕುರಿತಂತೆ ಮೈಸೂರು ರಾಜಮನೆತನವನ್ನೇ ಹಿನ್ನೆಲೆಯಾಗಿಟ್ಟು ಹೆಣೆಯಲಾಗಿದೆ. ಮೈಸೂರು ರಾಜಮನೆತನದ ಇತಿಹಾಸದಲ್ಲಿ ಅಲಮೇಲಮ್ಮನ "ಶಾಪ" ವಿಚಿತ್ರ ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಅವುಗಳನ್ನು ಚರ್ಚಿಸಲಾಗುವುದು.

೨) ರಾಜಕೀಯ ಹಿನ್ನೆಲೆ

'ಶತ್ರುಗಳ ಶತ್ರು ನಮ್ಮ ಮಿತ್ರ' ಎಂಬ ಮಾತಿದೆ. ಅಧಿಕಾರ ಸೂತ್ರ ಹಿಡಿಯುವ ಆಸೆ ಮನುಷ್ಯನನ್ನು ಎಂಥ ಕ್ರೂರ ಕಾರ್ಯಕ್ಕೂ ಪ್ರೇರೇಪಿಸುತ್ತದೆ. ಅಧಿಕಾರದ ದಾಹದಿಂದ ಅಳಿಯ ಮಗ, ಮಗಳು, ಸಹೋದರ, ದೊಡ್ಡಪ್ಪ ಎಂಬ ಯಾವ ವಾಂಛೆಯೂ ಅವರಿಗೆ ಕಾಡದೆ ಗುರಿಯೊಂದನ್ನೇ ಸ್ವಾರ್ಥವೊಂದನ್ನು ಮುಂದಿಟ್ಟು-ಕೊಂಡು ಬದುಕುವವರನ್ನು ಕಂಡಾಗ ಮನುಷ್ಯನ ಕ್ರೌರ್ಯ, ಸ್ವಹಿತಾಸಕ್ತಿ ಚಿಂತನೆ ಹೇಸಿಗೆ ಉಂಟಾಗುತ್ತದೆ.

ಪ್ರಸ್ತುತ 'ಮೈಸೂರು ಸಂಸ್ಥಾನದ ನಾಲ್ಕು ನಾಟಕ'ಗಳಲ್ಲಿ ರಾಜಕೀಯದ ಬೃಹತ್ಸ್ವರೂಪವನ್ನು ಕಾಣಬಹುದು. ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ರಾಜಕಾರಣಿಗಳ ಕಾರ್ಯತತ್ಪರತೆ ಬಗ್ಗೆ ಸಾಮಾನ್ಯವಾಗಿ ರಾಜಕೀಯವೆನ್ನ-ಬಹುದಾದರೂ, ಇತ್ತೀಚೆಗೆ ರಾಜಕೀಯವೆನ್ನುವುದು ಅನಾವಶ್ಯಕ ಹಸ್ತಕ್ಷೇಪ, ಕ್ರಮವನ್ನು ಅತಿಕ್ರಮಿಸಿ ನಡೆಯುವುದು ನಿಯಮಬಾಹಿರ, ನಡವಳಿಕೆಗೆ ಸಂಬಂಧಿಸಿದಂತೆ ಈ 'ರಾಜಕೀಯ' ಪದಬಳಕೆಯಾಗುತ್ತಿದೆ.

ಒಂದು ಸಾಮ್ರಾಜ್ಯ ಉಗಮವಾಗುವುದರ ಕುರಿತಂತೆ ಲಿಂಗದೇವರುರವರು ರಚಿಸಿರುವ ಚಿಕ್ಕದೇವಭೂಪ ನಾಟಕದಲ್ಲಿನ ವಿಶಾಲಾಕ್ಷ ಪಂಡಿತನ ಪಾತ್ರ ಹೀಗೆ ಅಭಿಪ್ರಾಯಪಡುತ್ತದೆ. "ಹಿಂದಿನಿಂದ ನಡೆದದ್ದೇ ಹೀಗೆ. ಸಾಮ್ರಾಜ್ಯಗಳು ಮೇಲೆದ್ದು ನಿಂತದ್ದು ಬಡವರ ತೋಳಬಲದಿಂದ. ಪ್ರಜೆಗಳಿರುವುದಾದರೂ ಯಾತಕ್ಕಾಗಿ?" (ಮೈ.ಸಂ. ನಾಲ್ಕು ನಾಟಕಗಳು, ಪು. ೨೪) ಎಂದರೆ, ಚಿಕ್ಕದೇವರಾಜ ಅದಕ್ಕೆ ಪೂರಕವಾಗಿ "ಪ್ರಜೆಗಳಿರುವುದು ರಾಜರನ್ನು ಓಲೈಸುವುದಕ್ಕಾಗಿ, ಸಾಮ್ರಾಜ್ಯವನ್ನು ಕಟ್ಟುವುದಕ್ಕಾಗಿ (ಮೈ.ಸಂ. ನಾಲ್ಕು ನಾಟಕಗಳು, ಪು. ೨೪) ಎನ್ನುತ್ತಾನೆ. ಇವರುಗಳ ಅರ್ಥದಲ್ಲಿ ರಾಜಕಾರಣವೆಂದರೆ ಪ್ರಜೆಗಳ ತನುಮನಧನದಿಂದ ರಾಜರನ್ನು ಸಂತೃಪ್ತಗೊಳಿಸುವುದು, ಅದೇ ನಿಜವಾದ ಧರ್ಮ ಎಂದು ಅರ್ಥ. ಹಾಗಾಗಿ ಚಿಕ್ಕದೇವಭೂಪ ಬಡಪಾಯಿ ರೈತರುಗಳ ಮೇಲೆ ವಿಚಿತ್ರ ಬಗೆಯ ತೆರಿಗೆಗಳ ಭಾರ ಹಾಕಿ, ದಂಗೆ ಎದ್ದ ರೈತರನ್ನು ಕೊಂದು ಪ್ರಶ್ನಿಸದಂತೆ ಮಾಡುತ್ತಾನೆ. ಪ್ರಸ್ತುತ ರೈತರ ದಂಗೆಗಳನ್ನು ದಮನಿಸುವ ಸಂದರ್ಭಗಳು ಸದರಿ ಸನ್ನಿವೇಶಕ್ಕೆ ಸರಿಹೊಂದುತ್ತವೆ ಎನ್ನಬಹುದು. ರಾಜನ ವಾಸ್ತವ ಸ್ವರೂಪ ದರ್ಶನವನ್ನು ರಾಜಕೀಯ ಹಾಡುಗಳಲ್ಲಿ ತಿಳಿಯಬಹುದು.

ಜನಗಳ ಸೇವೆಯ ಮಾಡುವೆವೆಂದು
ಜನಗಳ ಧರ್ಮವ ಉಳಿಸುವೆವೆಂದು
ರಾಜನ ಕೊಂದು ರಾಜನು ಬಂದು
ಜನಗಳ ಗಾಣಕ್ಕೆ ತಳ್ಳಿದರು
ಮೈಮನವೆರಡಕು ಮೋಜನು ಉಣಿಸುತ
ಮೋದವನಾಡುತ ಮೈಮನ ಮರೆತ
ಕನ್ನಡ ರಾಜರ ಕಥೆಯನ್ನು

ಮಹಿಶೂರ ನಾಡಿಗೆ ದುರ್ಗೆಯ ತಂದು
ದುರ್ಗೆಯ ಹೆಸರಲಿ ದುರ್ಗವ ಕಟ್ಟಿ
ದರ್ಪವ ಮೆರೆದ ಕುಂಭಗೌಡರ
ಗೌಡಾಧಿಪತ್ಯದ ಕಥೆಯನ್ನು

ದ್ವಾರಕೆ ಮುಳುಗಿಸಿ ಇಲ್ಲಿಗೆ ಬಂದು
ಬಡವರ ರಕ್ತವ ಗಟಗಟ ಕುಡಿದು
ರಕ್ತದ ಬದಲಿಗೆ ರತ್ನವ ಬೆಳೆಸಿದ
ರತ್ನ ಸಿಂಹಾಸನದ ಕಥೆಯನ್ನು

ಈ ಲಾವಣಿ ಹಾಡಿನಲ್ಲಿ ಮೈಸೂರು ಸಂಸ್ಥಾನದ ಹಿಂದಿನ ವಾಸ್ತವ ಸತ್ಯವನ್ನು ಬಯಲಿಗೆಳೆಯುವ ಪ್ರಯತ್ನ ಹಾಡಿನಲ್ಲಿ ಅಡಗಿದೆ. 'ಚಿಕ್ಕದೇವರಾಜ ವಿಜಯ'ದಲ್ಲಿ ತಿಳಿಸಿರುವಂತೆ ಚಿಕ್ಕದೇವರಾಜ 'ಪ್ರಜಾವಾತ್ಸಲ್ಯ' 'ದಯಾಮಯಿ' ಎಂಬುದು ಕೇವಲ ಹೊಗಳುವಿಕೆಯೇ ಹೊರತು ವಾಸ್ತವವಲ್ಲ, ಆತನ ಅಸಲಿ ಮುಖ ಕಾಣುವುದು ಶ್ರೀರಂಗಪಟ್ಟಣ, ನಂಜನಗೂಡು ಹಾಗೂ ತಾಯೂರಿನಲ್ಲಿ ನಡೆದ ಘಟನೆಗಳಲ್ಲಿ.

ಕವಿಗಳು, ವಿದ್ವಾಂಸರಿಂದ ಯದುವಂಶ ತಿಲಕ, ಶ್ರೇಷ್ಠ ಎಂದು ಹೊಗಳಿಸಿ-ಕೊಂಡ ಇವರ ಮೂಲ ಕುಂಭಗೌಡ ಎಂಬುದನ್ನೇ ಮರೆಯಿಸಿ ಒಡೆಯ ಎಂದು ಕರೆಸಿಕೊಳ್ಳುವಲ್ಲಿ ರಾಜನ ಒತ್ತಾಯ, ಆದೇಶವಿದೆ. ಅದಕ್ಕೊಂದು ಹಿನ್ನೆಲೆಯಾಗಿ ಒಂದು ಕಾಲ್ಪನಿಕ ಕತೆಯ ಹಿನ್ನೆಲೆ ಕಾಣಸಿಗುತ್ತದೆ. ಪಕ್ಕದ ನಾಡಿನವರು ನೀವು ಕೀಳುಜಾತಿ, ಹೆಣ್ಣು ನಿಡುವುದಿಲ್ಲ ಎಂಬುದಾಗಿ ಹೇಳಿದ ಪ್ರಯುಕ್ತ ತಮ್ಮನ್ನು ಉತ್ತಮ ವಂಶಕ್ಕೆ ಸೇರಿದವರೆಂಬ ಕತೆಯನ್ನು ಹುಟ್ಟು ಹಾಕಿಸಿರುವ ಕತೆ ಹೇಳಲಾಗುತ್ತದೆ.

ಚಿಕ್ಕದೇವರಾಜ ಅಧಿಕಾರಕ್ಕೆ ಬರಲು ಕೆಂಪ ದೇವರಾಜನನ್ನು ಪಿತೂರಿಯಿಂದ ಕೊಲ್ಲಿಸಿದರು ಎಂಬ ಜನಾಭಿಪ್ರಾಯವನ್ನು ತಳ್ಳಿ ಹಾಕುವಂತಿಲ್ಲ.

ಮೈಸೂರು ಸಂಸ್ಥಾನಾಧೀಶರು ಮೂಲತಃ ಕುಂಬಾರರು. ಹಾಗಾಗಿ ಸಿಂಹಾಸನ ಏರುವಾಗ ಸಿಂಹಾಸನವಿರುವ ಬಿಳಿವೃತ್ತಕ್ಕೆ ಪ್ರದಕ್ಷಿಣೆ ಬಂದು ಸಿಂಹಾಸನವೇರುತ್ತಾರೆ ಎಂಬ ವಿವರಣೆ ನಾಟಕದ ಸಂದರ್ಭದಲ್ಲಿ ಯುವ ಸೈನಿಕರಿಂದ ವ್ಯಕ್ತಗೊಂಡಿದೆ.

ತೆರಿಗೆ ಹಣದ ಭಾರಕ್ಕೆ ಹೆದರಿದ ರೈತರು ಸಮಾವೇಶಗೊಳ್ಳುತ್ತಿದ್ದಾಗ ನಂಜನಗೂಡು, ತಾಯೂರಿನಲ್ಲಿ ಸುತ್ತಮುತ್ತಲ ರೈತ ಜನರನ್ನು ಕರೆಯಿಸಿ

ಮಾತುಕತೆಗೆಂದು ಆಹ್ವಾನಿಸಿ ನಂತರ ಸೈನಿಕರಿಂದ ಅವರನ್ನು ಕೊಲ್ಲಿಸಿ ಅವರ ಹೋರಾಟವನ್ನು ಹತ್ತಿಕ್ಕುವ ಕೆಲಸ ಚಿಕ್ಕದೇವರಾಜ ಮಾಡುತ್ತಾನೆ. "ರಾಜರನ್ನು ಧಿಕ್ಕರಿಸುವವರಿಗೆಲ್ಲಾ ಎಂಥ ಸನ್ಮಾನ ಕಾದಿದೆವೆಂಬುದನ್ನು ರೈತರು ಇದನ್ನು ಚೆನ್ನಾಗಿ ತಿಳಿಯಬೇಕಾಗಿದೆ" (ಮೈ.ಸಂ. ನಾಲ್ಕು ನಾಟಕಗಳು, ಪು. ೫೮) ಎಂಬ ಚಿಕ್ಕದೇವರಾಜನ ಸರ್ವಾಧಿಕಾರದ ನಡೆ ನಿಜಕ್ಕೂ ರಾಜಕೀಯ ಪ್ರೇರಿತ ನಡೆ.

'ಅಂತೆಂಬರ ಗಂಡ' ನಾಟಕದಲ್ಲಿ ನಾಟಕಕಾರರು ರಣಧೀರನ ಬಿರುದುಗಳ ಉಲ್ಲೇಖದ ಸಂದರ್ಭದಲ್ಲಿ ಜನ ಕಾಲಾನುಕಾಲದಿಂದ ಪ್ರಜಾಪ್ರತಿನಿಧಿಗಳನ್ನು ಹೊಗಳುವ ಶ್ಲೋಕಗಳು ರೂಪುಗೊಳ್ಳಲು ಕಾರಣ ಪ್ರಜೆಗಳೇ. ಪ್ರಜೆಗಳು ನಂಬುವ ಕಾರಣದಿಂದ ಕಾವ್ಯ ಪುರಾಣಗಳಲ್ಲಿ ಪ್ರಕಟಗೊಂಡು ಬಂದವನ್ನೆಲ್ಲಾ ಸುಲಭವಾಗಿ ನಂಬುತ್ತಾರೆ "ನೀವು ಮೂರ್ಖರಾಗಿರುವುದರಿಂದಲೇ ನಾವು ಅಂತು ಇಂತೆಂಬ ಬಿರುದುಗಳ ಗಂಡರಾಗಿರುವುದು"(ಮೈ.ಸಂ. ನಾಲ್ಕು ನಾಟಕಗಳು, ಪು. ೭೯) ಎಂದು ರಣಧೀರ ಪಾತ್ರಧಾರಿ ಹೇಳುತ್ತಾನೆ.

ಗಂಡಭೇರುಂಡದ ಚಿತ್ರದ ಹಿನ್ನೆಲೆಯಲ್ಲಿ ರಣಧೀರ ನಿರೀಶನನ್ನು ಕಾಣಿಸುವ ಲೇಖಕರು ರಾಜನ ಎರಡು ಬಗೆಯ ಲಕ್ಷಣಗಳನ್ನು ತಿಳಿಸುತ್ತಾ ಹೋಗುತ್ತಾರೆ. ರಣಧೀರನ ಪ್ರತಿ ನಡೆಯ ಹಿಂದೆ ನಿರೀಶನ ನೆರಳು ಸಾಗುತ್ತಿರುತ್ತದೆ. ಆದರೆ ಮುಂದೊಂದು ದಿನ ಕುತಂತ್ರಿಗಳ ವ್ಯೂಹಕ್ಕೆ ಸಿಲುಕಿದ ರಣಧೀರ ನಿರೀಶನನ್ನು ಸೆರೆಹಿಡಿಸುತ್ತಾನೆ.

ರಣಧೀರ ಪಟ್ಟಕ್ಕೆ ಬಂದುದ್ದರ ಹಿಂದೆ ಒಂದು ಹಿನ್ನೆಲೆ ಇದೆ. ತಿರುಚಿನಾಪಳ್ಳಿಯ ಕೊಂಗ ಚೆಟ್ಟಿಯನ್ನು ಸೊಂಟದ ಪಟ್ಟಿಯಲ್ಲಿಟ್ಟುಕೊಂಡ ಪಟ್ಟಕತ್ತಿಯಿಂದ ಮುಗಿಸಿ ಬಂದ ಸಂದರ್ಭದಿಂದಾಗಿ ಚೆಟ್ಟಿಯ ತಮ್ಮ ರಣಧೀರನನ್ನು ಕೊಲ್ಲಲ್ಲು ದೊಡ್ಡಿಯನ್ನು ಮುಂದಿಟ್ಟುಕೊಂಡು ಆಟ ಆಡಲು ಹೋಗಿ ತಾನೇ ಮೋಸಕ್ಕೆ ಒಳಗಾಗಿ ಅಂತಿಮದಲ್ಲಿ ದೊಡ್ಡಿಯ ಕೊಲೆ ಆಗುತ್ತದೆ.

ರಾಜಕೀಯದಲ್ಲಿ ತಂತ್ರ ಪ್ರತಿತಂತ್ರಗಳು ಹೇರಳವಾಗಿ ನಡೆಯುವುದನ್ನು 'ಅಂತೆಂಬರಗಂಡ', 'ಹೈದರ್' ನಾಟಕದಲ್ಲಿ ಕಾಣಬಹುದು. ಒಂದೇ ತಂದೆ ಇಬ್ಬರು ತಾಯಂದಿರ ಮಕ್ಕಳಾದ ವಿಕ್ರಮರಾಯ, ರಣಧೀರರ ಮಧ್ಯೆ ವೈಷಮ್ಯ ಹುಟ್ಟುಹಾಕಿ

ವಿಕ್ರಮರಾಯನ ಕೊಲೆಯ ಮೇಲೆ ರಣಧೀರನ ತಂದೆ ರಾಜ್ಯಾಧಿಕಾರ ಬೇಡವೆಂದು ತೆರಕಣಾಂಬಿಯಲ್ಲಿ ನೆಲೆಸಿದ್ದವರ ಮಗ ರಣಧೀರನಿಗೆ ರಾಜ್ಯದ ಗದ್ದುಗೆ ಸಿಗುತ್ತದೆ.

ಗ್ರಾಮವನ್ನೂ ಗೌಡ, ಯಜಮಾನರುಗಳು ದುಡ್ಡು ತೆತ್ತುಪಡೆದು ಹಳ್ಳಿಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಪದ್ಧತಿಯನ್ನು 'ಅಂತೆಂಬರ ಗಂಡ'ದಲ್ಲಿ ಕಾಣಬಹುದು. 'ರಾಜ ಪ್ರತ್ಯಕ್ಷಾ ದೇವತಾ ಎನ್ನುವರು. ಆದರೆ ರಕ್ಷಿಸಬೇಕಾದ ರಾಜನೇ ವಿಷಯಲಂಪಟನಾಗಿ ವರ್ತಿಸುವ ವಿವರ 'ಅಂತೆಂಬರ ಗಂಡ'ದಲ್ಲಿ ಕಾಣಸಿಗುತ್ತದೆ. ಸೈನಿಕರೆಲ್ಲ ಹಳ್ಳಿಗೆ ನುಗ್ಗಿ ಹೆಂಗಸರ ಮೇಲೆ ಆಕ್ರಮಣ ನಡೆಸಿದಾಗ ಜನಗಳು ದಂಗೆ ಏಳುತ್ತಾರೆ.

'ಶಾಪ' ನಾಟಕದಲ್ಲಿ ಹೆಣ್ಣುಮಕ್ಕಳು ರಾಜ್ಯದ ಚುಕ್ಕಾಣಿ ಹಿಡಿಯಬಾರದು ಎಂಬ ಪೂರ್ವಾಗ್ರಹ, ವಿಜಯನಗರದ ಭವ್ಯಸಿಂಹಾಸನ, ಒಡವೆಗಳಿಗಾಗಿ ಶಾಂತಯ್ಯನಿಂದ ನಕಲಿ, ನಂಜಿನ ಔಷಧಿ ನೀಡಿ ಪ್ರಾಣ ನೀಗಲು ಕಾರಣರಾಗಿ, ಮುಂದೆ ಅಲಮೇಲಮ್ಮ ಮಾಲಂಗಿಗೆ ಹಾರಲು ಪರೋಕ್ಷ ಕಾರಣರಾಗುತ್ತಾರೆ. ವಿಜಯನಗರದ ಕೊನೆಯ ಸಂತತಿಯ ಅವಸಾನವಾಗುತ್ತದೆ.

'ಹೈದರ್' ನಾಟಕದಲ್ಲಿ ಅನಕ್ಷರಸ್ಥ ಹೈದರ್‌ನ ಕುಶಾಗ್ರಮತಿಯ ಪರಿಚಯವಾಗುತ್ತದೆ. ಸೈನಿಕನಾಗಿದ್ದ ಹೈದರ್ ಪಟ್ಟಣಕ್ಕೆ ಸೇರಿದ ನಂತರ ಅಧಿಕಾರದಲ್ಲಿ ಮುಂದುವರಿಯಲು ಆತ ಹಾಕುವ ಕುತಂತ್ರ ಕುಟಿಲ ನೀತಿಗಳು ನವಾಬನಾಗುವಷ್ಟರಮಟ್ಟಿಗೆ ಮಾಡುತ್ತವೆ. ತನ್ನನ್ನು ಸೈನಿಕನೆಂದು ಹಂಗಿಸಿದ್ದ ಮಹಮದಾಲಿಗೆ ಹೈದರ್ ತಾನೇ ಆರ್ಕಾಟಿನ ನವಾಬನಾಗರ ಮೂಲಕ ತಕ್ಕ ಉತ್ತರನೀಡುತ್ತಾನೆ. ಬ್ರಿಟಿಷರಿಗೆ ಬ್ಲಾಕ್‌ಮೇಲ್ ತಂತ್ರದಿಂದ ಸಂಕಷ್ಟದಿಂದ ಪಾರಾಗುತ್ತಾನೆ. ಒಂದು ಸಿಂಹಾಸನದ ರತ್ನ ಖಚಿತ ಆಸನದ ಹಿಂದೆ ಅನೇಕರ ರಕ್ತಸಿಕ್ತ ಕಥೆಗಳು ಅಡಗಿರುವುದನ್ನು ಕಾಣಬಹುದು.

ಹಳೇಮನೆ ಲಿಂಗದೇವರು ತಮ್ಮ ನಾಟಕದಲ್ಲಿ ರಾಜಕೀಯವನ್ನು ಕೆದಕಿ ಕೆಣಕಿ ಜನಸಮುದಾಯಕ್ಕೆ ಉಣಬಡಿಸುವುದಕ್ಕಾಗಿ ಕೆಳಕಂಡ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

- ಸಮಾಜದ ವಿವಿಧಸ್ತರ ಜನಶಕ್ತಿ ಮತ್ತು ಪ್ರಭುತ್ವಕ್ಕಾಗಿ ಅರಸರನ್ನು ಕೊಲ್ಲಿಸಿ ಪಟ್ಟಕ್ಕೆ ಬಂದಿರುವುದರ ಕುರಿತು ವಿವರಣೆ.

- ಅರಮನೆಯ ಆಜ್ಞೆಗಳಿಗೆ ತಲೆಬಾಗುವ ಅನಿವಾರ್ಯತೆಯಿಂದಾಗಿ ಪ್ರಜೆಗಳು ಪ್ರಭುಗಳ ಪ್ರಶ್ನಿಸುವಂತಿಲ್ಲ.
- ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜಾತೀತ್ವ ಸಂವಿಧಾನ ಬಿಂಬಿಸಿದರೂ ಮೂಲಮೌಲ್ಯವು ರಾಜರ ಕೈಲಿದ್ದು ಸರ್ವಾಧಿಕಾರಿ ಮನೋಭಾವ ಇತ್ತೆ? ಎಂಬ ಚರ್ಚೆ.
- ಸುಂಕವಸೂಲಿಗಾಗಿ ರಾಜನೆಣೆಯುವ ತಂತ್ರ, ಪ್ರಜೆಗಳು ರಾಜಪ್ರತ್ಯಕ್ಷ ದೇವನೆಂದು ಶಿರಸಾವಹಿಸಿ ನಿರ್ವಹಣೆ ರಾಜಭಕ್ತಿ ಬೆಳೆಸುವ ರಣತಂತ್ರ.
- ಸುಂಕ/ತೆರಿಗೆ, ಹೋರಾಟಗಳನ್ನು ಚರಿತ್ರಾಕಾರರ ದೃಷ್ಟಿಗೆ ಬೀಳದಂತೆ ರಾಜಕೀಯ ಕುಟಿಲತೆ ವಿಶ್ವಾಸಘಾತುಕತನ, ಕೃತಘ್ನತೆ. ನರಮೇಧ, ರಾಜಮಂತ್ರಿಗಳ ಚದುರಂಗದಾಟ
- ರಾಜ್ಯ ಚಕ್ರವ್ಯೂಹ ರಚಿಸಿ ಅದರಲ್ಲಿ ದೈತ್ಯ ಸೈನಿಕದಾಟದಲ್ಲಿ ಕೊಲೆಗಳು
- ಅಧಿಕಾರ ವಿಕೇಂದ್ರಿಕೃತವಾಗಬೇಕು. ಪ್ರಜೆಗಳ ನಿರ್ಣಯಕ್ಕೆ ಗೌರವ ಸಲ್ಲಬೇಕು.
- ಸಿಂಹಾಸನಕ್ಕಾಗಿ ರಾಜಕೀಯ ಕಿತ್ತಾಟ, ಅಧಿಕಾರದಾಹ ಇವುಗಳನ್ನೆಲ್ಲ ಇಲ್ಲಿ ವಿವರಿಸಲಾಗುವುದು.

೩) ಸಾಮಾಜಿಕ ಹಿನ್ನೆಲೆ

ಪ್ರಜೆಗಳು ಪ್ರಭುಗಳನ್ನು ಪರಮಾತ್ಮರೆಂದೇ ಭಾವಿಸಿದ್ದವರು. ರಾಜನ ಅಸ್ತಿತ್ವಕ್ಕೆ, ಅಪಘಾತಕ್ಕೆ ಕೇವಲ ಮಾತು ಮಾತನಾಡಿಕೊಂಡು ಸಂತಾಪ ಸೂಚಿಸುತ್ತಾರೆಯೇ ಹೊರತು ಅವರ ಕೈಯಲ್ಲಿ ಏನೂ ಮಾಡಲಿಕ್ಕಾಗದು. ಅಧಿಕಾರ ಒಬ್ಬನ ಕೈಯ್ಯಲ್ಲಿ, ತೋರಿಕೆಗೆ ಮತ್ತೊಬ್ಬ ಸಿಂಹಾಸನದ ಮೇಲಿದ್ದರೂ ಕುತಂತ್ರಗಳ ಅರಿವಿಲ್ಲದ ಪ್ರಜೆಗಳು ಏನೂ ಮಾಡಲಾಗದ ಅಸಹಾಯ ಪರಿಸ್ಥಿತಿಯಲ್ಲಿರುತ್ತಾರೆ. ಒಬ್ಬ ರಾಜ ಮತ್ತೊಬ್ಬರನ್ನು ಮುಗಿಸಿ ಅಧಿಕಾರಕ್ಕೆ ಬಂದಾಗ 'ಬಡವನ ಕೋಪ ದವಡೆಗೆ ಮೂಲ' ಎಂಬುದ ಅರಿತು ಕೇವಲ ಸಂತಾಪದಿಂದ ಮಾತನಾಡಿಕೊಳ್ಳುತ್ತಾರೆ.

ರಾಜನ ಕಾಮ, ಭೋಗಕ್ಕೆ ಪ್ರತಿ ಆಡದೆ ಪ್ರತಿಭಟಿಸದೆ ಇದ್ದವರು, ತಮ್ಮ ಸಂಬಳ, ಭಕ್ಷಿಸಿಗೆ ಭಂಗ ಬಂದಾಗ ಲೂಟಿ, ಕೊಲೆ, ಕೊಳ್ಳೆಗಳಿಗೆ ಇಳಿಯುತ್ತಾರೆ. ರಾಜನ ಅರಮನೆಗೆ ಹೋಗುವ ನೀರು, ದಾಸ್ತಾನನ್ನು ನಿಲ್ಲಿಸುತ್ತಾರೆ. ತಮ್ಮಂತೆ

ಬಡವರಾಗಿರುವ ಹಳ್ಳಿಗರನ್ನು ಲೂಟಿ ಮಾಡುವುದರ ಬಗ್ಗೆ ಅವರಿಗೇ ಸಂತಾಪ-ವಿರುವುದನ್ನು ಕಾಣಬಹುದು.

ರಾಜಕೀಯ ತಂತ್ರಗಳೇ ಅಧಿಕವಾಗಿರುವ ಈ ನಾಲ್ಕು ನಾಟಕಗಳಲ್ಲಿ ಜನಸಾಮಾನ್ಯರ ಬವಣೆಗಳು, ರೈತರ ಬೇಗುದಿಗಳು ಪ್ರಕಟಗೊಳ್ಳುವ ಮೂಲಕ ರಾಜನ ಪ್ರಜಾವತ್ಸಲರಾಜನ ಇನ್ನೊಂದು ಮುಖದ ಪರಿಚಯವಾಗುತ್ತದೆ.

ಈ ನಾಟಕಗಳಲ್ಲಿ ಪ್ರಾದೇಶಿಕ ಭಾಷೆಗೆ ಒತ್ತುನೀಡಿದೆ.

೧) ರಾಜರು ರಸಿಕ ಶಿಖಾಮಣಿಗಳು

೨) ಸಮಾಜವು ರಾಜಪ್ರಭುತ್ವವನ್ನು ಪ್ರಥಮವಾಗಿ ಪ್ರಶ್ನಿಸಿದ ಬಗೆ.

೩) ಜಾತಿಯ ಕೀಳರಿಮೆ ಪರಂಪರೆಯಲ್ಲಿ ಇಂದಿಗೂ ಜೀವಂತಿಕೆ.

೪) "ಆಸೆಗಳ ವಯಸ್ಸು ಬಯಕೆಗಳ ಕನಸು" ಪಂಚೇಂದ್ರಿಯಗಳ ಗುಲಾಮರಾದ ಬಗೆ.

೫) ಹಲ್ಲೆ, ಶೋಷಣೆ, ಅಧಿಕಾರದಾಹ ಭ್ರಷ್ಟಾಚಾರ

೬) ತೆರಿಗೆ, ಸುಂಕ, ನಾಣ್ಯಗಳ ಚಲಾವಣೆ, ಬೆಲೆ ಏರಿಕೆ, ಜಾತಿವಿವಾದ, ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ.

೭) ರೈತರ ನೋವು, ನಿರಾಸೆ, ಹಸಿವು, ಸಮುದಾಯ ರಾಜನಾಸೆಗೆ ರಾಜಕೀಯಕ್ಕೆ ಬಲಿಯಾಗುತ್ತಿರುವುದು.

೮) ನೇಗಿಲಯೋಗಿ, ರೈತ, ಸೈನಿಕರಲ್ಲಿ ಜಾಗೃತಿ

೯) ಚರಿತ್ರೆಯು ವೈಭವೀಕರಣಕ್ಕೆ ಹೋಗದೆ ನಿಷ್ಠುರವಾಗಿ ರಾಜಪ್ರಭುತ್ವದ ನಿಜಸ್ವರೂಪವನ್ನು ಶೋಧಿಸುವತ್ತ ದೃಷ್ಟಿಹರಿಸಿದೆ.

೧೦) ಅಲಮೇಲಮ್ಮನ ಶಾಪ.

೧೧) ಸಮಾಜದ ಆಗುಹೋಗುಗಳ ನಡುವೆ ಕಣ್ಣು ತೆರೆಸುವ ಲೇಖನ ಆರೋಗ್ಯಕರ ಸಮಾಜಕ್ಕೆ ದೀವಿಗೆಯಂತಿದೆ.

೧೨) ಮಾರುವೇಷದಲ್ಲಿ ರಾಜನ ಸಂಚಾರ

೧೩) ವೈಶ್ಯೆಯ ಪಲ್ಲಂಗಕ್ಕೆ ರಾಜರ ಪ್ರವೇಶ

೧೪) ಹೆಣ್ಣುಗಂಡಿನ ಮಧ್ಯೆ ಈರ್ಷ್ಯೆ ಪ್ರೇಮವಾಗಿ ಮೋಹವಾಗಿ ಬದಲಾವಣೆ ನಿಸರ್ಗ ನಿಯಮ

೧೫) ನಾಟಿವೈದ್ಯ

೪) ಧಾರ್ಮಿಕ ಪರಿಸರ

ಭಾರತದಂಥ ಬೃಹತ್ ದೇಶದಲ್ಲಿ ವ್ಯಕ್ತಿಯ ವ್ಯಕ್ತಿತ್ವಕ್ಕಿಂತ ಆತನ ಧರ್ಮ ಪ್ರಮುಖ ಪಾತ್ರವಹಿಸುತ್ತವೆ. 'ಚಿಕ್ಕದೇವರಾಜಭೂಪ' ನಾಟಕದಲ್ಲಿ ಬರುವ ಲಾವಣಿ-ಯೊಂದರಲ್ಲಿ ದುರ್ಗೆಯನ್ನು ಉತ್ತರದ ದ್ವಾರಕೆಯಿಂದ ತಂದು ಮೈಸೂರಿನಲ್ಲಿ ಚಾಮುಂಡಿಯನ್ನಾಗಿಸಿದ ಉಲ್ಲೇಖವಿದೆ.

'ದಯವೇ ಧರ್ಮದ ಮೂಲವಯ್ಯ' ಎಂಬ ಶರಣರ ಅನುಭಾವದ ನುಡಿ ಇದ್ದರೂ ಹೀನ ಕುಲದವರೆಂಬ ಕಾರಣಕ್ಕಾಗಿ ಹೆಣ್ಣು ನೀಡಲಿಲ್ಲವೆಂದು ಕುಂಬಾರಗೌಡ-ರಾಗಿದ್ದವರು ಕಾವ್ಯ, ಕವಿಗಳ ಹೊಗಳುವಿಕೆಯಲ್ಲಿ 'ಯದುಕುಲ' ವಂಶಸ್ಥರೆಂದು ಕರೆಯಲ್ಪಡುತ್ತಾರೆ. ಯಾವುದೇ ಒಂದು ಸುಳ್ಳನ್ನು ಹತ್ತು ಬಾರಿ ಹೇಳಿದಾಗ ಹೇಗೆ ಅದು ನಿಜವೆನಿಸಿಬಿಡುತ್ತದೋ, ಹಾಗೆಯೇ ಉತ್ತರದ ಕುಂಬಾರರು ದಕ್ಷಿಣದಲ್ಲಿ ಯದುವಂಶದ ತಿಲಕರಾಗುತ್ತಾರೆ.

'ಶಾಪ' ನಾಟಕದಲ್ಲಿ ಶ್ರೀರಂಗಪಟ್ಟಣದಲ್ಲಿ ವಿಜಯನಗರ ರಾಜಪ್ರತಿನಿಧಿಯಾಗಿದ್ದ ಶ್ರೀರಂಗರ ಪತ್ನಿ ಅಲಮೇಲಮ್ಮ ಗಂಡನ ಆರೋಗ್ಯಕ್ಕಾಗಿ ಶ್ರೀರಂಗನಾಥನಿಗೆ ತನ್ನ ಸಕಲ ಒಡವೆಗಳನ್ನು ತೊಡಿಸಿ ಅಲಂಕಾರ ಮಾಡಲು ನೀಡುತ್ತಾಳೆ. ಪತಿಯ ಆರೋಗ್ಯಕ್ಕಾಗಿ ವಿಜಯನಗರದ ಅಲಮೇಲು ಮಂಗಮ್ಮನಿಗೆ ವಜ್ರದ ಮೂಗುತಿಯನ್ನು ಹರಕೆ ಸಲ್ಲಿಸಲು ನಿರ್ಧರಿಸುತ್ತಾಳೆ. ಆದರೆ ಶತ್ರುಗಳ ಕಾಟದಿಂದಾಗಿ ಅಲ್ಲಿಗೆ ತೆರಳಲಾಗದೆ ಶ್ರೀರಂಗಪಟ್ಟಣದಲ್ಲಿಯೇ ಪೂಜೆಸಲ್ಲಿಸುತ್ತಾಳೆ.

ಗಂಡನ ಮರಣಾನಂತರ ಆಕೆ ಗೋಳಿಡುತ್ತಾ ಗಂಡ ಅಂತ್ಯಸಂಸ್ಕಾರವನ್ನು ಖುದ್ದು ನೆರವೇರಿಸದೆ ಬೇಡರಾದ ಕಾಡ, ಲಕ್ಕಿಯರ ಕೈಯಲ್ಲಿ ಮಾಡಿಸುತ್ತಾಳೆ. ಗಂಡನ ಮರಣದ ನಂತರ ತನಗೆ ಎದುರಾಗಬಹುದಾದ ಸಂಕಷ್ಟ ಊಹಿಸಿ ಮಾನ, ಪ್ರಾಣ ಹಾನಿ ಶತ್ರುವಿನಿಂದ ಆಗಬಾರದೆಂದು ಬಾಗಿನ ಹೊತ್ತು ಗರ್ಭಿಣಿ ಅಲಮೇಲಮ್ಮ ಮೈಸೂರು ಸಂಸ್ಥಾಪನಾಧೀಶರಿಗೆ ಶಾಪ ನೀಡಿ 'ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ' ಎಂಬ ಬಿರು ನುಡಿ ಆಗಿ ಸಂಕಟದಿಂದ ಮಾಲಂಗಿ ಬಳಿಯ ಹೊಳೆಗೆ ಹಾರಿ ಪ್ರಾಣಬಿಡುತ್ತಾಳೆ.

'ಶಾಪ' ನಾಟಕದಲ್ಲಿ ತಲಕಾಡು ಕ್ಷೇತ್ರದಲ್ಲಿನ ಧಾರ್ಮಿಕ ನಂಬಿಕೆಗೆ ಸಂಬಂಧಿಸಿದ ಕತೆ ಬರುತ್ತದೆ. ತಲ, ಕಾಡ ಬೇಡರಿಂದ ತಲಕಾಡು ಆದ ವಿವರಣೆಯ ಜೊತೆಗೆ ವೈದ್ಯನಾಥೇಶ್ವರನ ಉಲ್ಲೇಖಬರುತ್ತದೆ. 'ಹೈದರ್' ನಾಟಕದಲ್ಲಿ ಇಸ್ಲಾಂ ಧರ್ಮದವ-ನಾಗಿದ್ದರೂ ದಸರಾ ಆಚರಣೆಗೆ ಒತ್ತು ನೀಡಿ ಆ ಮುಖೇನ ಪ್ರಜೆಗಳ ಮನ್ನಣೆಗಳಿಸುವ ಘಟನೆಗಳನ್ನು ಕಾಣಬಹುದು.

ಭಾರತದ ಭವ್ಯ ಸಂಸ್ಕೃತಿ, ಪರಂಪರೆ ಬಗ್ಗೆ ಅಪಾರ ಒಲವು ಗೌರವ ಸೂಚಿಸಿ ಧರ್ಮವನ್ನು ಹಳೆಮನೆ ಲಿಂಗದೇವರು ಅವರು ಬಿಂಬಿಸಿದ್ದು ಈ ನಾಟಕದಲ್ಲಿ ದೇವರು, ಧರ್ಮ, ಪರಂಪರೆ, ಸಂಸ್ಕ್ರತಿ ಅಂದ್ರೆ ತುಂಬಾ ಗೌರವ. ನಮ್ಮ ಭವ್ಯ ಸಂಸ್ಕೃತಿಗೆ ಸಮನಾದದ್ದು ಎಲ್ಲಿದೆ? ಏನಿದೆ? ಹಿಂದಿನ ರಾಜರ ಭವ್ಯ ಶರೀರ, ಎದ್ದುಕಾಣುವ ವೇಷಭೂಷಣ, ಅವರ ಕಂಠೀಹಾರಗಳು ಒಂದೇ – ಎರಡೇ. ಅದನ್ನು ಊಹಿಸಿಕೊಂಡರೇ ಸಾಕು ಜನ್ಮ ಸಾರ್ಥಕ. ಅವರ ಧರ್ಮ ಪರಾಯಣತೆ, ಪ್ರಜಾವಾತ್ಸಲ್ಯ, ಹಿಂದಿನ ವೈಭವ ರಾಜರು ಸಕಲ ಕಲಾವಿದ್ಯಾ ಪಾರಂಗತರು, ವೀರಾಧಿವೀರರು, ಸಕಲಕಲೆಯೂ ರಸಿಕಕಲೆ, ರಸಿಕ ಶಿಖಾಮಣಿಗಳು.

ತೆರಿಗೆಯ ಹಣವನ್ನೆಲ್ಲಾ ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸುವ ಬಗ್ಗೆ ವಿಶಾಲಾಕ್ಷ ಪಂಡಿತ ರೈತರಿಗೆ ತಿಳಿಸುತ್ತಾ ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ದೇವಾಲಯ ನಿರ್ಮಾಣಕಾರ್ಯಕ್ಕೆ ನಮ್ಮೆಲ್ಲರ ಸಹಕಾರ ಪ್ರೋತ್ಸಾಹ ನೀಡಿರೆಂದು ಪಂಡಿತ ಸಮಾಧಾನಕ್ಕೆ ಪ್ರಯತ್ನಿಸುವ ಪರಿ ಇದೆ. ಕಂಠೀರವ ಒಡೆಯರ ಆಳ್ವಿಕೆ ಕಾಲದಲ್ಲಿ ಆತ ಬೇರೆಜಾತಿಯವ ಬೇರೆ ಧರ್ಮಕ್ಕೆ ಸೇರಿರುವನೆಂಬ ಕಾರಣಕ್ಕೆ ಪಕ್ಕದ ಪಾಳೇಗಾರರು ಹೆಣ್ಣು ಕೊಡುತ್ತಿರಲಿಲ್ಲ. ಅಂದರೆ ಈ ಜಾತಿ ಧರ್ಮ ವ್ಯವಸ್ಥೆ ವೇದಗಳ ಕಾಲದಿಂದಲೂ ಇಂದು ಮುಂದೆಂದಿಗೂ ಇದನ್ನು ತಡೆಯಲಾಗದು. ಪರಂಪರೆಯ ಜೊತೆ ಜೊತೆಯೇ ಜಾತಿಧರ್ಮಗಳು ಜಡ್ಡುಗಟ್ಟಿದ ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಬದಲಾಯಿಸಲು ಅಸಾಧ್ಯವೆನಿಸಿತು. ಅಂದರೆ ಸಾಹಿತಿ, ಕವಿ ಹಳೆಮನೆ ಲಿಂಗದೇವರು ಈ ಮತಧರ್ಮ ಜಾತಿ ವ್ಯವಸ್ಥೆಯನ್ನು ಬದಲಾಯಿಸಲು ಅಸಾಧ್ಯ? ರಾಜರನ್ನು ಬಿಡಲಿಲ್ಲ ಎಂಬುದು ಅವರ ಬರಹದ ಸಾಮಾಜಿಕ ಕಾಳಜಿ ವ್ಯಕ್ತವಾಗುತ್ತದೆ.

ದೊರೆಗಳ ಪಂಚೇಂದ್ರಿಯಗಳ ಗುಲಾಮರಾಗಿ ಆಳುವಮಂದಿ ತಮ್ಮ ಕರ್ತವ್ಯ, ಧರ್ಮಸೂಕ್ಷ್ಮ ಮರೆತು ಆಸೆ, ಬಯಕೆಗಳ ಗುಲಾಮರಾಗಿ ಕರ್ತವ್ಯ ಮರೆತು

ಭೋಗದಲ್ಲೇ ಮೈಮರೆತು ಮುಳುಗಿರುವ ವಾಸ್ತವತೆಯನ್ನು ಮುದಿ ಸೈನಿಕ ಮತ್ತು ಯುವಸೈನಿಕರ ಸಂಭಾಷಣೆಯಿಂದ ಬೆಳಕಿಗೆ ತರುವುದು.

೧) ರಾಜ್ಯದಲ್ಲಿ ರಾಜನಿಗೆ ರಂಗನಾಥನ ಭಕ್ತ, ರಾಣಿ ಅಲಮೇಲು ಮಂಗಮ್ಮನ ಭಕ್ತಿ, ತನ್ನ ಕಷ್ಟ ಸುಖ ನೋವು ನಲಿವಿಗೆ ನಂಬಿದ ಮನೆದೈವಕ್ಕೆ ವಿಶೇಷಪೂಜೆ ಹರಕೆ ಸಲ್ಲಿಕೆಯಾಗುತ್ತಿತ್ತು.

೨) ರಾಣಿ ಅಲಮೇಲು ಮಕ್ಕಳಾಗದ ಕೊರಗಲ್ಲಿ ಅಲಮೇಲು ಮಂಗಮ್ಮನಿಗೆ ವಜ್ರದ ಮೂಗುನತ್ತು ಮಾಡಿಸಿ ತೊಡಿಸುವ ಹರಕೆ ಮಾಡಿಕೊಳ್ಳುವಳು. ಹಾಗೇ ಅವಳಾಸೆಯಂತೆ ಅಲಮೇಲು ದೈವಕರುಣೆಯೋ ನಾಟಿವೈದ್ಯದ ಫಲವೋ ಗರ್ಭಿಣಿಯಾಗುತ್ತಾಳೆ.

೩) ಹಾಗೇ ರಾಯರ ಅನಾರೋಗ್ಯ ಉಲ್ಬಣಗೊಂಡಾಗ ತನ್ನ ಮನೆದೈವ ಗಂಡನ ಇಷ್ಟದೈವ ಶ್ರೀರಂಗನಾಥನಿಗೆ ಪ್ರತಿ ಅಮವಾಸ್ಯೆಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತಿತ್ತು.

೪) ರಾಣಿ ತನ್ನ ಒಡವೆಗಳನ್ನೆಲ್ಲಾ ಅಲಮೇಲಮ್ಮನಿಗೆ ಅಲಂಕರಿಸಲು ಕಳಿಸಿಕೊಟ್ಟಳು. ಹಾಗೇ ಹರಕೆ ಹೊತ್ತು ಅಲಮೇಲುವಿಗಾಗಿ ಸಮರ್ಪಿಸಲೆಂದೇ ವಜ್ರದ ಮೂಗುತಿ ಮಾಡಿ ಅದನ್ನು ಸಹ ಕಳಿಸಿಕೊಟ್ಟಿರುವುದು ಅವಳ ಧಾರ್ಮಿಕ ಧರ್ಮ ದೈವದ ನಂಬಿಕೆಗೆ ಉದಾಹರಣೆಯಾಗಿದೆ. ಹಾಗೆ ದೈವಸಾಕ್ಷಾತ್ಕಾರದಿಂದ ತಾಯ್ತನದ ಭಾಗ್ಯ ಧರ್ಮದ ಜಯ ನಂಬಿದ ದೈವ ಕೈಬಿಡನೆಂಬ ಗಟ್ಟಿ ಮಾತು ಕೇಳುತ್ತೆ. ನಾಟಿವೈದ್ಯ ಶಾಂತಯ್ಯ ರಾಯರ ಅನಾರೋಗ್ಯದಲ್ಲಿರುವಾಗ ರಾಣಿಗೆ ಸಲಹೆ ಎಂದರೆ "ಹೆಮ್ಮಾರಿ ಬಡಿದಾಗ ವಾಸಿಯಾಗದ ರೋಗ ಮೈಹೊಕ್ಕು ಕುಳಿತಾಗ ಊರಾಚೆಯ ದೇಗುಲಕ್ಕೆ ಕೊಂಡೊಯ್ಯಬೇಕು". ಇದು ನಮ್ಮ ನಾಡಿನ ನೀತಿ ಜನಪದವೆಲ್ಲಾ ಪಾಲಿಸಿಕೊಂಡು ಬಂದ ಧರ್ಮ ಎಂದು ಧಾರ್ಮಿಕ ನೀತಿ ವಿವೇಕವಾಣಿ ಉಲಿಯುತ್ತದೆ.

ನೊಂದ ರಾಣಿ ರಾಯರನ್ನು ಊರಾಚೆಯ ಪಾಳುದೇಗುಲದಲ್ಲಿಡಬೇಕೆ? ರಂಗನಾಥನ ಮೇಲಿನ ನಮ್ಮ ನಿಷ್ಠೆ, ನೇಮಗಳು ಹುಸಿಯಾದವೇನು? ಎಂದಾಗ, ನಾಟಿವೈದ್ಯ ಶಾಂತಯ್ಯ ನೇಮನಿಷ್ಠೆಗಿಂತ ರಾಜ್ಯ ಉಸಾಬರಿ ಮನೆಯ ಜಂಜಾಟ ಬಿಟ್ಟು

ಬಯಲಿಗೆ ದೇಹವನ್ನು ಒಡ್ಡುವುದು. ಉರಿನೋವುಮರೆತು ದೈವಸನ್ನಿಧಿ ಭಗವಂತನ ಸಾನಿಧ್ಯ ಪ್ರಶಾಮತವಾತಾವರಣದಲ್ಲಿ ಮನಸ್ಸಿಗೆ ಹಿತವಾಗುವುದು ಎಂಬ ಸಲಹೆಯಲ್ಲಿ ಧಾರ್ಮಿಕ ನಿಷ್ಠೆ ನಂಬಿಕೆ ಕಾಣಬಹುದಾಗಿದೆ. ಹಾಗೆಯೇ ಚರ್ಚೆ ಚಿಂತನೆಯಿಂದ ಪಟ್ಟಣಬಿಟ್ಟು "ತಲಕಾಡು"ಗೆ ರಾಯರೊಡನೆ ರಾಣಿಯು ಪಯಣ ಬೆಳೆಸುತ್ತಾಳೆ. ಹೀಗೆ ಲಿಂಗದೇವರು ಅವರ ನಾಟಕಗಳಲ್ಲಿ ಧಾರ್ಮಿಕ ಪರಿಸರವನ್ನು ಗುರುತಿಸಬಹುದು.

ಅಧ್ಯಾಯ – ೫

ಲಿಂಗದೇವರು ಹಳೆಮನೆಯವರ ನಾಟಕಗಳ ಅಧ್ಯಯನದ ಒಟ್ಟು ನೋಟಗಳು

ಐತಿಹಾಸಿಕವಾದ ಘಟನೆಗಳನ್ನು ಆಧರಿಸಿ ರಚನೆಗೊಂಡಿರುವ ಚಿಕ್ಕದೇವಭೂಪ, ಅಂತೆಂಬರಗಂಡ, ಶಾಪ ಹಾಗೂ ಹೈದರ್ ನಾಟಕಗಳು ಬಹುರೂಪಿಗಳ ನಿರೂಪಣಾ ವಿಧಾನವನ್ನು ಅಳವಡಿಸಿಕೊಂಡು ಬಂದು, ಸಂದಿರುವ ಘಟನೆಗಳಿಗೆ ಹೊಸರೂಪ, ತಂತ್ರ, ಭಾಷೆ–ಬಳಕೆ ಹಾಗೂ ಜನಪದ ಕಲೆಗಳಾದ ಲಾವಣಿ, ಕಂಸಾಳೆಗಳನ್ನು ಬಳಸಿಕೊಂಡಿರುವುದು ಅತ್ಯಂತ ಸೂಕ್ತವಾಗಿದೆ. ಪಾತ್ರಧಾರಿಗಳು, ಸೂತ್ರಧಾರ, ನಾಟಕ ತರಬೇತಿಗಳ ಮುಖಾಂತರ ನಾಟಕಗಳ ಓಟ ಸಾಗುತ್ತದೆ.

ನಾಟಕಗಳ ಪಾತ್ರಗಳು ರಾಜನನ್ನು ವಿಡಂಬಿಸುತ್ತಲೋ, ವಿಶ್ಲೇಷಿಸುತ್ತಲೋ ವ್ಯಂಗ್ಯಭರಿತವಾಗಿ ಮಾತನಾಡುತ್ತ ಓದುಗರಿಗೂ, ಪ್ರೇಕ್ಷಕರಿಗೂ ಗಾಢವಾಗಿ ಕತೆ ಅರ್ಥವಾಗುವಂತೆ ಸಂಭಾಷಣೆ ಅಭಿವ್ಯಕ್ತಗೊಂಡಿದೆ. ರಾಜಕಾರಣದಲ್ಲಿ ಯುದ್ಧ, ಘರ್ಷಣೆ, ಅಪವಾದ, ತಂತ್ರ, ಪ್ರತಿತಂತ್ರ, ಕೊಲೆ, ಸೇಡು ಸಾಮಾನ್ಯ ಎಂಬ ಅಂಶಗಳು ಲಿಂಗದೇವರು ಹಳೇಮನೆಯವರ ನಾಟಕಗಳಿಂದ ದೃಢಪಟ್ಟಿವೆ. ಬಿರುದು ಬಾವಲಿಗಳೇ ಆಗಲಿ, ಮುಖಸ್ತುತಿ ಮಾಡುವ ಕಾವ್ಯ, ಶ್ಲೋಕಗಳೇ ಆಗಲಿ, ರಾಜನ ಕುರಿತ ಐತಿಹ್ಯಗಳಾಗಲೀ ವಾಸ್ತವ ಬಹುತೇಕ ಸತ್ಯಗಳಲ್ಲ. ಭಾಗಶಃ ಮಾತ್ರ ನಿಜಾಂಶವಿರಬಹುದೇನೋ ಎಂಬ ಸಂದೇಹವನ್ನು ಓದುಗರಲ್ಲಿ ಹುಟ್ಟುಹಾಕುತ್ತದೆ. ರಾಜರುಗಳ ವಂಶಾವಳಿಗಳಾಗಲಿ, ಪ್ರಜೆಗಳ ವಿಷಯದಲ್ಲಿ ತಾಳುವ ಕಪಟ ಕಾಳಜಿಗಳಾಗಲಿ, ವದಂತಿ ಹುಟ್ಟು ಹಾಕುತ್ತಾ ಜನಸಾಮಾನ್ಯರನ್ನು ದಾರಿತಪ್ಪಿಸುವ ಕೆಲಸ ಹೇಗೆ ಸದ್ದಿಲ್ಲದೇ ನಡೆಯುತ್ತದೆ ಎಂಬುದು ನಾಟಕಗಳಿಂದ ವೇದ್ಯವಾಗುತ್ತದೆ. ಭಾರತವು ಜಾತಿಮತ ಧರ್ಮ ಭೇದವೆಣಿಸದ ಜಾತ್ಯತೀತ ರಾಷ್ಟ್ರವಾಗಿದ್ದರೂ ಸಮಾಜದಲ್ಲಿ ಹೊಂದಾಣಿಕೆ, ಒಗ್ಗೂಡಿಕೆ ವೇದಿಕೆಗೆ ಸೀಮಿತವಾಗಿದ್ದು ವಾಸ್ತವದಿ ಕನ್ನಡಿಯ ಕಗ್ಗಂಟಾಗಿಯೇ ಉಳಿದಿದೆ. ಸಮಾಜ ಸುಧಾರಣೆ ಬಗ್ಗೆ ನೂರಾರು ಎಲ್ಲರೂ ಮಾತನಾಡಬಹುದು. ಆದರೆ ಅಳವಡಿಕೆ, ಅನುಸರಣೆ ಬೆರಳೆಣಿಕೆಯಷ್ಟು ಎಂಬುದನ್ನು ಹಳೆಮನೇ ಲಿಂಗದೇವರು "ಚಿಕ್ಕದೇವಭೂಪ" ನಾಟಕದಲ್ಲಿ ರಾಜಾಡಳಿತದಲ್ಲೂ ರಾಜರಲ್ಲೂ ನುಡಿದಂತೆ ನಡೆಯದೇ ತಮ್ಮದೇ ಆದ ಆಸೆ, ಆಕಾಂಕ್ಷೆ, ಸ್ವಾರ್ಥ, ಲೋಭ,

ಮೋಹ, ಕಾಮಾಂಧರಾಗಿ "ರಾಜನನ್ನು ದೇವರೆಂದೇ" ನಂಬಿದ್ದ ಪ್ರಜೆಗಳಿಗೆ ರಾಜರಿಂದ ಅವರ ಆಡಳಿತ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಸಿಕ್ಕ ಗೌರವ, ರಕ್ಷಣೆ, ಸ್ಥಾನಮಾನ, ನೆಮ್ಮದಿ, ಶಾಂತಿ, ಕಾಳಜಿಯನ್ನು ಸಮಾಜಕ್ಕೆ ದಿಟ್ಟ, ನೇರವಾಗಿ ಸತ್ಯವನ್ನು ಪಾರದರ್ಶಕವಾಗಿ ಉಣಬಡಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳೆಂದು ಘೋಷಿಸಿದರೂ ಅದು ಕೇಳಲು ಹಿತ. ಆದರೆ ಅದರ ಅನುಭವವನ್ನು ಸ್ವಾತಂತ್ರ್ಯಬಂದಾಗಿನಿಂದ ಎಲ್ಲರೂ ಒಂದಲ್ಲ ಎಲ್ಲವನ್ನು ನೋಡಿ, ಕೇಳಿ, ಅನುಭವಿಸಿರುವರು. ಈ ನಾಟಕವನ್ನು ಓದುವರು, ನೋಡುವರು. ಇಂದಿನ ಆಡಳಿತ ಹಾಗೇ ರಾಜತ್ವದ ಆಡಳಿತವನ್ನು ತುಲನೆಮಾಡೇ ಮಾಡುತ್ತಾರೆ. ಅಂದು-ಇಂದಿನ ಸಕಾರಾತ್ಮಕತೆ ಹಾಗೂ ನಕಾರಾತ್ಮಕತೆಯನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ವಿಮರ್ಶಿಸದೇ ಇರಲಾರರು.

ತಮ್ಮ ನಾಟಕಗಳಾದ (೧) ಚಿಕ್ಕದೇವಭೂಪ (೨) ಶಾಪ (೩) ಅಂತೆಂಬರಗಂಡ (೪) ಹೈದರ್ ನಾಟಕಗಳಲ್ಲಿ ಕಂಡುಬರುವ ವಿಭಿನ್ನ ನೋಟಗಳನ್ನು ೫ ಹಂತದಲ್ಲಿ ಬಿತ್ತರಿಸುತ್ತಾ, ವಿಮರ್ಶಾತ್ಮಕವಾಗಿ ಈ ಕೆಳಕಂಡಂತೆ ಗುರ್ತಿಸಬಹುದಾಗಿದೆ.

ಅಂದಿನ ಅವಧಿಯಲ್ಲಿನ ಆಡಳಿತದ

(೧)ರಾಜಕೀಯ

(೨)ಸಾಮಾಜಿಕ

(೩)ಸಾಂಸ್ಕೃತಿಕ

(೪)ಐತಿಹಾಸಿಕ

(೫)ಧಾರ್ಮಿಕ

ಈ ಮೇಲ್ಕಂಡ ವಿಚಾರವಾಗಿ ಮುತ್ತನ್ನು ಪೋಣಿಸಿ ಹಾರವಾಗಿಸುವಂತೆ ಪ್ರತಿವಿಷಯವನ್ನು ಕವಿಮನದಿಂದ ನಾಟಕಕಾರರು ಗಮನಿಸಿ, ಅಳವಡಿಸಿ ನಾಟಕದ ಪ್ರತೀ ಹೆಜ್ಜೆಯಲ್ಲೂ ನ್ಯಾಯ ಒದಗಿಸುವಲ್ಲಿ ಸಫಲರಾಗಿರುತ್ತಾರೆ.

"ಚಿಕ್ಕದೇವರಾಜಭೂಪ" ನಾಟಕದಲ್ಲಿನ ಐತಿಹಾಸಿಕ ವಿಷಯಗಳನ್ನು ತಿಳಿಯುತ್ತಾ ಮುಖ್ಯವಾದ ಅಂಶಗಳನ್ನು ಇತಿಹಾಸ ಪುಟ ಸೇರಿರುವ ವಿಚಾರವನ್ನು ನೋಡೋಣ.

ಇಡೀ ವಿಶ್ವದ ಗಮನಸೆಳೆದ ಸ್ವಚ್ಛನಗರವಾಗಿ ಕಂಗೊಳಿಸುತ್ತಿರುವ (ಮೈಸೂರು) ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ ಎಂದೇ ಪ್ರಖ್ಯಾತವಾಗಿರುವ ಇಂದಿಗೂ ರಾಜಮನೆತನದ ನೆರಳು, ಛಾಪು, ವೈಭವವನ್ನು ಉಳಿಸಿಕೊಂಡಿರುವ ಮೈಸೂರು ರಾಜ್ಯವಾಗಿದ್ದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ.

೧೯೭೩, ನವೆಂಬರ್ ೧, "ಕರ್ನಾಟಕರಾಜ್ಯ"ವೆಂದು ಮರುನಾಮಕರಣ-ಗೊಂಡಿತು ಅಲ್ಲೀತನಕ ಮೈಸೂರು-ಮಹಿಷಪುರ ಎಂದೇ ಗುರ್ತಿಸಲ್ಪಟ್ಟ ಭೌಗೋಳಿಕ-ವಾಗಿ ಸಿರಿಸಂಪದ ಸೌಂದರ್ಯನಗರಿ ಶ್ರೀಶಾರದಾದೇವಿ ನೆಲೆಸಿರುವ ಈ ನಗರಿಯು ಸ್ವಾತಂತ್ರ್ಯಕ್ಕೆ ಮುನ್ನ ರಾಜರ ಆಡಳಿತಕ್ಕೆ ಒಳಪಟ್ಟಿತ್ತು. ಹತ್ತಾರು ರಾಜರು ಈ ಮೈಸೂರು ಸಂಸ್ಥಾನವನ್ನು ಆಳಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ ಎಂದೂ ಜನಸಾಮಾನ್ಯರಿಗೂ ಅರಿವಿಗೆ ಇದ್ದೇ ಇರುತ್ತದೆ.

ಈ ಮೈಸೂರನ್ನು ಪ್ರತಿಬಿಂಬಿಸುವ, ಗಮನಸೆಳೆಯುವಲ್ಲಿ ಅರಮನೆಯೂ ಒಂದಾಗಿದೆ. ಮೈಸೂರಿನ ಅರಮನೆಗೆ ಶತಶತಮಾನಗಳ ಇತಿಹಾಸವಿದೆ. ಅಂದರೆ ಕ್ರಿ.ಶ. ೧೮೦೦ರಿಂದ ೧೮೦೪ರ ಅವಧಿಯಲ್ಲಿ ಕಟ್ಟಿಗೆ ಮತ್ತು ಮರದಿಂದ ನಿರ್ಮಾಣ ಮಾಡಿದದ್ದು ಆಕರ್ಷಕವಾಗಿದ್ದರೂ ಸುರಕ್ಷಿತವಾಗಿರಲಿಲ್ಲ. ಕಾರಣಾಂತರದಿಂದ ಅದು ಬೆಂಕಿಗೆ ಆಹುತಿಯಾಯಿತು. ೧೮೯೭ರ ಫೆಬ್ರವರಿ ೨೮ರ ಅವಧಿಯಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಈಗಿರುವ ಹೊಸ ಮಾದರಿಯಲ್ಲಿ ಜಗಮಗಿಸುವ ಭವ್ಯ ಜಗತ್ಪ್ರಸಿದ್ಧ ಅರಮನೆ ನಿರ್ಮಾಣವಾಯ್ತು.

ಈ ನಾಟಕದಲ್ಲಿ ಹಳೆಮನೆಯವರ ಉದ್ದೇಶ ನೇರ ಹಾಗೂ ಸ್ಪಷ್ಟ. ಗತಕಾಲದ ವೈಭವವನ್ನು ಸ್ಮರಿಸಿಕೊಳ್ಳುವುದಾಗಲಿ, ಐತಿಹಾಸಿಕ ವ್ಯಕ್ತಿಯೊಬ್ಬನ ವ್ಯಕ್ತಿಗತ ಮಾನಸಿಕ ಪ್ರಕ್ರಿಯೆಗಳನ್ನು ವಿಶ್ಲೇಷಿಸುವುದಾಗಲಿ ಹಳೇಮನೆ ಲಿಂಗದೇವರುರವರ ಉದ್ದೇಶವಾಗಿರದೇ ಐತಿಹಾಸಿಕ ಘಟನೆಯೊಂದರ ಸುತ್ತ ಹಾಸುಹೊಕ್ಕಾಗಿ ಬೆಳೆಯುವ ಕ್ರಿಯೆ-ಪ್ರಕ್ರಿಯೆಗಳನ್ನು ಚಿತ್ರಿಸುತ್ತಾ ಶೋಷಣೆಯಲ್ಲಿ ಮುಖ್ಯವಾಗಿ ಆರ್ಥಿಕ, ರಾಜಕೀಯ, ಧಾರ್ಮಿಕ ಮುಖಗಳನ್ನು ತೆರೆದಿಡುವುದೇ ಆಗಿತ್ತೆಂಬುದು ಓದುತ್ತಾ ಅರಿವಿಗೆ ಬರುತ್ತದೆ. ಅಂದಿನ ಪ್ರಭುತ್ವದ ಆಡಳಿತದಲ್ಲಿ ಹಾಸುಹೊಕ್ಕಾಗಿರುವ ಶೋಷಣೆಯ ಆರ್ಥಿಕ, ರಾಜಕೀಯ, ಧಾರ್ಮಿಕ ಮುಖಗಳನ್ನು ಶೋಧಿಸುವುದೇ ಆಗಿದೆ.

ಶೋಷಕ, ಶೋಷಿತರ ಸಂಬಂಧವನ್ನು ಗುರ್ತಿಸುವುದು. ಈ ಒಂದು ನಡೆಯಲ್ಲಿ ಹಳೆಮನೆಯವರ ಚಿಕ್ಕದೇವಭೂಪ ಒಂದು ಸಮರ್ಥ ಪ್ರಯತ್ನವಾಗಿದೆ.

ವೈಚಾರಿಕವಾಗಿ ಮಾತ್ರವಲ್ಲದೆ ರಂಗಭೂಮಿ ಸಾಧ್ಯತೆಗಳ ದೃಷ್ಟಿಯಿಂದ ರಂಗಭೂಮಿ, ಕಲಾವಿದರಿಗೂ ದೊಡ್ಡ ಸವಾಲುಗಳನ್ನು, ವೈಭವಯುತವಾದ ಉಡಿಗೆ-ತೊಡಿಗೆ, ಧ್ವನಿ-ಬೆಳಕನ್ನು, ನಮ್ಮ ದೇಶದ ಬೆನ್ನೆಲುಬಾದ ರೈತ ಸಮುದಾಯವನ್ನು ಹಾಗೇ ನಮ್ಮ ದೇಶದ ಮತ್ತೊಂದು ಪಿಲ್ಲರ್ ಭದ್ರ ರಕ್ಷಣೆಯ ಹರಿಕಾರರಾದ ಸೈನಿಕರು ಹಾಗೂ ಪ್ರಜೆಗಳನ್ನು ಅಳವಡಿಸಿಕೊಂಡು ಸರಳ ಸೂಚ್ಯ ವೈಚಾರಿಕ ಸತ್ವಯುತ ಸ್ವತಂತ್ರ ಚಿಂತನೆಗೆ ಅವಕಾಶ ಉತ್ತಮವಾಗಿದ್ದು, ಈ ನಾಟಕದಲ್ಲಿ ಆಯಾ ಪ್ರದೇಶಕ್ಕೆ ತಕ್ಕಂತೆ ಭಾಷೆ, ದೃಶ್ಯ, ಆಡುಮಾತುಗಳನ್ನು ಅಳವಡಿಸಿಕೊಂಡಿದ್ದು, ಹಾಡುಗಳು, ಅದಕ್ಕೆ ತಕ್ಕ ಹಿನ್ನೆಲೆ ಸಂಗೀತ, ಜನಪದ ವಾದ್ಯಗಳಾದ ಕಂಸಾಳೆ ಹಾಗೂ ಮಂಟೇದೇವರ ವಾದ್ಯ ತುಂಬಾ ಸಮಂಜಸವಾಗಿ ಚಿತ್ರಿತವಾಗಿದೆ.

ಚಿಕ್ಕದೇವರಾಯನ ವೇಷಭೂಷಣದ ವಿವರ-ಮೀಸೆ, ಕಿರೀಟ, ಹಣೆಯಲ್ಲಿ ನಾಮವಜ್ರದ ಬಾಸಿಂಗ, ರಾಣಿಯರ ಉಡುಗೆ-ತೊಡಿಗೆ ಸಿಂಹಾಸನವನ್ನು ತೆರೆದಿಡುತ್ತಾ ಮೈಸೂರಿನ ರಾಜಒಡೆತನವನ್ನು ಸಮೀಕರಿಸಿ ಇತಿಹಾಸದಲ್ಲಿ ಎಲ್ಲಾ ಕಾಲಕ್ಕೂ ಒಂದೇ ಆಳುವ ವರ್ಗ ದುಡಿಯುವ ವರ್ಗದ ಸಂಕಷ್ಟಗಳು ಮತ್ತೆ ಮತ್ತೆ ಸ್ಪಷ್ಟವಾಗುತ್ತವೆ.

ಐತಿಹಾಸಿಕವಾಗಿ ನೋಡುವುದಾದರೆ ಐತಿಹಾಸಿಕವಾಗಿ ರಾಜಪ್ರಭುತ್ವಕ್ಕೆ ನಿಯಂತ್ರಣ ಕಂಡುಬರುತ್ತದೆ. ರಾಜಮನೆತನದ ಪ್ರಭಾವ ಅವರ ವರ್ತನೆ ಎಂದರೆ ಸಾಮಾಜಿಕ ಕಾಳಜಿಗೆ ಆದ್ಯತೆ ನೀಡದೆ ಸುಖ-ಸಂಪದ ಭೋಗಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ರಸಿಕತೆ ಸಕಲಕಲೆಯಾಗಿ ದೊರೆಗಳು "ರಸಿಕಶಿಖಾಮಣಿ"ಗಳಾಗಿರುತ್ತಾರೆ. "ಹೆಣ್ಣು ಎಂದರೆ ಭೋಗದ ವಸ್ತುವಾಗಿ ನೋಡುವರು, ಹಾಗೆ ಬಳಸಿ ಹೆಣ್ಣನ್ನು ಹಾಸುಂಡು ಬೀಸಿ ಹೊಗೆದಂಗ" ಅಂದರೆ ಊಟದ ಬಾಳೆಎಲೆಯಂತೆ, ತಾಂಬೂಲ ಜಗಿದಾಂಗೇ ಜಗಿದು ಉಗಿವಂತಿತ್ತು. ವೀಳ್ಯದ ಹೊನ್ನಮ್ಮ ಸೂಳೇಕೇರಿ ಕಲಾವತಿ, ಪಟ್ಟದರಾಣಿ ದೇವಾಂಬೆ ಎಲ್ಲಾ ಒಂದೇ ಶತಶತಮಾನದಿಂದ ಅರಸರ ಬಾನಗಡೀನೆ ದೊಡ್ಡದು, ಸಹಜವಾಗೀ ರಸಿಕರೇ, ಶತಶತಮಾನಗಳಿಂದ ರಾಜರತ್ನ ರಾಜತ್ವವನ್ನು ಹೊಗಳಿ ಹೊಗಳಿ ಅವರು ಉಬ್ಬಿಹೋಗಿ ತಾವು ಏನೇ ಹೇಳಿದರು ಮಾಡಿದರೂ ಅದರ ಬಗ್ಗೆ ಒಮ್ಮೆಯೂ ಹಿಂದಿರುಗಿ ನೋಡದೆ ಸರ್ವಾಧಿಕಾರಿ ಪ್ರವೃತ್ತಿ ಅಂದಿನಿಂದ

ಈವರೆಗೂ ಮುಂದೆಯೂ ಸರಿಪಡಿಸಲಾಗದ ವಾಸ್ತವ ಸತ್ಯ ಅಂದರೆ ಆನೆ ನಡೆದದ್ದೇ ದಾರಿ ಎಂಬಂತಾಗಿದೆ. ಇತಿಹಾಸ ಕೆದಕುತ್ತಾ ಸಾಗಿದರೆ ಅವರಷ್ಟು ತಪ್ಪು ಮಾಡಿರೋರೆ ಇಲ್ಲ ಎಂಬ ದಾಖಲೆ ವಿವರಗಳೊಂದಿಗೆ ಇತಿಹಾಸ ಬಿಚ್ಚಿಡುತ್ತಾ ಸಾಗುತ್ತದೆ. ಯಾರೋ ಒಬ್ಬರು ಇಬ್ಬರೋ ಇತಿ–ಮಿತಿ ಅರಿತು ಗಡಿದಾಟದೇ ಪ್ರಜೆಗಳ ಬಗ್ಗೆ ಪ್ರಗತಿಯತ್ತ ಚಿಂತಿಸಿ ಹುತಾತ್ಮರಾದವರಿರಬಹುದು. ಆದರೆ ಅಂತಹವರ ಸಂಖ್ಯೆಯೇ ಕಡಿಮೆ. ಅದು ಸಹ ಇಂದಿನಂತೆಯೇ.

ಇತಿಹಾಸದ ಈ ಘಟನೆಗಳು ಕ್ರಮವಾಗಿ ಮೈಸೂರಿನ ಸುತ್ತಮುತ್ತಲಿನ ಶ್ರೀರಂಗಪಟ್ಟಣ, ನಂಜನಗೂಡು, ತಾಯೂರು, ನರಸೀಪುರ ಇತ್ತಲೇ ಸುಳಿದಾಡಿ ಭೂತವರ್ತಮಾನವನ್ನು ಮರುಕಳಿಸಲು ಮೈಸೂರು ಸಂಸ್ಥಾನದ ಆಳ್ವಿಕೆ ನೋವು–ನಲಿವು, ಭೂತವರ್ತಮಾನ ತೇಲಿದಂತೆ ಆಳುವವರ–ಆಳಿಸಿಕೊಳ್ಳುವವರ ಸಂಬಂಧ, ಒಡನಾಟ, ಸಿಂಹಾಸನಕ್ಕಾಗಿ ನಡೆಯುವ ಹೋರಾಟ ತಂತ್ರ, ಸಾವು–ನೋವು ಇವೆಲ್ಲ ಸತ್ಯವೇ?

ಹೌದು, ಸತ್ಯವೆಲ್ಲಿದೆ ಸತ್ಯವೆಲ್ಲಾ ಶೂನ್ಯ ಎಂಬಂತೆ ಈ ಅಧ್ಯಯನದಿಂದ ಕಂಡುಬಂದಿದೆ. ಇಡೀ ರಾಜವಂಶದ ಆಳ್ವಿಕೆ ಬಗ್ಗೆಯೇ ಈ ನಾಟಕ ರಚಿಸಲಾಗಿದೆ. ಆಡಳಿತಾತ್ಮಕವಾಗೆ ಚಿತ್ರಿಸಲಾಗಿದೆ.

ಈ ನಾಟಕದ ನಾಯಕ "ಚಿಕ್ಕದೇವರಾಜ" ಪ್ರಭುತ್ವಕ್ಕಾಗಿ ಕೆಂಪರಾಜ ಅರಸನನ್ನು ಕೊಲ್ಲಿಸಿ ಸಿಂಹಾಸನರೂಢನಾಗುವುದು. ಅದರ ಬಗ್ಗೆ ಹಳೆಮನೆ ಲಿಂಗದೇವರು ಅವರು ಸೈನಿಕರ ಸಂಭಾಷಣೆಯ ಮೂಲಕ ಸಾರವನ್ನು ರಾಜತ್ವದ ಮುಖವಾಡವನ್ನು ಸರಿಸುತ್ತಾ ಸತ್ಯದರ್ಶನ ಮಾಡಿಸಿದ್ದಾರೆ.

"ಅಂದರೆ ಆ ಸಂಭಾಷಣೆಯಲ್ಲಿ ಅರಿವಿಗೆ ಬರುವ ಮುಖ್ಯವಾದ ಅಂಶವೆಂದರೆ – ಪ್ರಭುತ್ವ, ಆಡಳಿತದ ದೋಷಗಳು ಅದರ ಎದುರಾಡಲಾಗದ ಪ್ರಜೆಗಳ ಪರಿಸ್ಥಿತಿ. ಪರಸ್ಪರ ಪ್ರಶ್ನೆ ಬೆಕ್ಕಿಗೆ ಗಂಟೆ ಕಟ್ಟೋರ್‍ಯಾರು? ಎಂದು

ಪ್ರಭುತ್ವದೆದುರು ನಿಲ್ಲುವರ್‍ಯಾರು?
ಅರಸ/ಅರಮನೆಯ ಆಜ್ಞೆಗಳಿಗೆ ಎದುರಾಡಿ
ಬದುಕೋದುಂಟೇ?

ಪ್ರಜೆಗಳ, ಜನಶಕ್ತಿ, ಸಮಾಜದ ವಿವಿಧಸ್ತರಗಳಲ್ಲಿ ರಾಜತ್ವ ನಡೆಸುವ ಪಿತೂರಿ ಒಂದೇ ಎರಡೇ? ಅಧಿಕಾರದಾಹಕ್ಕೆ "ಕೊಲೆಗಳೇ ಮೆಟ್ಟಿಲು" ಸಂಚು ಯಾವುದಾದರೇನು? ಸಂಚಿಗೆ ಬಲಿಪಶು ಯಾರಾದರೇನು? ಅರಸ-ಅರಮನೆಯ ಆಜ್ಞೆಗಳಿಗೆ ತಲೆಬಾಗಬೇಕಾದ ಅನಿವಾರ್ಯತೆ ಜನಸಾಮಾನ್ಯರದಾಗಿತ್ತು. ಇದನ್ನು ನಾವು ಚಿಕ್ಕದೇವಭೂಪದಲ್ಲೇ ಅಲ್ಲ ಶಾಪ "ಹೈದರ್", ಅಂತೆಂಬರ ಗಂಡದಲ್ಲೂ ಈ ದಬ್ಬಾಳಿಕೆಯನ್ನು ಕಾಣಬಹುದಾಗಿದೆ. ಕೇವಲ ತೆರೆಮರೆ ಸಂಭಾಷಣೆಗಳಿಂದ ಮಾನವ ಸಹಜ ಅನಿಸಿಕೆ, ಬೇಕು ಬೇಡ, ಸರಿತಪ್ಪು, ಬೇಸರ ಈ ಎಲ್ಲಾ ವಿಚಾರಗಳು ಸಂಭಾಷಣೆಯಾಗಿ ಸಮಾಜಕ್ಕೆ ತಲುಪಿಸುತ್ತದೆ.

ಕಾಲ ಎಷ್ಟೇ ಬದಲಾಗಿ ವೈಜ್ಞಾನಿಕವಾಗಿ ಸಮಾಜ ಮುಂದುವರೆದರೂ ಸಹ ಈ ಆಚಾರ ವಿಚಾರ ಜಾತಿ ಧರ್ಮ ಈ ನೆಲಗಟ್ಟಿನಿಂದ ಈ ಮನುಷ್ಯ ಹೊರಬರಲಾರ ಎಂಬುದು ಅವರ ದೂರಾಗಿ ಸಾಹಿತಿಯ ವೈಜ್ಞಾನಿಕ ಚಿಂತನೆ ಕ್ರಾಂತಿ ಮನೋಭಾವ ಭಾವನಾತ್ಮಕವಾಗಿ ಆಂತರಿಕವಾಗಿ ನಾವೆಷ್ಟು ಮುಂದುವರಿದಿದ್ದೇವೆ? ಆತ್ಮಾವಲೋಕನಕ್ಕೆ ಹೆದ್ದಾರಿಯಾಗಿದೆ. ಸಾಮಾಜಿಕ ಚಿಂತಕರಾಗಿ ಸಹಸಮಾಜದ ಚಿಂತನ ಮನೊಭಾವ ನಮ್ಮ ಬದುಕಾಗಬೇಕು ಎಂಬುದು ಅವರ ಬದುಕು ಬರಹದಲ್ಲಿ ಬಿಂಬಿತವಾಗಿದೆ.

ಸಂಸ್ಥಾನದ ಬೊಕ್ಕಸ ಭರ್ತಿಮಾಡಲು ಹೊಸ ಹೊಸ ತೆರಿಗೆಯ ರೂಪದಲ್ಲಿ ರೈತರ ಸುಲಿಗೆ ನಿರಂತರ ನಡೆಯುತ್ತಿದ್ದು ಆದರ್ಶ, ಉದ್ದೇಶ ಬದುಕಿನಲ್ಲಿ ಕಾಣುತ್ತಿಲ್ಲ. ಇಂದಿಗೂ ಜೀವನವನ್ನು ಪ್ರೀತಿಸುವವರ ಬದುಕಿನ ಗೊಂದಲ ಬಡತನ, ನಿರುದ್ಯೋಗ ಅರಿಹೊಟ್ಟೆಗೆ ಬರವಿಲ್ಲ. ಹಾಗೇ ಮತ್ತೊಂದೆಡೆ ಐಷಾರಾಮಿ ಜೀವನ, ಸ್ವರ್ಗಸುಖ ಸವಿಯುವ ಮನುಜರಿಗೇನು ಕಡಿಮೆ ಇಲ್ಲ. ರಾಜ್ಯ ರಾಜಕೀಯದಲ್ಲಿ ಜನಜೀವನದ ವ್ಯಾಪಾರವು ವಿಮುಖಧೋರಣೆಯಾಗಿ ಈ ಆಡಳಿತ ವ್ಯವಸ್ಥೆಯ ಬಗ್ಗೆ ಸಾಹಿತಿಯು ತಿರಸ್ಕಾರ ಭಾವವನ್ನು ಪ್ರತಿಬಿಂಬಿಸಿದ್ದಾರೆ.

ಚಿಕ್ಕದೇವಭೂಪ ನಾಟಕದಲ್ಲಿನ ನೆಲೆಗಟ್ಟಿನಲ್ಲಿ ಪ್ರಸ್ತುತ ಹಲವು ರಾಜಕೀಯದ ಎಳೆಗಳು ಹಾಸುಹೊಕ್ಕಾಗಿವೆ. 'ಚಿಕ್ಕದೇವಭೂಪ'ದಲ್ಲಿ ರೈತ ಭಂಡಾಯದ ಸುತ್ತ ರಾಜಕೀಯ ಬೆಳೆಯತೊಡಗಿದೆ. ಚಿಕ್ಕದೇವಭೂಪದಲ್ಲಿ ಸೂತ್ರಧಾರ ಮತ್ತು ಲಾವಣಿಕಾರರನ್ನು ಮುಖಾಮುಖಿಯಾಗಿಸಿ ಧೋರಣೆಗಳ ತಿಕ್ಕಾಟವನ್ನು

ಅನಾವರಣಗೊಳಿಸಿ ಸೂತ್ರಧಾರ ಕ್ರಮೇಣ ಲಾವಣಿಕಾರನ ನಿಲುವಿಗೆ ಪರಿವರ್ತನೆ-ಗೊಳ್ಳುವಂತೆ ಮಾಡಿರುತ್ತಾರೆ.

ಮೈಸೂರು ಒಡೆಯರಲ್ಲಿ ಬಂದ ಚಿಕ್ಕದೇವರಾಜನ ಕಾಲದಲ್ಲಿ ನಡೆದ ರೈತ ಬಂಡಾಯದ ಕಥೆಯನ್ನು ಒಳಗೊಂಡಿದ್ದು ಅದಕ್ಕೆ ಪ್ರಮುಖ ಕಾರಣವೆಂದರೆ

(೧) ರೈತರ ಮೇಲೆ ವಿಚಿತ್ರ ಸುಂಕಗಳನ್ನು ಹೇರಿದ್ದು ಇದರಿಂದ ಕುಪಿತಗೊಂಡು ರಾಜತ್ವದ ವಿರುದ್ಧ ಬೇಸತ್ತು ಬಂಡೆದ್ದರು.

(೨) ವೀರಶೈವರು ಬಂಡಾಯ ಎದ್ದರೂ ಅವರ ಬಂಡಾಯವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲು ರಾಜತ್ವ ಮುಂದಾಗಿದ್ದು

(೩) ಚಿಕ್ಕದೇವರಾಜನ ಪ್ರಧಾನಿ ವಿಶಾಲಾಕ್ಷಪಂಡಿತ ಕೊಲೆಯಾದದ್ದು ರಾಜರ ಅಧಿಕಾರ ದಾಹ, ರಾಜಕೀಯ ದುರಾಡಳಿತದಿಂದ.

(೪) ಚಿಕ್ಕದೇವರಾಯನ ೧೪ ವರ್ಷದ ಆಡಳಿತ ಅತ್ಯಂತ ಶಾಂತಿಯುಕ್ತ-ವಾಗಿತ್ತೆಂದು ಇತಿಹಾಸಕಾರರಿಂದ ಬಣ್ಣಿಸಲ್ಪಟ್ಟಿದೆ.

(೫) ಸೈನಿಕರಿಂದಾದ ಲೂಟಿ, ಅತ್ಯಾಚಾರವೂ ಕಾರಣ.

ಚಿಕ್ಕದೇವರಾಯನು ೧೬೭೨ರಲ್ಲಿ ಅಧಿಕಾರಕ್ಕೆ ಬಂದರು. ೧೬೭೨ರಲ್ಲಿ ಉತ್ತರಭಾರತವನ್ನು ಮೊಗಲ್ ದೊರೆ ಔರಂಗಜೇಬನು ಆಳುತ್ತಿದ್ದ. ಕರ್ನಾಟಕದಲ್ಲಿ ವಿಜಯನಗರ ಹಾಳಾಗಿ ಬಿದನೂರಿನ ಶಿವಪ್ಪನಾಯಕ ಆಳುತ್ತಿದ್ದ. ಶ್ರೀರಂಗಪಟ್ಟಣವನ್ನು ೧೬೧೦ರಲ್ಲಿ ಮೈಸೂರು ಒಡೆಯರು ವಶಪಡಿಸಿಕೊಂಡರು. ಅಂದರೆ ಮೈಸೂರು ಒಡೆಯರಿಗೆ ಅಧಿಕಾರ ದೊರೆತು ಸುಮಾರು ೬೦ ವರ್ಷಗಳಾಗಿದ್ದವು.

ಚಿಕ್ಕದೇವರಾಜ ಅಧಿಕಾರಕ್ಕೆ ಬಂದಾಗ ದೇಶ ಹತ್ತು ಹಲವು ಸಂಕಷ್ಟಗಳನ್ನು ಎದುರಿಸಬೇಕಾಗಿತ್ತು. ಒಂದೆಡೆ ಪಾಳೇಗಾರರು ದಂಗೆ ಏಳುತ್ತಿದ್ದರು. ಈ ಪಾಳೇಗಾರರನ್ನು ಚಿಕ್ಕದೇವರಾಜ ಮಣಿಸಬೇಕಿತ್ತು.

ಇನ್ನೊಂದೆಡೆ ಹೊರಗಿನ ಶತ್ರುಗಳ ದಾಳಿಯನ್ನು ಹತ್ತಿಕ್ಕಬೇಕಿತ್ತು.

ಆಧುನಿಕ ಶಸ್ತ್ರಗಳನ್ನು ಕೊಳ್ಳಲು ಹಣಬೇಕಿತ್ತು.

ಮತ್ತೊಂದೆಡೆ ಯದುವಂಶ ಛಾಪನ್ನು ಎತ್ತಿ ರಾಜ್ಯವೊಂದನ್ನು ಸ್ಥಾಪಿಸಬೇಕಿತ್ತು.

ನೂತನ ರಾಜ್ಯ ಸ್ಥಾಪನೆಗಾಗಿ

ಈ ಎಲ್ಲಾ ಕಾರಣಗಳಿಂದ "ಅಪಾರ ಹಣದ ಅವಶ್ಯಕತೆ ತುಂಬಿತುಳುಕುತ್ತಿತ್ತು. ಹಾಗಾಗಿ ರಾಜಬೊಕ್ಕಸ ತುಂಬುವುದು ಚಿಕ್ಕದೇವರಾಜ ಒಡೆಯರಿಗೆ ಅನಿವಾರ್ಯವಾಗಿತ್ತು.

ಹಾಗಾಗಿ ಒಡೆಯರು ರಾಜ್ಯದ ಆದಾಯದ ಮೂಲವಾಗಿದ್ದ ಹಳ್ಳಿಗಳ ಮೇಲೆ ತೆರಿಗೆ ಹೇರಬೇಕಾಯ್ತು. ರೈತರು ಸಂಕಷ್ಟದಲ್ಲಿರುವಾಗ ಮಳೆ-ಬೆಳೆ ಕೊರತೆಯಲ್ಲೂ ಅಧಿಕ ತೆರಿಗೆ ಸಂಕಷ್ಟದ ವಿಷಯವಾಗಿ ರೈತರು ಪ್ರಥಮವಾಗಿ ಬಂಡಾಯವೆದ್ದರು.

ಇಂದಿನ ರೈತ ಹೋರಾಟದಂತೆಯೇ ಹಿಂದಿನ ರೈತ ಹೋರಾಟವು ಹತ್ತು ಹಲವು ಅಂಶಗಳೂ ಇಂದಿಗೂ ಪ್ರತಿಧ್ವನಿಸುತ್ತವೆ. ಸಮಕಾಲೀನ ಅಂಶಗಳನ್ನು ನಾವಿಲ್ಲಿ ಗಮನಿಸಬಹುದು.

ದುಡಿಯುವ ವರ್ಗದ ಆಶಯ ಮತ್ತು ಬದುಕುವ ಹಕ್ಕಿಗೆ ಹೋರಾಡುವ ಛಲ ಇತಿಹಾಸದಲ್ಲಿ ಎಲ್ಲಾ ಕಾಲಕ್ಕೂ ಒಂದೇ ಎಂಬುದು ನಾವಿಲ್ಲಿ ಅರಿಯಬಹುದೆಂಬುದು ಸ್ಪಷ್ಟವಾಗುತ್ತದೆ.

ಅಂದರೆ ಆಳುವ ವರ್ಗದ ಅಧಿಕಾರವು ರೈತಬಂಡಾಯದ ದಂಗೆಯನ್ನು ಹತ್ತಿಕ್ಕಲು ಅಧಿಕಾರಶಾಹಿಯಾಗಿ ಹಲವಾರು ಪ್ರಯೋಗಗಳು ನಡೆಯುತ್ತವೆ. ಇದರಿಂದ ನೊಂದವರ ಸಂಖ್ಯೆ ಅಪಾರ.

ಬೊಕ್ಕಸ ತುಂಬಿಸಲು ಹೇರಿದ ತೆರಿಗೆಳನ್ನು ಆಳುವ ವರ್ಗವು ಕೂಡ ಹೋರಾಟ ಹತ್ತಿಕ್ಕುವುದಕ್ಕೆ ತನ್ನೆಲ್ಲ ಪ್ರಯತ್ನಗಳನ್ನು ಇಲ್ಲಿ ಬೀಳಿಸುತ್ತದೆ.

"ಜಾತೀ ರಾಜಕೀಯವೂ ತನ್ನ ಸಮಯ ಸಾರ್ಥಕವನ್ನು ಪ್ರದರ್ಶಿಸುತ್ತದೆ. ಒಂದು ಭಾವನಾವಾದಿ ಧೋರಣೆಯಿಂದ ಈ ಐತಿಹಾಸಿಕ ಪ್ರಕ್ರಿಯೆ, ನಿರ್ದಿಷ್ಟ ಸಾಮಾಜಿಕ ಸಂದರ್ಭ ಘಟಿಸಿದ್ದು ಎಂಬ ಧೋರಣೆಯಿಂದ ಚಿತ್ರಿತವಾಗಿದೆ.

ಈ ನಾಟಕದಲ್ಲಿ ಸೂತ್ರಧಾರ ಮತ್ತು ಲಾವಣಿಕಾರ ಎಂಬ ೨ ಪಾತ್ರಗಳನ್ನು ತರುತ್ತಾರೆ. ಒಂದರ್ಥದಲ್ಲಿ ಈ ಪಾತ್ರಗಳಿಗೂ ನಡೆದ ಘಟನೆಗಳಿಗೂ ನೇರ ಸಂಬಂಧವಿರದೇ ಅವುಗಳ ಔಚಿತ್ಯ ಭಿನ್ನರೀತಿಯಾಗಿ ತೋರುಬರುತ್ತದೆ. ಈ ೨ ಪಾತ್ರಗಳೂ ನಾಟಕದಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಸೂತ್ರಧಾರ ಪ್ರಥಮವಾಗಿ ಸಾಂಪ್ರದಾಯಿಕವಾದ ಇತಿಹಾಸ ಸ್ಥಗಿತವಾದದ್ದು ಎಂಬ ಧೋರಣೆಯ ಪ್ರತೀಕವಾಗಿ ಕಂಡುಬರುತ್ತಾನೆ. ಅದೇ ಲಾವಣಿಕಾರ ಅದಕ್ಕೆ ವಿರೋಧವಾಗಿ ಇತಿಹಾಸ ಚಲನಶೀಲವಾದದ್ದು ಎಂಬ ಧೋರಣೆಯು ಕಂಡುಬರುತ್ತದೆ.

ಆದರೆ ಕೊನೆಗೆ ಸೂತ್ರಧಾರನೂ ಲಾವಣಿಕಾರರ ಧೋರಣೆ ಒಂದೇ ಆಗುತ್ತದೆ. ಚಿಕ್ಕದೇವರಾಜ ಮತ್ತು ವಿಶಾಲಾಕ್ಷ ಪಂಡಿತರು ಪ್ರಜೆಗಳ ಮೇಲೆ ಅಪಾರ ತೆರಿಗೆಯನ್ನು ವಿಧಿಸುವುದು ಇಲ್ಲಿಯ ಕೇಂದ್ರ ವಿಷಯವಾಗಿ ಕಂಡುಬಂದು ಇದರಿಂದ ಸಿಡಿದೆದ್ದ ರೈತ ಸಮೂಹ ಸಂಕಷ್ಟದಿಂದ ರೈತರೆಲ್ಲರ ಆಕ್ರೋಶ, ಆರ್ಭಟಿತರಾಗಿ ಸಿಂಹಾಸನದೆದುರು ಯುವ ರೈತನ ನೇತೃತ್ವದಲ್ಲಿ ರೈತರು, ಸಂಘಟಿತರಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತೆ. ಈ ಸುಳಿವ ಅರಿತ ಚಿಕ್ಕದೇವರಾಜ ವಿಶಾಲಾಕ್ಷಪಂಡಿತನೊಂದಿಗೆ ಪ್ರಜೆಗಳ ಕಷ್ಟವಿಚಾರಿಸಲು ತಾನೇ ಖುದ್ದಾಗಿ ಬರುವ "ತಂತ್ರ" ಹೂಡುತ್ತಾನೆ. ಹಾಗೇ ನಂಜನಗೂಡಿಗೆ ಆಗಮಿಸುತ್ತಾನೆ.

ಇದರ ಕಾರಾಸ್ಥಾನವನ್ನರಿಯದ ಮುಗ್ಧ ರೈತರು ರಾಜರ ಆಹ್ವಾನಕ್ಕೆ ಮಣಿದು ರಾಜನಿದ್ದ ಬಿಡಾರದಲ್ಲಿ ಅತಿಥ್ಯ ಸ್ವೀಕರಿಸಲೂ ಬಂದದ್ದು ಆಗ ಮೊದಲೇ ಮಾಡಿದ ಸಂಚಿನಂತೆ ಯೋಚಿತ ಕುತಂತ್ರದಂತೆ ರಾಜನ ಸೈನಿಕರಿಂದ ರೈತರೆಲ್ಲಾ ಕೊಲೆಯಾದದ್ದು; ಒಂದು ರಾಜಕೀಯ ಸಂಚಿನಿಂದ ಸೈನಿಕರೆಲ್ಲಾ ಮನುಷ್ಯರನ್ನು ಮಾರಿಗಳೋ ಎನ್ನುವಂತೆ ಹಿಂಸಿಸಿ ಕೊಂದರಲ್ಲ ರೈತರನ್ನು ಅವರ ಒಗ್ಗಟ್ಟನ್ನು ತಂತ್ರದ ಮೂಲಕ ಅವನು ವಿಫಲಗೊಳಿಸುತ್ತಾನೆ. ರೈತರ ಅಧಿಕಾರಿಯ ಸಹಕಾರದಿಂದ ಮತ್ತೆ ರೈತರ ಕೊಳೆಯಾಗುತ್ತದೆ. ಜಂಗಮ ಬಂಧಿತನಾಗಿ ಕಂಡಲ್ಲಿ ಜಂಗಮರ ಕೊಲೆ ಮಾಡಲು ಆಜ್ಞೆ ಜಾರಿ ಮಾಡುತ್ತಾನೆ ದೊರೆ ಚಿಕ್ಕದೇವರಾಜ.

ಈ ಘಟನೆಯಿಂದಾಗಿ ಚಿಕ್ಕದೇವರಾಜನ ವಿರುದ್ದ ಎದ್ದ ಬಂಡಾಯವೆಲ್ಲ ದಮನವಾಗುತ್ತದೆ. ಜಂಗಮರ ಕಡೆಯವನೊಬ್ಬನಿಂದ ವಿಶಾಲಾಕ್ಷಪಂಡಿತನ ಕೊಲೆಯಾಗುತ್ತದೆ. ವಿಶಾಲಾಕ್ಷಪಂಡಿತನ ಸಾವಿನ ನಂತರ ತಿರುಮರಾರ್ಯ ಅಮಾತ್ಯ ಪದವಿ ವಹಿಸಿಕೊಳ್ಳುತ್ತಾನೆ. ಇದರಿಂದ ಚಿಕ್ಕದೇವರಾಜನ ಅಧಿಕಾರ ಭದ್ರವಾಗುತ್ತದೆ.

ಅಂದರೆ ಸಾವಿನ ದರ್ಬಾರಿನೊಂದಿಗೆ ಹಲವಾರು ಸಾವುನೋವುಗಳ ಫಲವಾಗಿ "ಸಿಂಹಾಸನ" ಚಿಕ್ಕದೇವರಾಜನ ವಶವಾಯ್ತು. ಅಂದರೆ ಸಾವಿನ ದರ್ಬಾರಿನ ನಂತರ, ರತ್ನಖಚಿತ ಸಿಂಹಾಸನದ ದರ್ಬಾರು "ರಾಜಕೀಯ ತಂತ್ರ ಪಿತೂರಿ"ಗಳಿಂದ ವಶವಾದವು ಎಂದರೆ ತಪ್ಪಾಗಲಾರದು. ಆದರೆ ಆಳುತ್ತಿದ್ದವನು ಒಬ್ಬ ರಾಜ! ಆದ್ದರಿಂದ ರಾಜತ್ವ ಇಲ್ಲಿನ ರಾಜಕೀಯ ವ್ಯವಸ್ಥೆ. ಈ ರಾಜಕೀಯ ವ್ಯವಸ್ಥೆಯಲ್ಲಿರುವ ಊಳಿಗಮಾನ್ಯ ಸಾಮಾಜಿಕ ಸ್ಥಿತಿಯ ದ್ವಂದ್ವಗಳನ್ನು ಸಮರ್ಥವಾಗಿ ಚಿತ್ರಿಸಿರುತ್ತಾರೆ.

ಊಳಿಗಮಾನ್ಯ ವ್ಯವಸ್ಥೆಯು ಅವಿಭಾಜ್ಯ ಅಂಗ ಜಾತಿಯ ವ್ಯವಸ್ಥೆ ಅರಮನೆಯಲ್ಲಿರುವ ಬೇರೆ ಬೇರೆ ಜಾತಿಗಳಿಗೆ ಸೇರಿದ ಮಂತ್ರಿಗಳು ತಮ್ಮ ಪ್ರಭಾವವನ್ನು ತಮ್ಮದೇ ಆದ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಜೋಗಿಜಂಗಮರು, ಲಿಂಗಾಯಿತರ ಮೇಲೆ ಅಧಿಕ ತೆರಿಗೆ ವಿಧಿಸಲಾಗುತ್ತದೆ. ರೈತರದಂಗೆ ರಾಜನ ಕುತಂತ್ರದಿಂದ ಮೊಳಕೆಯಲ್ಲೇ ದಮನವಾಗಿ ಜಂಗಮಯ್ಯನ ನೇತೃತ್ವದಲ್ಲಿ ಹುಟ್ಟಿದ "ಪ್ರತಿವ್ಯವಸ್ಥೆಯೂ" ಮೊಳಕೆಯಲ್ಲೇ ನಾಶವಾಗುತ್ತದೆ.

ಈ ಸೋಲಿನ ಹಿಂದೆ ಇರುವ ಚಾರಿತ್ರಿಕ ಕಾರಣಗಳು ಕ್ವಚಿತ್ತಾಗಿ ಬಂದರೂ ಸಮರ್ಥ ರಾಜಕೀಯ ತಂತ್ರಗಳ ಹಿನ್ನೆಲೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಚಿತ್ರಿಸಲಾಗಿದೆ.

ರಾಜರೂ ಬರುವುದು, ಕೊಲೆ ಆಗುವುದು ಸಂಚು ಮಾಡಿ ಕೊಲೆ ಮಾಡುವುದು ಸಿಂಹಾಸನ ಏರುವುದು, ವಾಸ್ತವ. ತಮ್ಮ ಪಾಳೇಗಾರಿಕೆಯಿಂದ ಪಕ್ಕದ ಪಾಳೇಗಾರನ ಮಗಳನ್ನು ಕೊಡೋದು ತರೋದು, ಹೊತ್ತುಕೊಂಡು ಹೋಗೋ ಸೈನಿಕರು – ಒಂದೇ ಎರಡೇ?

ಯಾರ ನಳಿದೋಳುಗಳ ಮೇಲೆ ಜಯ ಮೇಲಿರುತ್ತದೋ, ಹೋ "ಆಸೆಗಳ ವಯಸ್ಸು ಬಯಕೆಗಳ ಕನಸು" ರಾಜಕೀಯವೇ ಒಂದು ನಿಗೂಢ ಒಗಟು ಭೇದಿಸುತ್ತಾ ಹೋದಂತೆ ಒಳಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ. ಸಾಮ್ರಾಜ್ಯಗಳು ಮೇಲೆದ್ದು ನಿಂತದ್ದು ಬಡವರ ತೋಳಬಲದಿಂದ "ಪ್ರಜೆಗಳಿರುವುದೇ ರಾಜರನ್ನು ಓಲೈಸುವುದಕ್ಕಾಗಿ ಸಾಮ್ರಾಜ್ಯವನ್ನು ಕಟ್ಟುವುದಕ್ಕಾಗಿ. ಧಾರ್ಮಿಕ ಕಾರ್ಯಗಳಿಗೆ ಸುಂಕರ ಹಣ ವಿನಿಯೋಗಿಸಲು ರಾಜತಂತ್ರ ಹೆಣೆದು ಅವರ ಮನಪರಿವರ್ತನೆಗೆ ರಾಗಹಾಡುವರು. ರಾಜಕೀಯ ಕುಟಿಲತೆ ತಂತ್ರಗಳು ಸಫಲವಾಗುವುದು.

"ಪ್ರಭುಗಳು ರೈತರನ್ನು ಮಣ್ಣಿನ ಮಕ್ಕಳೆಂದು ನೀವೇ ಅರಮನೆಯ ಮೂಲಧಾರ ಎಂಬ ಸತ್ಯ ತಿಳಿದಿದೆ. ಪ್ರಜೆಗಳ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಪ್ರಭುಗಳು ನಿಮ್ಮ ಮೇಲಿನ ಅತಿಯಾದ ಪ್ರೀತಿಯಿಂದ ರಾಜಾತಿಥ್ಯ ಸ್ವೀಕರಿಸಬೇಕೆಂದು ಭಿನ್ನವಿಸಿಕೊಂಡಿದ್ದಾರೆ. ನೀವೆಲ್ಲರೂ ಪ್ರಭುಗಳ ಬಿಡಾರದಲ್ಲಿ ರಾಜಾತಿಥ್ಯ ಸವಿಯಬೇಕೆಂದು ಪ್ರಭುಗಳ ಅಪೇಕ್ಷೆಯಾಗಿದೆ" ಎಂಬ ಈ ಮಾತಿನ ರಾಜಕೀಯ ತಂತ್ರ ಕುಟಿಲತನಕ್ಕೆ ಮರುಳಾಗಿ ರೈತ ಮುಖಂಡರು, ಪ್ರಭುಗಳು, ಕರುಣಾಳುಗಳು ಅವರ

ಔದಾರ್ಯಕ್ಕೆ ನಾವೆಂದೂ ಋಣಿಗಳು ಎಂದು ಆತಿಥ್ಯಕ್ಕೆ ಮನಸಾರೆ ಒಪ್ಪಿ ಸ್ವೀಕರಿಸುವಲ್ಲಿ ಸಿದ್ದರಾಗುವರು. ಈ ಎಲ್ಲಾ ರಾಜಕೀಯ ಪ್ರಗತಿಯಿಂದ ಚಿಕ್ಕದೇವರಾಜ ಪ್ರಭುಗಳು ನಿಶ್ಚಿಂತೆಯಿಂದ ವಿಶ್ರಮಿಸಿಕೊಳ್ಳುವರು. ರೈತರು ಈ ವಿಷಯವೆಲ್ಲಾ ತಿಳಿದು ದಂಗೆ ಏಳುವರು. ಔತಣಕ್ಕೆ ರೈತಮುಖಂಡರು ಬಂದರೆ ಒಳಗಿಂದ ಸಂಚನ್ನು ಹೂಡಿ ಸೈನಿಕರು ಧಾಳಿಮಾಡಿ ಧಾಳಿಗೆ ಸಿಕ್ಕ ರೈತರು ಹತರಾಗುತ್ತಾರೆ. ತಪ್ಪಿಸಿಕೊಂಡ ರೈತರನ್ನು ಬಿಡದೇ ಎಲ್ಲಾ ಸೈನಿಕರು ಒಟ್ಟಾಗಿ ಸೇರಿ ಇರಿಯುತ್ತಾರೆ. ಸೈನಿಕರಿಗೆ ಚಿಕ್ಕದೇವರಾಜ ಸೂಕ್ತಬಹುಮಾನ ನೀಡಿ ರಾಜನ ಧಿಕ್ಕರಿಸಿ ವಿರುದ್ಧ ಸಾಗುವರಿಗೆಲ್ಲ ಎಂಥ ದುರ್ಗತಿ ಕಾದಿದೆ ಎಂಬುದು ಮಿಕ್ಕ ರೈತರಿಗೆ ಚೆನ್ನಾಗಿ ತಿಳಿಯಬೇಕಾಗಿದೆ ಎಂದು ಘರ್ಜಿಸಿದ.

ಹಳೆಮನೆ ಲಿಂಗದೇವರು ಅವರು ಚಿಕ್ಕದೇವರಾಜನ ಅಟ್ಟಹಾಸ ಮಾಡಿದ ಮೇಲೆ ಈ ಹತ್ಯೆಯ ನಿಶ್ಚಲದೃಶ್ಯದ ಮೇಲೆ ಬೆಳಕು ಬೀರುವಂತ ಲಾವಾಣಿಕಾರರು ಹಾಡತೊಡಗಿದರು.

"ಊರುಳೀತು ರುಂಡ, ಹರಿಯೀತು ರಕ್ತ
ಭೂತಾಯಿ ಒಡಲೆಲ್ಲ ಕೆಂಪಾಯಿತೊ
ಬಾಳುವ ಬಯಕೇಲಿ ಬಾಳೆಲ್ಲ ಗೋಳಾಗಿ
ಮಣ್ಣಲ್ಲಿ ಬೆರತೋದರೂ! ರೈತರು
ಮಣ್ಣಲ್ಲಿ ಬೆರತೋದರೋ

ಒಡಲಾಳದೊಳಗೀನ ದಳ್ಳುರಿಯಿಂದ
ಅರಮನೆ ಬೊಕ್ಕಸ ತುಂಬೋಯಿತೋ
ನೇಗಿಲ ಗುಳವೆಲ್ಲ ಭರ್ಜಿಯ ಮೊನೆಯಾಗಿ
ರೈತರ ಎದೆಗೂಡು ಬಿಚ್ಚೋಯಿತೋ! ರೈತರು
ಮಣ್ಣಲ್ಲಿ ಬೆರತೋದರೋ

ಅರಮನೆ ಒಳಗೆಲ್ಲಾ ಬಡವರ ನೆರಳಾಡಿ
ಗೋಡೆಗೆ ಕೆಂಪಾನೆ ಚಿತ್ತಾರ ಮೂಡಿ
ಪ್ರಭುವೀಗ ಬಲಿಯಾದರೋ! ರೈತರು
ಮಣ್ಣಲ್ಲಿ ಬೆರತೋದರೋ

ಇಷ್ಟೆಲ್ಲಾ ಕಾರ್ಯದೊಡನೆ

ಶ್ರೀಮನ್ಮಹಾರಾಜ ರಾಜಾಧಿರಾಜ, ರಾಜಪರಮೇಶ್ವರ
ದುಷ್ಟನಿಗ್ರಾಹಕ, ಶಿಷ್ಟಪರಿಪಾಲಕ ಚಿಕ್ಕದೇವರಾಜ ಭೂಪಾಲ
ಬೋಪರಾಕ್, ಬೋಪರಾಕ್ ಘೋಷಣೆ

ಇನ್ನು ರಾಜಕೀಯ ಅಂಶಗಳೆಂದರೆ ಪ್ರಭುಗಳಿಗೆ ಮಹಾಸಾಮ್ರಾಜ್ಯವೊಂದನ್ನು ಕಟ್ಟಬೇಕೆಂಬ ಆಸೆ ಮಹಾಸಾಮ್ರಾಜ್ಯವೆಂದರೆ ಸಾಮಾನ್ಯವೇ? ಎಲ್ಲವೂ ಮಹತ್ತಾಗಿರಬೇಕು. ರಾಜರ ಬಗ್ಗೆ ಜನರಿಗೆ ಮಹಾನ್ ಕಲ್ಪನೆಯುಂಟಾಗಬೇಕು. ಬೊಕ್ಕಸದ ಬಗ್ಗೆ ಮಹತ್ವ ಕಲ್ಪನೆಯಿರಬೇಕು. ಹಾಗೇ ಶಸ್ತ್ರಾಸ್ತ್ರಗಳ ಬಗ್ಗೆ ಭಯಭೀತಿಯಿರಬೇಕು. ಈ ರೀತಿ ಪ್ರಭುಗಳ ಬಗ್ಗೆ ಮಹತ್ವದ ಕಲ್ಪನೆ ಮೂಡಿಸುವುದು ಹೇಗೆ? ಎಂಬ ತಂತ್ರ ಉಪಾಯಗಳ ಸಂಚುಹೂಡಿಕೆ ಅದಕ್ಕೆ ಕವಿ ತಿರುಮಲಾರ್ಯರ ಭವ್ಯ ಕಲ್ಪನೆಯಲ್ಲಿ ಅದೂ ಚಿಕ್ಕದೇವರಾಜರ ಹೆಸರಿನಿಂದಲೇ ಅಚಂದ್ರಾರ್ಕವಾಗಿ ಉಳಿಯುವಂತಹ ಅಂದರೆ ನಮ್ಮ ವಂಶದ ಬಗ್ಗೆ ಭವ್ಯ ಮಾಹಿತಿ ಕೊಡುವಂತಹ ಕಾವ್ಯ ಬರೆಯಲು ಆದೇಶದ ಬೇಡಿಕೆಯ ಜೊತೆಗೆ ಸಾಗುತ್ತದೆ. ಮಂತ್ರಿ ವಿಶಾಲಾಕ್ಷ ಪಂಡಿತರಿಂದ ಪ್ರಭುಗಳ ಮೂಲದ ಬಗ್ಗೆ ಅಂದರೆ ಪ್ರಭುಗಳು ಕುಂಬಾರ ಕುಲಕ್ಕೆ ಸೇರಿದವರೆಂಬ ಸತ್ಯ ಹಿರಿಯ ತಲೆಮಾರಿನ ಕೆಲವರಿಗೆ ಮಾತ್ರ ಗೊತ್ತು. ಇರುವ ಅಲ್ಪಸ್ವಲ್ಪ ಸತ್ಯಾನು ಅಳಿಸಿ ಹಾಕೋಕೆ ನಿಮ್ಮಂಥ ಕವಿಗಳ ಸಹಾಯ ಬೇಕೆಬೇಕು ಎಂದು ರಾಜ ಕೇಳುತ್ತಾನೆ.

ತಿರುಮಲಾರ್ಯ ಕವಿಗಳು ಅಭಿಮಾನದಿಂದ ಕವಿಕಲ್ಪನೆಯಿಂದ ನಿಮ್ಮಾಸೆಯಂತೆ ಎಲ್ಲವೂ ಭವ್ಯವಾಗಿಯೇ ಹೊರಬರುತ್ತದೆ ಎಂದು ವಿನೀತರಾಗಿ ಪ್ರಭುಗಳು ಅನುಗ್ರಹಿಸಿದರೆ ರಾಜತ್ವಕ್ಕಾಗಿ ಏನು ಮಾಡಲು ಸಿದ್ದ ಎಂಬ ಮಾತಿಗೆ ಮಂತ್ರಿ ವಿಶಾಲಾಕ್ಷ ಪಂಡಿತರು ನೀವು ಮಾಡಬೇಕಾದದ್ದು ನದಿಮೂಲ, ಋಷಿಮೂಲ ತಿಳಿಯೋಕೆ ಹೋಗಬಾರದೆಂದು ಹಾಗೇ ರಾಜರ ಮೂಲನೂ ಯಾರೂ ತಿಳಿಯೋಕೆ ಹೋಗಬಾರದು ಹೋದರೂ ಅದು ಯಾರಿಗೂ ತಿಳಿಯಲಾರದು.

ಚಿಕ್ಕದೇವರಾಜ ಪ್ರಭುಗಳು ಮೂಲಪುರುಷರು ದೈವಾಂಶ ಸಂಭೂತರೆಂದು ಧರ್ಮಕ್ಕೆ ದಿಕ್ಸೂಚಿಯಾಗಿ ಪ್ರಜಾರಕ್ಷಕರಾಗಿ ಪ್ರಭುತ್ವ ನಡೆಸಲು ಉದ್ಭವಿಸಿದರೆಂದೂ ಹೀಗೆ ಹುಲ್ಲುಕಡ್ಡಿಯನ್ನು ಬೆಟ್ಟವನ್ನಾಗಿಸುವ ಪ್ರತಿಭೆಯಿಂದ ಪ್ರಭುಗಳ ಮೂಲವನ್ನು ಯದುವಂಶದಿಂದ ಗುರ್ತಿಸುವುದು ನಿಮ್ಮ ಜವಾಬ್ದಾರಿ. ಹಾಗಾಗಿ ಅದಕ್ಕೆ ತಕ್ಕಂತೆ

ಕಥೆಕಟ್ಟಿ ಅದ್ಭುತವಾಗಿ ಬರೆದು ಒಡೆಯರ ವಂಶಾವಳಿಯನ್ನು "ಬಿರುದುಪ್ರಣೀತವಾಗಿ" ಜಗಜ್ಜಾಹೀರುಗೊಳಿಸಬೇಕು ಎಂದು ತಮ್ಮ ವಾಗ್ಬಾಣಗಳಿಂದ ರಾಜ (ಚಿಕ್ಕದೇವರಾಜ) ಹಾಗೂ ವಿಶಾಲಾಕ್ಷಪಂಡಿತರು ಅವರ ಮನವೊಲಿಸುವಲ್ಲಿ ಸಫಲರಾಗುತ್ತಾರೆ.

ಇನ್ನೂ ಬೊಕ್ಕಸದ ವಿಚಾರ ಖಾಲಿಭಂಡಾರ ಭವ್ಯ ಸಾಮ್ರಾಜ್ಯ ಕಟ್ಟಲು ಬೊಕ್ಕಸತುಂಬುವ ಏರ್ಪಾಡಿಗಾಗಿ ಮತ್ತೆ ಸಂಚು, ಆಡಳಿತದ ವರಮಾನವೆಂದರೆ – ರೈತರು. ಹಾಗಾಗಿ ಬೊಕ್ಕಸಕ್ಕೆ ಸರಿಯಾಗಿ ತೆರಿಗೆ ಸಂದಾಯವಾಗುವಂತೆ ನೋಡಿಕೊಳ್ಳುವುದು. ಆಸ್ಥಾನದ ಹಿರಿಯರಾದ ಮಂತ್ರಿಗಳಾದ ಷಡಕ್ಷರಯ್ಯ ಯುದ್ಧ ನಡೆದಿದೆ. ಪ್ರಜೆಗಳು ತತ್ತರಿಸಿ ಹೋಗಿದೆ. ಹಾಗಾಗಿ ತೆರಿಗೆ ನೀಡಲು ಸ್ಥಿತಿಯಲ್ಲಿ ರೈತರಿಲ್ಲ ಎಂಬ ಜವಾಬ್ದಾರಿಯುತ ಮಾತುಗಳು.

ಈ ಮಾತಿನಿಂದ ಹೂಡಿದ ಸಂಚಿಗೆ ಆಕಾರ ನೀಡುವ ಪ್ರಯತ್ನದಲ್ಲಿ ಚಿಕ್ಕದೇವರಾಜ ಪ್ರಜೆಗಳಿಂದ ಹೇಗಾದರೂ ಸರಿ ತೆರಿಗೆ ವಸೂಲಿ ಮಾಡಬೇಕು. ತಾವಿರುವುದು ಅದಕ್ಕೆ ರಾಜನು ಪ್ರಜೆಗಳನ್ನು ಹೇಗೆ ರಕ್ಷಿಸುವ, ರಾಜ್ಯಕಟ್ಟುವಲ್ಲಿ ಬೊಕ್ಕಸದ ಅವಶ್ಯಕತೆಯ ಅರಿವಿಲ್ಲವೇ? ಕೋಟೆ, ಕೊತ್ತಲ, ಸೈನ್ಯ, ಶಸ್ತ್ರಾಸ್ತ್ರ ಬೇಡವೇ? ಇದಕ್ಕೆಲ್ಲ ಹಣ ಬೇಕಲ್ಲವೇ? ಮರಳಿನಲ್ಲಿ ಕಟ್ಟಲು ಆಗುವುದೇ?

ಆದ್ದರಿಂದ ಈ ಪರಿಸ್ಥಿತಿಯಲ್ಲಿ ಹಳೆತೆರಿಗೆ ಜೊತೆ ಹೊಸ ತೆರಿಗೆ ಹಾಕಿಯಾದರೂ ಭಂಡಾರ ತುಂಬಿಸಬೇಕು. ಇದು ನಮ್ಮ ಶಾಸನ. ಇದಕ್ಕೆ ಅನುಗುಣವಾಗಿ ವಿಶಾಲಾಕ್ಷ ಪಂಡಿತರು ಹೊಸ ತೆರಿಗೆಪಟ್ಟಿಯೊಂದನ್ನು ತಯಾರಿಸಿಕೊಡುವರು.

ಇವರ ಮನಬಂದಂತೆ ಮನೆತೆರಿಗೆ, ಹುಲ್ಲುತೆರಿಗೆ..... ಧಾನ್ಯತೆರಿಗೆ ಹೀಗೆ ಆಗಲೇ ಬೆಳೆ ೧/೬ ಭಾಗವನ್ನು ರೈತ ನಿಡುತ್ತಿದ್ದರೂ ಅನಿವಾರ್ಯವಾಗಿ ಕಟ್ಟಲೇಬೇಕು. ಕಡಿಮೆ ಆದರೆ ಪಟೇಲನೇ ಕೊಡಬೇಕು ಇಲ್ಲ ವಸೂಲಿ ಮಾಡಿಕೊಡಬೇಕು. ಈ "ಏರುಸುಂಕ"ದಿಂದ ಭಂಡಾರಕ್ಕೆ ಲಾಭದಾಯಕವನ್ನಾಗಿ ಮಾಡಬೇಕಷ್ಟೆ ರಾಜಾಜ್ಞೆ.

ಮಾರುಕಟ್ಟೆ ಸುಂಕ, ಕೃಷಿಸಲಕರಣೆಗೂ ಸುಂಕ. ಉದಾ: ಒಂದು ನೇಗಿಲಿಗೆ ೨ ಚಿನ್ನದ ನಾಣ್ಯ ಸುಂಕ ಕೊಡಲೇಬೇಕಿತ್ತು.

ಇದೆಲ್ಲವನ್ನು ವಿರೋಧಿಸಿದ ತಪ್ಪಿಗೆ ಷಡಕ್ಷರಯ್ಯ (ಅಮಾತ್ಯ)ನವರಿಗೆ ಮುಖಭಂಗವಾಗಿರಲು ರಾಜ ರಾಜ್ಯಕಟ್ಟುವ ಕೈಂಕರ್ಯದ ಮುಂದೆ ಇದನ್ನೆಲ್ಲಾ ತಾಳಬೇಕು. ಹಾಗೇ ಮದುವೆ ಸಮಾರಂಭ ಎಲ್ಲಾ ಜಾತಿ ಜನಾಂಗದವರೂ ತೆರಿಗೆ ನೀಡಬೇಕು. ಅಂದರೆ

ಮಗ್ಗದ ಕಂದಾಯ
ಕೂಡಿಕೆ ತೆರಿಗೆ
ಮದುವೆ ತೆರಿಗೆ
ಉಬ್ಬೆ ಕಾಣಿಕೆ
ಕುರಿ ತೆರಿಗೆ
ಗುಳಿದ ತೆರಿಗೆ

ಈ ಎಲ್ಲವನ್ನು ಧಿಕ್ಕರಿಸಿ ಷಡಕ್ಷರಯ್ಯ ಪ್ರಭುಗಳು ದಯೆತೋರಬೇಕು. ಗುಳದ ತೆರಿಗೆ ಹಾಕಿದರೆ ರೈತರು ನೇಗಿಲು ಹಿಡಿಯುವುದರ ಬದಲು ನೆಲ ಹಿಡಿಯಬೇಕಾಗುತ್ತದೆ. ಈ ಏರು ಸುಂಕದ ಜೊತೆ ಗುಳದ ತೆರಿಗೆ, ತೆರೆದ ಬಾಗಿಲು ಸುಂಕ, ಮಾನವೀಯತೆ ಮರೆತ ರಾಜನ ಬಗ್ಗೆ ಒಂದೇ ಎರಡೇ.......

ರಾಜನ ಪರಿವಾರ ಪ್ರಭುಗಳೇ ಈ ತೆರಿಗೆ ನೋಡಿ ಪ್ರಜೆಗಳು ದಂಗೆ ಎದ್ದರೇ ಅದಕ್ಕೆ ಒಂದು ಸಭೆ ನಡೆಸಿ

"ಜನಗಳ ಮನಸ್ಸು ಅರಿವಿಗೆ ಮೀರಿದ್ದೂ ಆದರೂ
ದೇವರು ಧರ್ಮ ಅಂದರೆ ಬೇಗ ನಂಬಿ ಬಿಡುತ್ತಾರೆ"

ಈ ತೆರಿಗೆ ಜಾರಿಮಾಡಿಬಿಡಿ ತಿರುಗಿಬಿದ್ದವರಿಗೆ ಜಟ್ಟಿಗಳನ್ನು ಬಳಸಿಕೊಳ್ಳಿ ಎಂಬ ಕಠೋರ ರಾಜಾಜ್ಞೆ ಮಾಡುವನು. ಅಂದರೆ ರಾಜ್ಯ ಅಧಿಕಾರದಾಹ, ಚಕ್ರಾಧಿಪತ್ಯದ ದುರಾಸೆಯಿಂದ ಜನರ ಬಗ್ಗೆ ಕರುಣೆ ಕನಿಕರವಿಲ್ಲದೇ ದರ್ಪದಿಂದ ಒಂದೆಡೆ ವರ್ತಿಸಿದರೆ ಮತ್ತೊಂದು ಕಡೆ ಅರಮನೆಯ ಒಂದೊಂದು ಕೇಂದ್ರದಿಂದ ೨೦೦೦ ಪಗೋಡಗಳು ತಪ್ಪದೇ ಸಂದಾಯವಾಗಬೇಕು.

ಹಾಗೇ ಈ ನಾಣ್ಯಗಳು ಪ್ರಾತಃಕಾಲ ಉಪಹಾರದೊಳಗೆ ಸಂದಾಯವಾಗದಿದ್ದರೆ ನಾವು ಉಪವಾಸವಿರುತ್ತೇವೆ ಎಂಬ ಸಂಚುರೂಪಿಸಿ ಅಪರಾಹ್ನದೊಳಗೆ ಸಂದಾಯ-ವಾಗದಿದ್ದರೆ ನಾವೇ ಅದರ ವಸೂಲಿಗೆ ಹೊರಡುತ್ತೇವೆ ಎಂಬ ಬೆಪ್ಪುಹಿಡಿಸಿ

ಇತಿಹಾಸವನ್ನೇ ಗೋಜಲು ಗೋಜಲು ಮಾಡಿ ಜನರ ಮನಸ್ಸಿಗೆ ಕಣ್ಣಿಗೆ ಮಣ್ಣೆರಚುವ ಕಾರ್ಯವನ್ನು ಡಂಗೂರಸಾರಿಸಿ "ರಾಜಧಾನಿ ಉಳಿಸಲು ಪ್ರಜೆಗಳ ಸಂರಕ್ಷಣೆಗೋಸ್ಕರ ಬೊಕ್ಕಸ ಉಳಿಸಲು ಬೊಕ್ಕಸ ತುಂಬಿಸಲು ಸ್ವತಃ ರಾಜಾಧಿರಾಜ ಪ್ರಜಾಹೃದಯಾಧೀಶ, ತಾರತಮ್ಯ ವಿಚಕ್ಷಣಾಧುರೀಣ ಶ್ರೀ ಶ್ರೀ ಚಿ.ದೇ.ರಾ. ತೆರಿಗೆ ವಸೂಲಿ ಮಾಡಲು ಸ್ವತಃ ಬರುತ್ತಿದ್ದಾರೆ ಅಂದರೆ ರಾಜರೇ ತಮ್ಮನ್ನು ತಾವೇ ದುಡಿಸಿಕೊಳ್ಳಲು ಸಿದ್ದರಾಗಿದ್ದಾರೆ. ನಾವು ರಾಜನಿಗೆ ಕೈಜೋಡಿಸಿ ಸಹಕರಿಸಲೇಬೇಕೆಂಬ ನಿರ್ಧಾರಕ್ಕೆ ಬರುವ ನಾವು ಆದಷ್ಟು ಬೇಗ ನಿಗದಿಯಾದ ಹಣ ಸಂದಾಯ ಮಾಡೋಣ ಇಲ್ಲವಾದರೆ ಮಹಾರಾಜರು ಒಂದು ಹನಿ ನೀರನ್ನೂ ಸೇವಿಸುವುದಿಲ್ಲ. "ರಾಜ ಪ್ರತ್ಯಕ್ಷ ದೇವತಾ" ಎಂದು ಅರಮನೆ ಆಜ್ಞೆಯನ್ನು ಪಾಲಿಸಲು ಜನರ ಮನ ನಿರ್ಧರಿಸಿತು.

ಇದೆಲ್ಲವನ್ನು ಆಲಿಸಿದ ಜನರಲ್ಲಿ ಮುದಿರೈತ ಜನರನ್ನು ನಂಬಿ ಹೊಗಳಿದ ಆದರೆ ಯುವರೈತ "ಇದೆಲ್ಲ ರಾಜಭಕ್ತಿ ಬೆಳೆಯೋದಕ್ಕೆ ಹೂಡಿರೋ ಕುಟಿಲತೆ" ಹಾಕಿರುವ ತೆರಿಗೆ ನೋಡಿದರೆ ನಾವು ನಮ್ಮ ಮಕ್ಕಳು ಉಪವಾಸ ಬಿದ್ದು ಬೊಕ್ಕಸ ತುಂಬಿಸಬೇಕಾಗುತ್ತೆ: ಈ ರೀತಿ ಇಬ್ಬರ ನಡುವೆ ರಾಜನ ಸುಲಿಗೆ, ಭ್ರಷ್ಟಾಚಾರ, ಅಧಿಕಾರದಾಹವನ್ನು ಯುವರೈತ ಗುರ್ತಿಸಿ ಮುದಿರೈತನೊಡನೆ ವಾದ-ವಾಗ್ವಾದ ನಡೆದೂ ಕೊನೆಗೆ ಏನು ಮಾಡೋದು, ಇದು ರಾಜಾಜ್ಞೆ, ರಾಜಾಜ್ಞೆಯನ್ನು ಮೀರಿ ಬದುಕೋದು ಸಾಧ್ಯಾನ? ಅವರ ಸೈನ್ಯದ ಎದುರಿಗೆ ಏನು ಮಾಡೋಕೆ ಸಾಧ್ಯ?

ಯುವರೈತ ಯುವಕರನ್ನುದ್ದೇಶಿಸಿ "ಈ ಕ್ರೂರರಾಜಾಜ್ಞೆಯ ವಿರುದ್ಧ ನಾವು ಹೋರಾಡಲೇಬೇಕೆಂಬ ತೀರ್ಮಾನ ಪ್ರತಿಭಟಿಸುವ ಧೈರ್ಯಸ್ಥೈರ್ಯದಿಂದ ರಾಜ್ಯಾಂಗದ ವಿರುದ್ಧ ನಾವು ಹೋರಾಟ ಮಾಡಲೇಬೇಕು. ನಮಗೂ ಬದುಕುವ ಹಕ್ಕಿದೆ ಛಲವೂ ಇದೆ. ನಿಮ್ಮೆಲ್ಲರ ಬೆಂಬಲ ಬೇಕು" ಎಂದು ಸಂಘಟಿತರಾಗಿ ಒಕ್ಕೊರಲಿನಿಂದ ನ್ಯಾಯಕ್ಕಾಗಿ ಹಕ್ಕಿಗಾಗಿ ಸುತ್ತಮುತ್ತಲ ರೈತರನ್ನು ಸಂಘಟಿಸಿ ನಂಜನಗೂಡಿನಲ್ಲಿ ಸಭೆ ಏರ್ಪಡಿಸಿ ಸಾಧಕಬಾಧಕಗಳ ಬಗ್ಗೆ ಚರ್ಚಿಸಿದರು.

ಜಾತಿವ್ಯವಸ್ಥೆ ಪಿತೂರಿ ಅಗಾಧವಾಗಿ ಗೋಚರಿಸುತ್ತದೆ.

ಜಂಗಮ, ವೀರಶೈವ, ಜೋಗಿಜಂಗಮರು ಹೀಗೆ ಒಳಗುದ್ದಾಟ ಸಾಗುತ್ತವೆ. ಈ ಗಲಾಟೆ ಜಗಳ ದೊಂಬಿಗಳಿಂದ ರೈತರೆಲ್ಲಾ ವ್ಯವಸಾಯ ಬಿಟ್ಟು ವಲಸೆ ಹೋಗುವಂತಾಯ್ತು. ಹಳ್ಳಿಹಳ್ಳಿಗಳ ಜನರನ್ನೆಲ್ಲಾ ಪ್ರಚೋದಿಸತೊಡಗಿದರು. ಇಲ್ಲಿ

ಷಡಕ್ಷರಯ್ಯ ಮತ್ತು ಜಂಗಮಯ್ಯ ೨ ಕಡೆ ಸೇರಿ ಕುತಂತ್ರದಿಂದ ಸಾವು ನೋವುಗಳಿಗೆ ಕಾರಣರಾದರು. ಅವರ ಆಸೆ ಪ್ರತಿಫಲ '

(೧) ಪಂಡಿತನ ಸೊಕ್ಕಡಗಿಸುವುದು

(೨) ಮಹಾರಾಜರಿಗೆ ಜನಗಳ ಪ್ರಾಬಲ್ಯ

(೩) ಅದರಲ್ಲೂ ವೀರಶೈವರ ಪ್ರಾಬಲ್ಯ ತೋರಿಸೋದು

ಈ ಎಲ್ಲಾ ಘಟನೆಗಳ ನಡುವೆ ನಮ್ಮಿಬ್ಬರ ಕೈವಾಡವಿದೆಯೆಂಬ ಸುಳಿವು ಬಾರದಂತೆ ರಾಜಕೀಯ ನಡಸೇಬಿಟ್ಟರು. ಇವರ ಕುತಂತ್ರ ವೀರಶೈವರಿಗೆ ರಾಜಸ್ಥಾನದಲ್ಲಿ ಮನ್ನಣೆ ದೊರೆಯಿತು. ಈ ಹೋರಾಟದ ಫಲವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಇದೆಲ್ಲ ರಾಜಕಾರಣ ಸ್ವರೂಪ;

ರಾಜರು ಏರ್ತಾರೆ ಪಟ್ಟವ
ಕಟ್ತಾರೆ ಜನಗಳ ಚಟ್ಟವ।
ನಾಡನು ಕಟ್ಟೋಕೆ ಧರ್ಮವ ಬೆಳೆಸೋಕೆ
ಹಿಂಡ್ತಾರೆ ಜನಗಳ ಪ್ರಾಣವ।

ಬೊಕ್ಕಸ ತುಂಬುವ ಬಗೆಬಗೆ ನೆಪದಲಿ
ಹೇರ್ತಾರೆ ಭೇಟಿಗೂ ಸುಂಕವ!

ಬೆಳದೊಂದಾದರನೆ ಭಾಗವ ಕೊಟ್ಟರೂ
ಏರು ಸುಂಕವ ಹೇರಿ ಮೇಲೆ
ಗುಳಿಕೊಂದು ತೆರಿಗೆಯ ಸಾರಿ
ಬಡಿದಾರೆ ನಮ್ಮ ಬೆನ್ನೆಲುಬ
ಸತ್ತ ರಾಜನ ಸಂತತಿ ಅಳಿದರೂ
ಬೆಳಿತಾದೆ ಗರಿಕೆಯ ಚಿಗುರಂತೆ
ಆಸೆಯ ಹಿಂದೆಯೆ ಸುಲಿಗೆಯ ದಾಹ
ಬೇಸಿಗೆ ವ್ಯಾಳ್ಯಾಗ ಸುರಿಯುವ ಮಳೆಯಂತೆ

ಎಂಬ ಲಾವಣಿಯೊಂದು ಇಡೀ ಅವರ ಆಳ್ವಿಕೆಯ ದೌರ್ಜನ್ಯ–ರೌದ್ರತೆ, ಪ್ರಭುತ್ವದ ಅಧಿಕಾರ ಹೊಣೆಗೇಡಿತನವ ಸಾರಿ ಸಾರಿ ಹೇಳುತ್ತದೆ.

ರೈತ ಸಮೂಹ ಬೇಸರ ದುಃಖದಿಂದ ನಾವು ಮಣ್ಣಿನ

ಮಕ್ಕಳು ದುಡಿದೂ ದುಡಿದೂ ಕೈಬೊಕ್ಕೆಗಳೆದ್ದಿದ್ದರೂ ಕೈ ತುಂಬಾ

ಉಣ್ಣೋಯೋಗ ಇಲ್ಲ, ಮಳೆ ಹೊಯ್ದರೆ ಬೆಳೆ ಇಲ್ಲದಿದ್ದರೆ ತಣ್ಣೀರು

ಬಟ್ಟೆ ಇಂಥ ಶ್ರಮಜೀವಿಗಳಿಗೆ "ತೆರಿಗೆ" ಎಂಬ ಬಂಧದಿ

ಬಂಧಸಿ ನಾವು ಮೇಲೇಳದಂತೆ

ಪ್ರಭುತ್ವ ನಮಗೆ ಯಾವ ಸೌಕರ್ಯ ಮಾಡಿದೆ? ಅರಮನೆ, ಕೋಟೆ

ಕಟ್ಟಿಸೋಕೆ ಸಂಪತ್ತು ನಾವು ಕೊಡಬೇಕು, ಶತ್ರುಗಳು ದಾಳಿ ಮಾಡಿದರೆ

ಮೊದಲು ಕೊಲ್ಲೋದು ನಮ್ಮನ್ನು ಪ್ರಭುಗಳ ಉಳಿಸೋಕೆ ಸೈನ್ಯ ಕೋಟೆ ಇದೆ.

ಸೈನಿಕರೆಂದರೆ ನಮ್ಮ ಅಣ್ಣತಮ್ಮಂದಿರೇ ಅಲ್ಲವೇ? ಲೋಕಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಮುಡಿಪಿಟ್ಟವರಿಗೆ ಸಾವು, ನೋವು ಸಾಲದಂತೆ ಸುಂಕಗಳು "ನಮ್ಮ ರಾಜ್ಯವೇ "ಸುಂಕನಾಡಾಗಿ" ಪರಿವರ್ತನೆಯಾದಂತಿದೆ. ನಾವು ಪ್ರತಿಭಟಿಸಲೇಬೇಕು ಎಂಬ ತೀರ್ಮಾನಕ್ಕೆ ರೈತ ಸಮೂಹ, ಈ ಕಾಲದ ಪದಾಘಾತಕ್ಕೆ ಸಿಕ್ಕಿ ಧೂಳಾಗೋ ಮನುಷ್ಯರ ಬಗ್ಗೆ ಎಲ್ಲಾ ಇತಿಹಾಸ ಬೆಯೋಕೆ ಆ ಬಿಳಿಯರೆ ಪುಟಗಟ್ಟಲೆ ಬರೆದಾಯ್ತು. ಚಿಕ್ಕರಾಜನನ್ನು ರೈತಸಮೂಹ ಭೇಟಿಮಾಡಿ ಹೊಸತೆರಿಗೆಗಳು ನಮ್ಮ ಸ್ಥೈರ್ಯ ಕುಗ್ಗಿಸಿವೆ ಪ್ರಭು ನಮಗೆ ನ್ಯಾಯಬೇಕು.

ಚಿಕ್ಕದೇವರಾಜ, ಈಗ ರಾಜ್ಯ ವಿಸ್ತರಿಸಬೇಕಾಗಿದ್ದು ಹಣದ ಅವಶ್ಯಕತೆಯೂ ಇದೆ.

ಹಾಗಾದರೆ ರೈತಸಮೂಹ ಈ ಕೃಷಿನೇ ಬೇಡ ಈ ಸುಂಕ ಕಟ್ಟೋದು ಬೇಡ. ವಲಸೆಗೆ ತೀರ್ಮಾನಿಸಿದ್ದಾರೆ. ರೈತರ ತೀರ್ಮಾನಕ್ಕೆ

ವಿಶಾಲಾಕ್ಷಪಂಡಿತರು ತೆರಿಗೆಯ ಹಣವು ಧರ್ಮಕಾರ್ಯಕ್ಕೆ ವಿನಿಯೋಗ ಮಾಡಬೇಕೆಂದು ಕೇಳುತ್ತಾರೆ.

ನಮ್ಮ ಪ್ರಭುಗಳ ತೀರ್ಮಾನವಾಗಿದೆ. ನಂಜನಗೂಡಿನಲ್ಲಿ ದೇವಾಲಯ, ಗುಂಡ್ಲುಪೇಟೆಯಲ್ಲಿ ದೇವಾಲಯ ಹೀಗೆ ಪ್ರಭುಗಳ ಧಾರ್ಮಿಕ ಕಾರ್ಯಕ್ಕೆ ನಾವು ಕೈಜೋಡಿಸೋಣವೆ ಎಂದೆಲ್ಲಾ ನಂಬಿಸಿ, ವಂಚಿಸಿ ರೈತಸಮೂಹವನ್ನೇ ನಾಶಮಾಡಿದ

ಹೇಯಕೃತ್ಯ ಅಧಿಕಾರ ಲಾಲಾಸೆ, ನಂಬಿಕೆದ್ರೋಹ ಪ್ರಜೆಗಳ ಮೇಲೆ ಅಂದರೆ ಮಕ್ಕಳಂತ ಪ್ರಜೆಗಳನ್ನೇ ತಾನೇರುವ ಮೆಟ್ಟಿಲಾಗಿಸಿಕೊಂಡ ಚಿಕ್ಕದೇವರಾಜನ ರಾಜನೈಪುಣ್ಯತೆ, ತಂತ್ರವನ್ನು ಮರೆಯಲಾಗದು. ಇತಿಹಾಸ ಸಹ ಕ್ಷಮಿಸಲಾರದು. ಇತಿಹಾಸದಿಂದ ಪಾಠ ಕಲಿಯಬೇಕಾದ ಪರಿಸ್ತಿತಿ ಜಾಗೃತರಾಗುವುದು ನಮ್ಮ ಇಂದಿನ ನೀತಿಪಾಠ ಮಾಡಿಕೊಂಡರೂ ಇತಿಹಾಸವನ್ನು ಓದಿದ ನಾವು ಇತಿಹಾಸದಲ್ಲಿ ನಮ್ಮದೊಂದು ಸಾಲನ್ನು ಬರೆಯುವಂತಾಗಬೇಕು.

ತನ್ನ ಸೈನ್ಯ ಪದಾತಿಗಳನ್ನು ಕಳಿಸಿ ರೈತರನ್ನೆಲ್ಲಾ ನಿಶ್ಯೇಷವಾಗಿ ನಿಗ್ರಹಿಸುವಂತೆ ಆಜ್ಞಾಪಿಸುತ್ತಾ ರಾತ್ರಿ ಮಲಗಿದವರು ಬೆಳಕನ್ನೇ ಕಾಣದಂತೆ ಮಾಡಲು ತಿಳಿಸುವ ಪ್ರಭು ಎಂತಹ ವಿಶ್ವಾಸಘಾತುಕತನ ರಾಜ್ಯದಲ್ಲಿ ಸೈನಿಕರೇನು ಮನುಷ್ಯರಲ್ಲವೇ? ನ್ಯಾಯ ಇವರಿಂದ ಸಾಧ್ಯವೇ? ಆಳುವವರಿಗೆ ಈ ಪದದ ಅರ್ಥಕ್ಕಿಂತ ಪ್ರತಿಷ್ಠೇ ಗೌರವಗಳೇ ಹೆಚ್ಚು. ತಮ್ಮ ಎದುರು ನಿಲ್ಲಬಾರದು, ವಿರೋಧಿಸಬಾರದೆಂಬ ಸೊಕ್ಕು ನೂರಾರು ಜನರ ರಕ್ತದ ಹಸಿ ಇನ್ನೂ ಆರಿಲ್ಲ. ಮತ್ತೊಮ್ಮೆ ನರಬೇಟೆ ಆರಂಭಿಸಿ ದೊರೆಯನ್ನು ಪ್ರಜೆಗಳಾದ ನಾವು ಹೊಗಳಬೇಕೆ, ರೈತ ಬಂಡಾಯವನ್ನು ಸಾಯಿಸಿ ನರಬೇಟೆ ಮೂಲಕ ಅಡಗಿಹೋಯ್ತು.

ಈ ಕೃತ್ಯದಿಂದ ರೊಚ್ಚಿಗೆದ್ದ ಜಂಗಮರು ಸಿಡಿದೆದ್ದರು. ಈ ದುರಂತ ಘಟನೆಗಳಿಂದ ಜನರನ್ನು ಸಂಘಟಿಸಿ ತಾಯೂರಿನಲ್ಲಿ ರಹಸ್ಯ ಸಭೆ ಸೇರಿ ಈ ರಾಜ್ಯದಲ್ಲಿ ಉಳಿಯುವುದು ಕಷ್ಟ. “ಈ ರಾಜನ ಮಂತ್ರಿಗಳ ಚದುರಂಗದಾಟದಲ್ಲಿ ಜನಗಳ ಪ್ರಾಣ ಇರುವೆಗಿಂತ ಕೀಳು ಎಂದು ತಿಳಿದು ಹೊಸಕಿಹಾಕಲು ಹೊರಟಿರುವ ಬಗ್ಗೆ ರೈತರ ಸಂಭಾಷಣೆ ಅವಿರತ ಸಾಗುತ್ತದೆ.

ನಮ್ಮ ಅಣ್ಣತಮ್ಮಂದಿರನ್ನು ನಾಯಿಗಳಂತೆ ಕೊಲ್ಲಿಸಿದವರನ್ನು ನಾವು ಪ್ರಭುಗಳೆಂದು ಕರೆಯಲು ಸಿದ್ಧವಿಲ್ಲ ಎಂದು ಜಂಗಮಯ್ಯನನ್ನು ಸರ್ವಾನುಮತದಿಂದ ಆರಿಸಿ ರಾಜನನ್ನು ಕೆಳಗಿಳಿಸಲು ರೈತರ ನಿರ್ಧಾರಕ್ಕೆ ಜಂಗಮಯ್ಯ ಅವಸರಪಟ್ಟು ಹೊಡೆತತಿಂದಾಗಿದೆ. ಹುಲಿಯಗುಹೆ ಅದು, ರಾಜನ ಬಲ ಎಷ್ಟಿದೆಯೆಂದು ತಿಳಿದು ಶಸ್ತ್ರಾಸ್ತ್ರ ಹೊಂದಿಸಿ ಕಾರ್ಯಾಚರಣೆಗೆ ತೊಡಗುವ ರಾಜತಂತ್ರ ಅರಿತು ಕಾರ್ಯಾಚರಣೆಗೆ ಅದರ ಪಡೆ, ಸೈನ್ಯ ಎದುರಿಸುವಷ್ಟು ಸಿದ್ದತೆಯೊಮದಿಗೆ ಮುನ್ನುಗ್ಗದಿದ್ದರೆ ಮತ್ತೆ ಎಲ್ಲರೂ ಬಲಿಪಶುಗಳಾಗಬೇಕಾಗುತ್ತದೆ. ರಾಜತಂತ್ರ ರಾಜಕೀಯ ರಾಜಪ್ರಭುತ್ವದ

ವಿರುದ್ಧ ಬಂಡಾಯವೆದ್ದರು. ಮತ್ತೆ ಕುತಂತ್ರದಿಂದ ಜಂಗಮರಲ್ಲೇ ಅವರ ಸಮುದಾಯದ ನರಬೇಟೆಗೆ ಆಗುಂತಕರ ನೇಮಕಮಾಡಿದ್ದು ಆತ ಕುತಂತ್ರದಿಂದ ನಟಿಸಿ ಸೊಂದದಲ್ಲಿ ಈಟೀಯಿಂದ ಅನಿರೀಕ್ಷಿತ ಆಕ್ರಮಣ ಮಾಡುವಾಗ ರೈತರು, ಸೈನಿಕರ ನಡುವೆ ಸೆಣಸಾಟದಲ್ಲಿ ಸೈನಿಕರ ಕೈಮೇಲಾಗಿ ರೈತರು ಸತ್ತುಬೀಳುವರು. ಆ ಆಗುಂತಕ ಜಂಗಮಯ್ಯನನ್ನು ಸೆರೆಹಿಡಿಯುವನು.

ಆ ಆಗುಂತಕ ಬೇರಾರು ಅಲ್ಲ. ಆತ ಚಿಕ್ಕದೇವರಾಜ ಒಡೆಯರ ದಳಪತಿ ಫರೀದುಲ್ಲಾಖಾನ್ ಜಂಗಮಯ್ಯನ ಬಂಧಿಸಿ ಕಮರಳ್ಳಿಯ ಗುರಿಕಾರ ನಂಜೇಗೌಡನನ್ನು ಬಂಧಿಸು, ಜಂಗಮರ ಮಠಗಳನ್ನು ಧ್ವಂಸಮಾಡಿ, ಗೇಣಿರಹಿತ ಭೂಮಿಯನ್ನು ವಶಪಡಿಸಿಕೊಳ್ಳಲು ಆಜ್ಞಾಪಿಸುತ್ತಾನೆ.

ಕಾವಿ ಕಂಡರೆ ಅಲ್ಲೇ ಕೊಂದುಬಿಡು ಎಂದು ಆಜ್ಞಾಪಿಸುತ್ತಾ ಎಲ್ಲರನ್ನು ಬಂಧಿಸಿ ರಾಜಾಜ್ಞೆ ಮೀರಿದವರಿಗೆ ಶಿಕ್ಷೆ ವಿಧಿಸಲು ಆಜ್ಞೆ ಮಾಡಿದ.

ಈ ರೀತಿ ಚಿಕ್ಕದೇವರಾಜ, ವಿಶಾಲಾಕ್ಷಪಂಡಿತ ಪ್ರತಿಹಂತದ ಚದುರಂಗದಾಟ-ದಲ್ಲೂ ರಾಜಕುತಂತ್ರ, ಚಾಣಾಕ್ಷತನದಿಂದ ನಂಬಿಕೆದ್ರೋಹದಿಂದ ಕುರುಹು ಸುಳಿವು ನೀಡದೆ ನೈಪುಣ್ಯದಿಂದ ರಾಜ್ಯಕ್ಕಾಗಿ ದೂರದೃಷ್ಟಿ, ನೀಚ ರಾಜನೀತಿ ರಾಜ್ಯದ ಕ್ಷೇಮಕ್ಕೆ ಎಂಬ ಉಕ್ತಿತಂತ್ರಗಳ ಮಾತುಕತೆ ಪಂಡಿತರಿಗೆ, ನಿಮಗೆ ತುಂಬಾ ವೈರಿಗಳಿದ್ದಾರೆ.

ಶೈವರು ವೈಷ್ಣವರೆಲ್ಲಾ ನಿಮ್ಮ ಮೇಲೆ ಕ್ರುದ್ಧರಾಗಿದ್ದಾರೆ ಎಂದು ಮೈಗಾವಲು ಪಡೆಯ ರಾಜನ ಕಳಕಳಿ, ಪಂಡಿತ; ನಾನಾರಿಗೂ ದ್ರೋಹ ಬಗೆದಿಲ್ಲ. ರಾಜಾಜ್ಞೆಯಂತೆ ನಾ ನಡೆದು ಬಂದಿರುವೆ ಎಂಬ ಅಹಂನ ಮಾತು ಕೇಳಿಬರುತ್ತದೆ.

ಹೊರಟ ಪಂಡಿತನನ್ನು ಸಂಚಿನಿಂದ ಈರಿಯುತ್ತಾರೆ. ವಿಷಯ ತಿಳಿದು ಬಂದ ಚಿಕ್ಕದೇವರಾಜ ನೀವಿಲ್ಲದೇ ನನ್ನ ಗೆಲುವೇ? ಎಂದಾಗ ತನ್ನ ಸ್ಥಾನ ತುಂಬ ಬಲ್ಲ "ತಿರುಮಲಾರ್ಯರ" ಹೆಸರನ್ನು, ಅವರ ಬಗ್ಗೆ ತಿಳಿಸುತ್ತಾ ಇರುವಲ್ಲಿ ತಿರುಮಲಾರ್ಯರು ಬರುವರು. ಅವರ ಕೈಯನ್ನು ಚಿಕ್ಕದೇವರಾಜನ ಕೈಯಲ್ಲಿಡುತ್ತಾ ಮುಂದೆ ನೀನು ಮಹಾರಾಜರಿಗೆ ಮಾರ್ಗದರ್ಶಕನಾಗಿರಬೇಕೆಂದು ಉಸಿರುಬಿಡುತ್ತಾನೆ. ಸಕಲರಾಜ ಮರ್ಯಾದೆಯೊಂದಿಗೆ ಸಂಸ್ಕಾರ ನಡೆಸಿದ ದೊರೆ ಸಿಂಹಾಸನವೇರಲು ಬಂದಾಗ

ಸೂತ್ರಧಾರನು – ಪ್ರಜೆಗಳನ್ನು ರಕ್ಷಿಸೋರೆ
ಪ್ರಜೆಗಳನ್ನು ಭಕ್ಷಿಸೋಕೆ ಶುರು ಮಾಡಿದ್ದಾರೆ.

ಎಲ್ಲೆಲ್ಲಿಯೂ ಸಾವಿನ ನೆರಳು, ದಾರಿಯಲ್ಲೆಲ್ಲಾ ಸಾವಿನದೇ ದರ್ಬಾರ್ ರಾಜ, ಮಂತ್ರಿ ಸೈನಿಕರೆಲ್ಲಾ ಸಾವಿನ ದೂತರಾಗಿರುತ್ತಾರೆ ಎಂದು ನೊಂದು ನುಡಿದಾಗ ಮಂತ್ರಿಯು ಸಾವಿನಿಂದಾದರೂ ಶಾಂತಿ ದೊರೆಯಲಿ ಎಂಬ ಆಶಯ

ಇತ್ತ ರಾಜನ ರತ್ನಖಚಿತ ಸಿಂಹಾಸನ ದರ್ಬಾರು

ರಕ್ತಖಚಿತದಿಂದ ರಕ್ತಖಚಿತವಾಗಿ ಜನರನ್ನು ಮೂಕರನ್ನಾಗಿಸಿ ಸತ್ತವರಂತೆ ಮಾಡಿ ನೇಗಿಲಯೋಗಿಗಳ ಮಾರಣಹೋಮ ಸೈನ್ಯ ಬಲದಿಂದ ರಾಜನಾಗಿ ದರ್ಬಾರು ರಾಜಕೀಯ ತಂತ್ರ, ದೌರ್ಬಲ್ಯಗಳಿಂದ ಸತ್ತು ಬದುಕಿದ ಹತ್ತು ಹಲವು ಘಟನೆಗಳು ಕಣ್ಮನ ತಣಿಸುವಷ್ಟು ವಿಷಯ ವಿಚಾರಧಾರೆಗಳ ಆಗರ ಈ ರಾಜರ ರಾಜಕೀಯ ಕುತಂತ್ರ ಅಧಿಕಾರ ಲಾಲಸೆಗಳು ರಕ್ತಖಚಿತದಿಂದ ರತ್ನಖಚಿತ ಸಿಂಹಾಸನ ದರ್ಬಾರು ಮಾಡಿದ ರಾಜತ್ವದ ಹೂರಣವನ್ನು ತೆರೆದಿಟ್ಟಿದ್ದಾರೆ. ನಾಡಿನ ಜನರಿಗೆಲ್ಲಾ ಉಣಬಡಿಸಿದ್ಧಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಗತ್ತಿನಲ್ಲೇ ಅತೀ ದೊಡ್ಡ ಲಿಖಿತ ಸಂವಿಧಾನ ಹೊಂದಿರುವ ನಮ್ಮ ದೇಶ ಸಮಾನತೆ, ಭ್ರಾತೃತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯವನ್ನು ಸಂವಿಧಾನದಲ್ಲಿ ಬಿಂಬಿಸಿದ್ದು ಅಳವಡಿಕೆ ಆಚರಣೆ ತರುವಲ್ಲಿ ವಿಫಲರಾಗಿರುವುದು ಜಗಜ್ಜಾಹೀರಾಗಿದೆ. ಹಾಏ ಮೇಲ್ವರ್ಗ, ಕೆಳವರ್ಗ, ವೃತ್ತಿಯಿಂದ ಧರ್ಮವನ್ನು ಬಿಂಬಿಸುವ, ವೈವಾಹಿಕ ಜೀವನದ ಮೇಲಾಗುತ್ತಿರುವ ಶೋಷಣೆ ಅಂದೂ ಸಹ ಜೀವಂತವಾಗಿದ್ದವು.

ಈ ನಾಟಕಗಳನ್ನು ಕೆದಕುತ್ತಾ ಕೆದಕುತ್ತಾ ಅಧಿಕಾರದಾಹ ಯಾರನ್ನೂ ಬಿಟ್ಟಿಲ್ಲ, ಬಿಡುವುದೂ ಇಲ್ಲ ಎಂಬುದು ಖಚಿತವಾಗುತ್ತದೆ. ಅಂದು ಸಹ ಹಲ್ಲೆ, ಶೋಷಣೆಗಳು ಅಧಿಕಾರಕ್ಕಾಗಿ ಕೊಲೆ ಸುಲಿಗೆ ರಾಜ್ಯಕ್ಕಾಗಿಯೇ ಹೊರತು ಪ್ರಜೆಗಳ ರಕ್ಷಣೆ, ಪೋಷಣೆಗಾಗಿಯಂತೂ ಅಲ್ಲವೇ ಅಲ್ಲ.

ಪ್ರಜೆಗಳಿರುವುದು ರಜರನ್ನು ಓಲೈಸಲು, ಸಾಮ್ರಾಜ್ಯ ಕಟ್ಟಲು ಎಂಬ ಸೂಕ್ಷ್ಮರಾಜಕಾರಣವನ್ನು ಮನಮುಟ್ಟುವಂತೆ ಅಂದಿನ ಪ್ರಭುತ್ವದ ಅಧಿಕಾರ ದಾಹಕ್ಕೆ

ಅವರಾಡಿದ ಚದುರಂಗದಾಟಗಳು, ಪ್ರಜೆಗಳನ್ನು ದಾಳವಾಗಿ ಹೇಗೆ ಬಳಸಿಕೊಂಡರು ಎಂಬುದನ್ನು ನಾಟಕದ ಸಂಭಾಷಣೆ ದೃಶ್ಯಗಳಿಂದ ಅರಿವಾಗುತ್ತದೆ. ಅವರೇರಿದ ತೆರಿಗೆಗಳ ಪಟ್ಟಿ ರಾಜ್ಯಕಟ್ಟುವ ಅವರ ಕೈಂಕರ್ಯದ ಮುಂದೆ ಪ್ರಜೆಗಳು ಏನೆಲ್ಲ ತಾಳ್ಮೆ ಸಹಿಷ್ಣುಗಳಾಗಬೇಕಿತ್ತು. ಪ್ರಜೆಗಳ ಸುಲಿಗೆ ಮಾಡಿಯೇ ಹಳೆಮನೆಲಿಂಗದೇವರು ಅಸಮಾಧಾನವನ್ನು ಇಂದಿನ ಹಲ್ಲೆ, ಶೋಷಣೆ, ಅಧಿಕಾರ, ದಾಹ ರಾಜಕಾರಣ, ಬೆಲೆ ಏರಿಕೆ ಜಾತಿಪ್ರಭಾವ, ಹೆಣ್ಣುಮಕ್ಕಳ ಮೇಲಿನ ಲೈಂಗಿಕಹಲ್ಲೆ ದೌರ್ಜನ್ಯಗಳನ್ನು ಗಮನಿಸಿದಾಗ ಅಂದಿಗೂ ಇಂದಿಗೂ ವ್ಯತ್ಯಾಸವಿರುವುದಿಲ್ಲ.

ಅಂತೆಂಬರ ಗಂಡ ಈ ನಾಟಕದಲ್ಲಿ ಜನಮಾನಸದಲ್ಲಿ ಆದರ್ಶನಾಗಿರುವ ರಣಧೀರನ ಹಿಂದಿನ ಶಕ್ತಿಗಳ ಕಥೆಯನ್ನು ಕಾಣಬಹುದು. ರಣಧೀರರನ್ನು ಆದರ್ಶ ರಾಜನಾಗಿ ಚಿತ್ರಿಸುವ ಸಂದರ್ಭದಲ್ಲಿ ರಣಧೀರನ ಆದರ್ಶಗುಣಗಳಿಗೇ ಮಹತ್ವವನ್ನು ನೀಡಿರುತ್ತಾರೆ. ನೀರಿನ ಬಳಕೆ ಕುರಿತ ದೃಶ್ಯದಲ್ಲಿ ಮನ್ನಮಗೌಡ ಕೊಮಡ ಹಾಗೂ ಸಕ್ಕರೆ ನಡುವೆ ನಡೆದಿರುವ ಜಗಳವನ್ನು ಪರಿಹರಿಸಲು ಪ್ರಯತ್ನಿಸುವುದು. ಈ ಜಗಳ ಕಾವೇರಿ ನೀರಿನ ಜಗಳ ಇದರ ಹಿಂದಿರುವುದು ಸುಸ್ಪಷ್ಟವಾಗಿ ಕಾಣುತ್ತದೆ.

ಹಾಗೇ ನರಸನ ಗೆಳೆಯರಾದ ಸಕ್ಕ, ಬಸವ, ಹನುಮರು ಅಖಾಡದಮಲ್ಲರು. ಅಂದರೆ ಇಂದಿನ ರಾಜಕಾರಣಿಗಳ ಹಿಂದೆ ಇರುವ ಪುಂಡರನ್ನು ನೆನಪಿಗೆ ತರುವ ರೀತಿ ದೃಶ್ಯದಲ್ಲಿನ ಕೇಂದ್ರೀಕರಣ ವಿಕೇಂದ್ರೀಕರಣ ಕಂಡುಬರುತ್ತದೆ. ಅಂತೆಂಬರ ಗಂಡದಲ್ಲಿ ರಾಜಕೀಯ ದಾಳಗಳು ಉರುಳುವುದು ನಾಟಕೀಯವಾಗಿಯೂ ಮತ್ತು ಮಹತ್ವಾಕಾಂಕ್ಷೆಯಿಂದ ಹುಟ್ಟಿದ ಸ್ವಾರ್ಥ ಯಾವ ಬಾಂಧವ್ಯವನ್ನು ಉಳಿಸದು ಎಂಬ ಮೌಲ್ಯವನ್ನು ಶ್ರುತಪಡಿಸುತ್ತದೆ.

ನರಸನನ್ನು ರಣಧೀರನನ್ನಾಗಿಸಲು ಆಲೋಚಿಸುವ ಶಾಸ್ತ್ರೀಗಳ ತಂತ್ರಜಾಲದಲ್ಲಿ ವಿಕ್ರಮ ಸಿಕ್ಕಿಬೀಳುವುದು, ವಿಕ್ರಮನ ಮೂಲಕ ಇಮ್ಮಡಿರಾಜ ಒಡೆಯರ ಅಡ್ಡಿ ನಿವಾರಣೆಗೆ ತಂತ್ರ ರೂಪಿತವಾಗುತ್ತದೆ. ವಿಕ್ರಮ ಹಾಕಿಕೊಳ್ಳುವ ಯೋಜನೆ ಮತ್ತೊಂದು ಪ್ರತಿತಂತ್ರ ರೂಪಸಿಲುತ್ತಾನೆ. ಅಂದರೆ ರಣಧೀರನನ್ನು ರಾಜಧಾನಿಗೆ ಕರೆಸಿ ಅವನನ್ನು ಸೆರೆಮನೆಯಲ್ಲಿಡುವುದು ಮಹತ್ವಾಕಾಂಕ್ಷೆಯ ಎದುರು ಕುಲಪುತ್ರ – ಗಾಂಧರ್ವಪುತ್ರ ಸಂಬಂಧ ನಿಲ್ಲುವುದಿಲ್ಲ. ವಿಕ್ರಮನನ್ನು ಸೇವಕರಾದ ಚೆನ್ನ ರಂಗರು ಕೊಲ್ಲುತ್ತಾರೆ. ಮಹತ್ವಾಕಾಂಕ್ಷೆಯಿಂದ ಕೊಂದ ಮುಗ್ಧರನ್ನು ತಂತ್ರಗಾರಿಕೆಯಿಂದ ರಣಧೀರನ

[illegible]

ಪಟ್ಟಾಭಿಷೇಕದ ಸಮಯದಲ್ಲಿಯೇ ಅವರಿಗೆ ಮರಣದಂಡನೆ ಕೊಲ್ಲುವ ದಾಳವಾಗಿ
ಪಟ್ಟಾಭಿಷೇಕದ ಸಮಯದಲ್ಲಿಯೇ ಅವಿರಗೆ ಮರಣದಂಡನೆ ಕೊಲ್ಲುವ ದಾಳವಾಗಿ
ದೊಡ್ಡಿಯ ಬಳಕೆ ಕಂಡುಬರುತ್ತದೆ.

ಕೊಲ್ಲಲು ದಾಳವಾಗಿ ಬಂದ ದೊಡ್ಡಿ ರಣಧೀರನ ಪ್ರೇಮಪಾಶದಲ್ಲಿ ಸಿಕ್ಕಿಬೀಳುತ್ತಾಳೆ. ಅಂದರೆ ಅಂತೆಂಬರಗಂಡನಾಗಲು ರಣಧೀರನ ಬೆನ್ನಿಗೆ ಇದ್ದ ನಿರೀಶ ಕೊನೆಗೆ ಪಡೆದದ್ದೇನು ಗೊತ್ತಾ?

ದೇಶದ್ರೋಹಿ, ಮಿತ್ರದ್ರೋಹಿ ಎಂಬ ಬಿರುದು ಹಾಗೂ ಸೆರೆಮನೆ ವಾಸ ಮಹತ್ವಾಕಾಂಕ್ಷೆಯ ಮನಸ್ಸನ್ನು ರಣಧೀರನ ಈ ಮಾತುಗಳು ಅದ್ಭುತವಾಗಿ ಹಿಡಿದಿಡುತ್ತವೆ. ಅಂದರೆ ವಿಕ್ರಮರಾಯ, ವಿಶ್ವನಾಥಶಾಸ್ತ್ರಿ, ಚನ್ನ, ರಂಗ, ದಬಡ್ಡಿ ಇವರೆಲ್ಲಾ ನಾನೇರಿದ ಮೆಟ್ಟಿಲಿನ ಬೆಂಬಲಗಳೇ ಈಗ ನೀನು ಅಷ್ಟೇ ಎಂಬ ರಾಜಕೀಯ ಲೆಕ್ಕಾಚಾರ.

ನರಸನಿಗೆ ಆದರ್ಶ ಒಂದು ನೆಪ ಮಾತ್ರ. ಮುಂದೆ ಸಂಭವಿಸುವ ಘಟನೆಗಳು ಹಾಗೂ ಸಹಾಯಕರ ನೆರವನ್ನು ಆದರ್ಶದ ಹೆಸರಿನಲ್ಲಿ ಬಳಸಿಕೊಳ್ಳುವ ಜಾಣ ರಾಜಕಾರಣಿಯಾಗಿ ನರಸ ರೂಪು ಪಡೆಯುತ್ತಾ ಹೋಗುತ್ತಾನೆ. ಈ ಜಾಣತನವಿಲ್ಲದ ನಿರೀಶ ಈ ರಾಜಕೀಯ ತಂತ್ರಗಾರಿಕೆ ಜಾಣತನವಿಲ್ಲದೇ ಆದರ್ಶದ ಅಡಿಯಲ್ಲಿ ನಿರೀಶ ಕಾಯಕವೆಸಗುತ್ತಾ ಹೋಗುತ್ತಾನೆ. ವ್ಯಕ್ತಿಗತ ಮಹತ್ವಾಂಕ್ಷೆ ನರಸನಿಗಿದ್ದರೆ ಸಾಮಾಜಿಕ ಬದಲಾವಣೆಯ ಮಹತ್ವಾಕಾಂಕ್ಷೆ ನಿರೀಶನ ಒಳಗೆಲ್ಲೂ ಆಡುತ್ತಿರುತ್ತದೆ.

ಆಡಳಿತದಲ್ಲಿ ನರಸ ತರುವ ಬದಲಾವಣೆಗಳನ್ನು ವಿರೋಧಿಸುವ ಮನ್ನಮಗೌಡ ಕೂಡ ಜನರ ಒಳಿತನ್ನು ಬಯಸುವ ವ್ಯಕ್ತಿ ನರಸನ ವಿರುದ್ಧ ಸೆಟೆದು ನಿಲ್ಲುವವನು. ಆದರೆ ಇವರಿಬ್ಬರ ಅಂತ್ಯವೂ ಸೋಲು.

ಇಲ್ಲಿ ನರಸ ಒಬ್ಬನನ್ನು ವಿನಯದಿಂದ ನಿವಾರಿಸಿಕೊಂಡರೆ ಮತ್ತೊಬ್ಬನನ್ನು ದರ್ಪ, ಅಹಂಕಾರ ಹಾಗೂ ಕ್ರೌರ್ಯದಿಂದ ನಿವಾರಿಸಿಕೊಳ್ಳುತ್ತಾನೆ. ಇಲ್ಲಿ ವ್ಯಕ್ತಿಗತ ಮಹತ್ವಾಕಾಂಕ್ಷೆ ಎರಡು ರೂಪದಲ್ಲಿ ಪರಿಣಮಿಸುವುದನ್ನು ನರಸ ಹಾಗೂ ದೊಡ್ಡಿಯಲ್ಲಿ ಕಾಣಬಹುದು.

ಮೈಸೂರಿನ ಇತಿಹಾಸದ ಅನೇಕ ಘಟನೆಗಳನ್ನು ಆಧುನಿಕ ರಾಜಕಾರಣದ ನೆಲೆಯಿಂದ ಅರ್ಥೈಸಲು ಸಾಧ್ಯವಾಗಿದೆ. ಆಧುನಿಕ ರಾಜಕಾರಣದ ವಿಶ್ಲೇಷಣಾ ಬಿಂದು, ಎಲ್ಲಾ ವರ್ಗ ಘರ್ಷಣೆಗೂ ರಾಜಕೀಯ ಘರ್ಷಣೆಗಳೇ ಎಂಬ ಮಾರ್ಕ್ಸ್‌ನ ಮಾತನ್ನು ಇಲ್ಲಿ ಗಮನಿಸಬಹುದು. ಈ ನಾಟಕದ ಉದ್ದಕ್ಕೂ ಬೆಳವಣಿಗೆಯಲ್ಲಿ ರಾಜಕೀಯ ತಂತ್ರಗಾರಿಕೆ, ನಿಲುವುಗಳ ಬದಲಾಣೆ, ಆಧುನಿಕ ರಾಜಕಾರಣದ ಕೇಂದ್ರಬಿಂದುಗಳು. ಭಾಗಶಃ ಇವು ರಾಜಕಾರಣದ ಹುಟ್ಟಿನಿಂದಲೇ ಅವಿಭಾಜ್ಯ ಅಂಗಗಳಾಗಿ ಬೆಳೆದು ಬಂದವುಗಳಾಗಿವೆ. ಈ ನಾಟಕದ ಸ್ಥಾಯಿ ಅವೇ. ಈ ನಾಟಕದಲ್ಲಿ ರಾಜಕೀಯದ ಹಲವು ಎಳೆಗಳು ಹಾಸುಹೊಕ್ಕಾಗಿವೆ.

'ಹೈದರ್' ನಾಟಕದಲ್ಲಿ ತಾನೇ ರಾಜನಂತೆ ಸರ್ವಾಧಿಕಾರ ನಡೆಸಿದ ಒಡೆಯರು ಆತನ ವರ್ತನೆ ಬಗೆ ತಿರುಗಿಬಿದ್ದಾಗ ನಿರ್ದಾಕ್ಷಿಣ್ಯವಾಗಿ ಕಟ್ಟಾಳು ದುರ್ಗದ ಸೆರೆಯಲ್ಲಿಟ್ಟು ಕ್ರೂರವಾಗಿ ಕೊಲ್ಲಿಸಿದ. ಅಂದರೆ ಅಧಿಕಾರ ಎಂಬುದು ಸಾವಿನ ಸವಾರಿ ಇದ್ದಂತೆ ಸ್ವಲ್ಪ ಎಚ್ಚರ ತಪ್ಪಿದರೂ ಅದೇ ನಮ್ಮ ಸವಾರಿ ಮಾಡುತ್ತದೆ ಎಂಬ ವಿಚಾರ ಸ್ಪಷ್ಟ.

ಇತ್ತ ನಂಜರಾಜ ಸೆರೆಸಿಕ್ಕ ರಆಜರಾಣಿಯರನ್ನು ಕರೆಸಿ ಅವರೆದುರು ಸೈನಿಕರನ್ನು ನಂಬಿಗಸ್ತ ಗುಲಾಮರನ್ನು ಕೊಲ್ಲಿಸಿ, ಗುಲಾಮರನ್ನು ಕಣ್ಣು, ಕಿವಿ, ನಾಲಿಗೆ ಕತ್ತರಿಸಿ ಮೆರವಣಿಗೆ ಮಾಡಿಸಿದನು. ಹೀಗೆ ರಾಜರಲ್ಲೇ ಒಳಜಗಳ ದೋಚುವಿಕೆ ಸರ್ವಾಧಿಕಾರ ಪ್ರವೃತಿ ನಿರಂತರವಾಗಿ ಸಾಗುತ್ತಿತ್ತು. ಲಕ್ಷ್ಮಮ್ಮಣ್ಣಿಗೆ ಹೈದರ್‌ನ ವಿಷಯ ತಿಳಿಸಿದಾಗ ರಾಣಿ, ಬಂಡೇರಾಯರನ್ನು ಕುರಿತು ಈ ಹೈದರನನ್ನು ನಂಬಹುದೇ? ಎಂದು ಅನುಮಾನಿಸಿದಾಗ ಆತನಿಂದ ತಕ್ಷಣಕ್ಕೆ ಬಂದಿರುವ ಗಂಡಾಂತರದಿಂದ ಪಾರಾಗೋಣ ಈತನಿಂದ ತೊಂದರೆ ಕಂಡುಬಂದರೆ ಅವನನ್ನು ನಿವಾರಿಸಿಕೊಳ್ಳೋಣ ಎಂಬ ತಂತ್ರಗಾರಿಕೆಯಿಂದ ಸೈನ್ಯದ ಮುಂದಾಳತ್ವವಹಿಸಿದರು. ಇತ್ತ ಯುದ್ಧಭೂಮಿ-ಯಲ್ಲಿ ಹೋರಾಡೋ ಸೈನಿಕರ ದುಃಖ, ಬೇಸರ ಅಪಾರವಾಗಿ ನೊಂದು ಯುದ್ಧಕ್ಕೆ ಹೊರಟಾಗ ಸೈನಿಕರ ಕುಟುಂಬದವರ ಕೂಗು, ನೋವು, ಆಕ್ರಂದನ ಮುಗಿಲು-ಮುಟ್ಟಿರುತ್ತದೆ. ಯುದ್ಧದಲ್ಲಿ ಸತ್ತು ನಾಯಿ ನರಿಗಳ ಪಾಲಾಗುವ ನಮ್ಮ ಈ ಬಾಳು ಯಾರಿಗೂ ಬೇಡ ಎಂದು ಈ ಪ್ರಭುತ್ವದ ಎದುರು ಸಿಡಿದೇಳುವ ಮಟ್ಟ ತಲುಪಿಹೋಗಿರುತ್ತಾರೆ. ಲಾಯದಲ್ಲಿ ಕುದುರೆ ಆನೆಗೆ ಕೊಡೋ ಕನಿಷ್ಠ ಆಹಾರವನ್ನು ಕೊಡದೇ ಕೀಳಾಗಿ ನಡೆಸಿಕೊಳ್ಳುವ ರಾಜರ ಬಗ್ಗೆ ಬೇಸತ್ತು ಸೈನಿಕರೆಲ್ಲಾ ಒಗ್ಗಟ್ಟಾಗಿರಲು

[illegible]

[illegible]

[illegible]

"ಹೈದರ್" ಸೈನಿಕರ ನಾಯಕಪಟ್ಟಕ್ಕೆ ಬರುತ್ತಾನೆ. ಹೈದರ್ ಸೈನಿಕರು ಆಯುಧ ಕೆಳಗಿಟ್ಟ ಬಗೆ, ಅವರ ಬೇಡಿಕೆಗಳು ಸಂಬಳ ಕೊಡಲು ಬೊಕ್ಕಸ ಬರಿದಾಗಿದೆ. ಎಲ್ಲಾ ತಿಳಿದು ಚರ್ಚಿಸಿ ನಂಜರಾಜಯ್ಯನ ಬಳಿ "ಬೇಡಿಕೆ ತಿಳಿಸಿ ದಸ್ಕತು ಹಾಕಿ ಕೊಡಬೇಕು" ಎಂದು ಹೇಳಿ ಮೈಸೂರು ಸಂಸ್ಥಾನಾಧೀಶ್ವರ ಶ್ರೀ ಇಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ಮೈಸೂರು ಸಂಸ್ಥಾನದ ಸರ್ವಾಧಿಕಾರಿಗಳಾದ ಶ್ರೀ ನಂಜರಾಜಯ್ಯನವರೂ ಸೇರಿ ಕರಾರು ಪತ್ರಕ್ಕೆ ಮೊಹರು ಮತ್ತು ಸಹಿ ಹಾಕುತ್ತಾರೆ.

ಸಹಿಪಡೆದ ಹೈದರ್ ಒಂದೊಂದಾಗಿ ತನ್ನ ಹಿಡಿತಕ್ಕೆ ತಂದುಕೊಂಡು ರಾಜ-ರಾಣಿಯರ ಋಣಾತ್ಮಕ ಅಂಶಗಳು ಹಾಗೇ ಧನಾತ್ಮಕ ಅಂಶಗಳನ್ನು ತಿಳಿದು ಸೇವಕ ಒಡೆಯನಾಗುವುದು ಬಹಳ ದೂರ ಉಳಿಯಲಿಲ್ಲ. ಮೈಸೂರು ಸಂಸ್ಥಾನದ ಅರಸರನ್ನು ಕಳಲೆಯ ದಿವಾನರ ಹಿಡಿತದಿಂದ ಬಿಡಿಸುವಲ್ಲಿ ಹೈದರನು ಸಹಕರಿಸಿದ, ಆದರೆ ರಾಜತಂತ್ರಗಾರಿಕೆ ಸಾಗುತ್ತಲೇ ಇರುತ್ತದೆ. ಹೈದರನನ್ನು ಕಿತ್ತು ಹಾಕೋದು ಹೇಗೆ ಎಂಬ ಯೋಜನೆ ಆದರೆ ನಾವು ಸಾಕಿರೋದು ಸರ್ಪ ಅಂತ ತಿಳಿದಿಲ್ಲ. ಹಾಗೇ ಸರ್ಪಕ್ಕೆ ಇಲ್ಲಿ ಗಿಡುಗ ಕಾಯ್ತಾ ಇರೋದು ತಿಳಿದಿಲ್ಲ.

ಹೀಗಿರುವಾಗ ಖಂಡೇರಾಯ ಮೋಸದಿಂದ ಮುಗಿಸೋ ಸಂಚು ಮಾಡೇಬಿಟ್ಟ. ಒಳಸಂಚು ಅರಿತು ಮುಂದಾಲೋಚನೆಯಿಂದ ಆ ಸಂಚಿನಿಂದ ಪಾರಾಗಿದ್ದರೂ ರಾಣಿ ಮತ್ತು ಖಂಡೇರಾಯನ ಜೊತೆಸೇರಿ ಮೋಸ ಮಾಡಿದೆ ಎಂದು ನಂಜರಾಜಯ್ಯ ದೂಷಿಸಲಾಗಿ ಅದಕ್ಕೆ ತಕ್ಕ ಸಮರ್ಥನೆ ನೀಡಿ ಸರ್ವಾಧಿಕಾರಿಯನ್ನು ಚೆನ್ನಾಗಿ ಮೆಚ್ಚಿಸಿ ಅವರ ಸಹಿ, ದಸ್ಕತ್ತು ಕಾಗದ ಪತ್ರಗಳಿಗೆ ಮೊಹರು ಪಡೆದು ಖಂಡೇರಾಯನ ವಿರುದ್ಧ ಓಲೆ ಬರೆಸಿ ಎಲ್ಲಾ ಕಡೆ ಕಳಿಸಿ ಖಂಡೇರಾಯನನ್ನು ಹಿಡಿದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಿಸುವ ಘೋಷಣೆ ಮಾಡಿಸಿದ. ವಿಷಯ ತಿಳಿದ ಸೈನಿಕರೆಲ್ಲ ತಮ್ಮ ಬೇಡಿಕೆಗಳ ಪಟ್ಟಿ ನೀಡಿ ನಮ್ಮ ಪರವಾಗಿ ಸರ್ವಾಧಿಕಾರಿಗಳ ಹತ್ತಿರ ಮಾತನಾಡು ಎಂದು ಅಹವಾಲು ಹಾಕಿದಾಗ ಹೈದರನ ಮಾತಿನಿಂದ ಅವರಲ್ಲಿ ನಂಬಿಕೆ ಬಂದು ಹೈದರನು ಮೊದಲು ಸೈನಿಕನಾಗಿದ್ದವನೇ ಈ ಪೌಜುದಾರರಾಗಿ ಬೆಳೆದುನಿಂತಿದ್ದಾನೆ. ಸೈನಿಕರ ಸಮಸ್ಯೆ ಏನೆಂದು ಬಹು ಹತ್ತಿರದಿಂದ ಕೇಳಿ, ನೋಡಿ ಸ್ವ-ಅನುಭವಿಸಿರುವ ಅವರಿಗೆ ಸೈನಿಕರ ಬಗ್ಗೆ ಸಹಾನುಭುತಿ ಇದೆ.

ಇಲ್ಲಿ ಹೈದರ್ ಯೋಜನೆ ವಿಚಿತ್ರವಾಗಿತ್ತು. ಬರೆದ ಪತ್ರ ಅಧಿಕಾರಿಗಳ ಕೈಗೆ ನೀಡದೆ ಖಂಡೆರಾಯನ ಬಗ್ಗೆ ಇದ್ದ ಪತ್ರವನ್ನು ಖಂಡೆರಾಯನ ಕೈಗೆ ಬೀಳುವಂತೆ ರಾಜಕೀಯ ತಂತ್ರ ರೂಪಿಸುತ್ತಾನೆ.

ಈ ತಂತ್ರದಿಂದ ಖಂಡೇರಾಯನನ್ನು ರಾಜನಿಂದಲೇ ಬಂಧಿಸಿ ಯಶಪಡೆದ. ಅಲ್ಲದೇ ಚನ್ನಗಿರಿ, ಚಿತ್ರದುರ್ಗ, ಬಿದನೂರು..... ಇದೇ ಮೊದಲಾದ ರಾಜ್ಯಗಳನ್ನು ಮುತ್ತಿ ವಿಜಯ ಪತಾಕೆಯೊಮದಿಗೆ ಅವರೆಲ್ಲರನ್ನು ಅಡಗಿಸಿ ತಳಮಳಗೊಳಿಸಿ "ಸೈನಿಕನಾದವನೊಬ್ಬ ನವಾಬ" ಅಂತ ಕರೆಸಿಕೊಳ್ಳೋದು ಸಹಿಸಲಾರದೆ ಹಲ್ಲು ಕಡಿಯುತ್ತಾ ಹಿಂದೆಯೂ ಕೇಳಿಲ್ಲ ಮುಂದೆಯೂ ಕೇಳಲ್ಲ. ಹೈದರನ ಸೋಲು ಗೆಲುವಿನ ಮೊದಲ ಸೋಲು, ಸೂರ್ಯ ಮುಳುಗಿ ಸೂರ್ಯ ಮೂಡೋದರ ಒಳಗೆ ಮದ್ರಾಸಿನ ಹೆಬ್ಬಾಗಿಲ ಬಳಿ ನಿಂತು ಗೆದ್ದವರನ್ನು ಬೆಳಗ್ಗೇನೆ ನಡುಗಿಸಿಬಿಟ್ಟ.

ಕುದುರೆಯ ಕುಣಿಸೂತ
ತುಪಾಕಿ ಹೊಡೆಯೂತ
ಬಂದನೋ ಸರದಾರ
ಹಿಡಿದಾನೋ ಬಿಳಿಯರ

ಹೈದರ್ ಗಜಿಈಸಿಯೇ ಬಿಟ್ಟ. ಶತ್ರುಗಳು ಆತನ ಚಲನವಲನವ ಗುರುತಿಸುವಲ್ಲಿ ಸೋತರು. ಅವರು ಸೋತು ಪರಾರಿಯಾದನೆಂದು ತಿಳಿದಿದ್ದರು. ಆದರೆ ಊಹೆಗೂ ಮೀರಿ ಇವನ ರಾಜಕೀಯ ಚಾಣಾಕ್ಷತನ ಮೆರೆದ ಹೈದರನ ಕುದುರೆಗಳು ರೆಕ್ಕೆ ಮೂಡಿರುವ ಹಾಗೆ ಕೆನೆಯುತ್ತಾ ಯಾವ ಸಮಯದಲ್ಲಿ ಬೇಕಾದರೂ ನಮ್ಮ ಕೋಟೆ ಮುತ್ತಿ ನೆಗೆದು ಬರಬಹುದು ಅಂಥ ರಾಜಕೀಯ ಚಾಣಾಕ್ಷನನ್ನು ಕಂಡೇ ಇಲ್ಲ ಎಂಬ ಮಾತು ಶತ್ರು ಪಾಳೆಯದಿ ಹೊಗಳಿಕೆಯ ಸುರಿಮಳೆ. ಆದರೂ ಆತನನ್ನು ಜೀವಸಹಿತ ಅಥವಾ ಹೆಣವನ್ನಾದರೂ ತರಲೇಬೇಕೆಂಬ ಡೂಪ್ಲೆ ಮತ್ತು ಕ್ಲೈವ್‌ನ ಆದೇಶ.

ಪೂರ್ಣಯ್ಯನವರು ಅಂಡ್ರ್ಯೂಸ್‌ರವರನ್ನು ತನ್ನ ಚಾಣಕ್ಷತೆ ಮತ್ತು ರಾಜಕಾರಣ, ತಂತ್ರಗಾರಿಕೆ, ಯೋಚನೆ ಹಾಗೂ ಯೋಜನೆಗಳಿಂದ ಎಲ್ಲೆಡೆಯೂ ಆತನದೇ ವಿಜಯ. ಈತನ ಇಚ್ಛೆಯಂತೆ ಕರಾರು ನಡೆಯಬೇಕು. ನಾನು ಹಾಕುವ ಕರಾರನ್ನು ವಿರೋಧಿಸುವ ಶಕ್ತಿ ನಿಮಗಿಲ್ಲವೆಂಬುದು ಸತ್ಯ. ಈಗ ಸಾಧ್ಯ ಅಸಾಧ್ಯಗಳ ನಿರ್ಧಾರ ನಮ್ಮದು. ನೀವು ಹೂಂಗುಟ್ಟುತ್ತಾ ಹೋಗಬೇಕು. ಸೆರೆಯಾದವರನ್ನು ಬೇಷರತ್ತಾಗಿ

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಬಿಡಬೇಕು. ಅವರೆಷ್ಟೇ ವಾದ ಮಾಡಿದರೂ ಯಾವುದಕ್ಕೂ ಬಗ್ಗದೆ ಕರಾರುಪತ್ರ ಬರೆಸಿದರೂ "ಅಕ್ಷರ ಎಂದರೆ ಸಂಶಯ. ಯಾಕೆಂದರೆ ನಿಮ್ಮಂಥವರು ಅದಕ್ಕೆ ಕೊಡುವ ಬೆಲೆ, ಅಕ್ಷರ ತಲೆಯಿಲ್ಲದವರ ಸಾಮಾಗ್ರಿ ಎಂಬುದು ಹೈದರನ ವಾದ – ಕಡೆಗೂ ಪೂರ್ಣಯ್ಯನವರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿ "ಇಂಗ್ಲೀಷರನ್ನು ಸಂಪೂರ್ಣವಾಗಿ ನಾಶಪಡಿಸಲಾರೆ ಅಂದರೆ ಸಮುದ್ರದ ನೀರನ್ನು ಬತ್ತಿಸಲಾರೆ. ಅದಕ್ಕೆ ಅವರ ಜೊತೆ ಸ್ನೇಹದಿಂದಿದ್ದರೆ ಅನುಕೂಲ" ಎಂದು ಹೈದರನು ಭಾವಿಸಿದ್ದನು. ತನ್ನ ಚಾಣಾಕ್ಷತೆ, ಸಮಯಪ್ರಜ್ಞೆ, ಉತ್ತಮಗುರಿ, ಯುದ್ಧ ನೈಪುಣ್ಯತೆ, ತಂತ್ರಗಾರಿಕೆಯಿಂದ ಬಿಳಿಯರನ್ನು ಬೆಚ್ಚಿ ಬೀಳಿಸಿದ್ದ. ಇಮ್ಮಡಿ ಕೃಷ್ಣರಾಜರು ಖಾಯಿಲೆಯಿಂದ ಮರಣಹೊಂದಿ ನಂಜರಾಜ ಒಡೆಯ ರಾಜನಾದ. ಹೈದರ್ ಅಧಿಕಾರಕ್ಕಾಗಿ ತನ್ನದೇ ಆದ ತುಂಡುಸೈನ್ಯ ಕಟ್ಟಿದ್ದ. "ಹೈದರ್ ಯುಕ್ತಿವಂತ. ಆತನನ್ನು ತಡೆವುದು ಅಸಾಧ್ಯದ ಮಾತೇ ಸರಿ. ಆತನ ಕುದುರೆ, ಗುಂಡು, ಸೈನಿಕರ ಆಕ್ರಮಣಕ್ಕೆ ಹೆದರಿ ಆತನನ್ನು ಎದುರಿಸೋದು ಅಂದ್ರೆ "ಲಿಲಿಪುಟ್‌ಗಳೂ ಗಲಿವರನ್ನ ಎದುರಿಸಿದ ಹಾಗೆ ಆಗುತ್ತೆ" ಹೈದರನ ಭೂತ ಅವರನ್ನ ಕಾಡುತ್ತಾ ಇರುತ್ತೆ" ಎಂದು ಶತ್ರುಗಳು ಭಾವಿಸಿದ್ದರು. ಹಾಗೇ ಹೈದರ್ ಯಾರನ್ನು ನಂಬದವನು. ಸ್ನೇಹಕ್ಕೆ ಕೈಚಾಚಿದರೆ ಕತ್ತಿಯಿಂದ ಕತ್ತರಿಸೋ ಜಾತಿ ಅವರದು ಎಂದು ತಿಳಿದವ ದೂರದೃಷ್ಟಿಯ ಸರದಾರ.

ಅಧ್ಯಾಯ – ೬

ಉಪಸಂಹಾರ

ಮೈಸೂರು ಸಂಸ್ಥಾನದ ಇತಿಹಾಸದಲ್ಲಿನ ಮಹತ್ತರ ವಿಷಯ ವಿಚಾರಗಳನ್ನು ಹಳೆಮನೆ ಲಿಂಗದೇವರು ಅವರ ನಾಟಕದ ಅಧ್ಯಯನದ ಒಳನೋಟಗಳಿಂದ ತಿಳಿಯಬಹುದಾಗಿದೆ.

ಅಂದಿನಿಂದ ಇಲ್ಲೀತನಕ ಅಧಿಕಾರಕ್ಕಾಗಿ ತಲೆಗಳು ಉರುಳಿ ಹೋಗಿವೆ. ನ್ಯಾಯ, ನೀತಿ, ಧರ್ಮ ಮೂಲೆಸೇರಿ, ತಮ್ಮ ಆಸೆ, ಆಕಾಂಕ್ಷೆ, ಭಾವನೆಗಳಿಗೆ ಸ್ಪಂದಿಸಿ ಭೋಗಜೀವನ ನಡೆಸಿಕೊಂಡು, ಇವರ ಕನಸಿನ ಸಾಮ್ರಾಜ್ಯದಾಸೆಗೆ ಸಮಾಜ, ಜನರನ್ನು ಏಣಿಗಳಾಗಿಸಿಕೊಂಡಿರುವುದರಲ್ಲಿ ಎರಡು ಮಾತಿಲ್ಲ.

ಅದು ರಾಜಪ್ರಭುತ್ವ ಇಂದು ಪ್ರಜಾಪ್ರಭುತ್ವ ಇಲ್ಲಿ ಅದೇ ದೌರ್ಜನ್ಯ ಒಂದಲ್ಲ ಒಂದು ರೀತಿ ಎಡಬಲ ಎಂದರೆ ತಪ್ಪಾಗಲಾರದು.

ಎರಡನೆಯದಾಗಿ ಸ್ತ್ರೀಯರಿಗೆ ಅಧಿಕಾರದಲ್ಲಿ ಸಮಾಜದಲ್ಲಿ ಸ್ವಾತಂತ್ರ್ಯವಿಲ್ಲದೇ ಪಂಜರದ ಪಕ್ಷಿಯಾಗಿ ಕಂಡುಬರುವುದು. ಸ್ತ್ರೀಯನ್ನು ಬಾಳೆಲೆಯ ರೀತಿ ತನ್ನ ಕಾಮ–ಭೋಗದಲ್ಲಿ ಶ್ರೀಮಂತವಾಗಿ ನೀರಿನಂತೆ ಬಳಸಿಕೊಂಡಿರುತ್ತಾರೆ. ಹಾಗೇ "ಬಾಳೆಲೆಯ ಹಾಸುಂಡು ಬೀಸಿ ಹೊಗೆದಂಗ" ಎಂಬಂತೆ ಹೆಣ್ಣಿನ ಪಾತ್ರ ಕಂಡುಬರುತ್ತದೆ.

ಮೂರನೆಯದಾಗಿ ಮಹಾರಾಣಿಯರು ರಾಜಕೀಯದಲ್ಲಿ ತಮ್ಮ ಕೈವಾಡ ನಡೆಸುವುದು ಬೆರಳೆಣಿಕೆಯಷ್ಟು ಕಂಡುಬರುತ್ತದೆ. "ರಾಜಕೀಯವಾಗಿ ತಂತ್ರಗಾರಿಕೆ, ಒಳಸಂಚು, ಶ್ರದ್ಧೆ, ಸಾಹಸ, ಕುಶಾಗ್ರಮತಿ ದೃಷ್ಟಿಕೋನ, ಅಧಿಕಾರದ ಹಂತಗಳು, ಗುರಿ ನಿಗೂಢತೆ, ಯುಕ್ತಿಯನ್ನು ನಾವು ಹೈದರ್‌ನಲ್ಲಿ ಕಂಡರೆ ಚಿಕ್ಕದೇವಭೂಪನ ಅಧಿಕಾರದಾಹಕ್ಕಾಗಿ ಮಾಡಿಸುವ ಕೊಲೆಗಳು ಸೈನಿಕರ ಬಗ್ಗೆ ತಾತ್ಸಾರ ರೈತರ ನೋವುಗಳಿಗೆ ಸ್ಪಂದಿಸದೇ ಅವರೆಲ್ಲರ ಪಾಲಿಗೆ ಮಾರಕನಾಗುವುದು. ಚಾರಿತ್ರಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಸೈನಿಕರ ದಂಗೆ, ಮರಾಠರ ದಬ್ಬಾಳಿಕೆ, ಗ್ರಾಮಗಳು "ಪ್ರಜೆಗಳನ್ನು ರಕ್ಷಿಸೋರೆ ಪ್ರಜೆಗಳನ್ನು ಭಕ್ಷಿಸೋರು", ಎಲ್ಲೆಲ್ಲಿಯೂ ಸಾವಿನ ನೆರಳು, ಸಾವಿನದೇ ದಬಾರು, ರಾಜಮಂತ್ರಿ ಸೈನಿಕ ಎಲ್ಲರೂ ಸಾವಿನ ಧೂತರಾಗಿ,

ನೇಗಿಲಯೋಗಿಯ ನೋವು ಸಂಕಟವನ್ನು ಬಿಚ್ಚಿಡುತ್ತಾ ಸಮಂಜಸನೀಯವಾಗಿ ಪಾತ್ರಗಳನ್ನು ಹೆಣದಿದ್ದಾರೆ.

ಹಾಗೆಯೇ ಅಂತೆಂಬರ ಗಂಡ ಮೈಸೂರು ಚರಿತ್ರೆಯನ್ನಾಧರಿಸಿ ರಚಿಸಿದ ಇನೇ ನಾಟಕ ಮೈಸೂರು ಚರಿತ್ರೆಯನ್ನು ಹೀಗೆ ವಸ್ತುನಿಷ್ಠವಾಗಿ ಚಿತ್ರಿಸಿದ್ದು ಇತಿಹಾಸದ ವೈಭವೀಕರಣಕ್ಕೆ ಹೋಗದೆ ಇದ್ದದ್ದನ್ನು ಇದ್ದಹಾಗೆ ನಿಷ್ಠುರವಾಗಿ ರಾಜಪ್ರಭುತ್ವದ ನಿಜ ಸ್ವರೂಪವನ್ನು ಓದುಗರಿಗೆ ಸಮಾಜಕ್ಕೆ ಉಣಬಡಿಸಿದ್ದು ಗಮನಾರ್ಹವಾಗಿದೆ.

ಇನ್ನೂ 'ಶಾಪ' ನಾಟಕದಲ್ಲಿ ಮೈಸೂರು ರಾಜಮನೆತನದ ಅಂತರಂಗ ಹೊಕ್ಕು ಅಂದಿನ ರಾಜರಾಣಿಯ ಆಳ್ವಿಕೆ, ದೊರೆಯ ಅನಾರೋಗ್ಯದ ಕಾರಣ ರಾಣಿ ಸಮರ್ಥವಾಗಿ ರಾಜನಸ್ಥಾನ ತುಂಬಲು ಹೋಗುವುದು -ದೊರೆಯ ಅನಾರೋಗ್ಯವನ್ನೇ ಆಧಾರವಾಗಿಟ್ಟುಕೊಂಡು ರಾಜರು, ಶತ್ರುಗಳು ರಾಜ್ಯದಲ್ಲಿ ದಂಗೆ, ಯುದ್ಧಗಳು, ಒಳಸಂಚುಗಳು ಒಂದೇ ಎರಡೇ, ತುಂಬಿದ ಬಸುರಿಯ ಆಸೆ ಕನಸು ನುಚ್ಚುನೂರಾಗುವುದು. ಆಗ ಒಂದೆಡೆ ಮುತ್ತೈದೆತನ ಕೈಜಾರುವುದು, ಮತ್ತೊಂದು ಒಡಲೊಳಗಿನ ಕಂದನು ಮರೀಚಿಕೆಯಾಗಿ ಒಂದು ಹೆಣ್ಣಿನ ಆಕ್ರೋಶ, ಸಂಕಟ, ನೋವು, ನಿರಾಸೆಗಳಿಂದ ನಾಟಕ ತುಂಬಿದೆ.

'ಮನದಾಳದ ಬೇಗೆಯನ್ನು ಮಾತಿನರೂಪದಲ್ಲಿ ಹೊರಹಾಕುವುದು. ಆ ಮಾತಿನ ಸತ್ಯ–ಸತ್ವಗಳ ನೆಲೆಯಲ್ಲಿ ಮಾತೆಲ್ಲ ಶಾಪವಾಗಿ ಅಂದಿನಿಂದ ಇಂದಿನವರೆಗೂ ಬೆಂಬಿಡದೇ ಕಾಡಿದ್ದು ಕಾಡುತ್ತಿರುವುದು. ವಾಸ್ತವದಿ ಎಲ್ಲರಿಗೂ ಅರಿವಿಗೆ ಬಂದಿದೆ. ಅಂದರೆ ಹೆಣ್ಣಿನ ಬಗ್ಗೆ ಇರುವ ಗೌರವ, ಗೌಪ್ಯತೆ, ಸಂಸ್ಕಾರ. ಕುಟುಂಬದ ವ್ಯಾಮೋಹಕ್ಕೆ ರಾಣಿಯು ಬಂಧಿಯೇ ಪ್ರತಿ ಗೃಹಿಣಿ ತನ್ನ ಕುಟುಂಬದತ್ತ ಇಟ್ಟ ಒಲವು, ನಂಬಿಕೆ, ವಿಶ್ವಾಸಗಳು ಕೈಚಲ್ಲಿದಾಗ ರೌದ್ರರೂಪತಾಳುವುದು. ಕಾಳಿಯಾಗಿ ಕಾಡುವುದು ದಂಡಿಸುವುದು ಮಮಕಾರದ ಮಾತೆಯ ಮನಸ್ಸನ್ನು ನೊಂದಾಗ ನುಡಿದ ನುಡಿಗಳೆಲ್ಲ ಶಾಪವಾಗಿ ರಾಜನ ಮನೆತನಕ್ಕೆ ಕಾಡುವುದನ್ನು ಮನೋಜ್ಞವಾಗಿ ಚಿತ್ರಿಸಿರುತ್ತಾರೆ.

ಒಟ್ಟಾರೆ ಮೈಸೂರು ಇತಿಹಾಸದಲ್ಲಿ ಒಂದು ಪ್ರಸಂಗ ಅದು ಇಮ್ಮಡಿ ಕೃಷ್ಣರಾಜ ಒಡೆಯರ ಆಡಳಿತ ಆತ ದುರ್ಬಲ ದೊರೆ, ಆತ ಸದಾ ಅಮೋದ ಪ್ರಮೋದಗಳಲ್ಲಿ ನಿರತನಾಗಿ ಅಧಿಕಾರ ಕಳಲೆಯ ದಿವಾನರ ಕೈಯಲ್ಲಿಟ್ಟಿ ನಂಜರಾಜಯ್ಯ ಅಂದಿನ ದಳವಾಯಿ ಈ ಶಿಥಿಲ ಆಡಳಿತದಿಂದ ರಾಜ್ಯದ ಆರ್ಥಿಕ ಸ್ಥಿತಿ ಚಿಂತಾಜನಕವಾಗುವುದು

ದುರ್ಬಲತೆ ಕೈಬೀಸಿ ಶತ್ರುಗಳಿಗೆ ಮಣೆ ಹಾಕಿದಂಗೆ ಮರಾಠಿಗರ ಆಕ್ರಮಣ ಕಂಗೆಟ್ಟ ನಂಜರಾಜಯ್ಯ, ಹಣತೆತ್ತು (ಕಪ್ಪ) ರಾಜಿಮಾಡಿಕೊಳ್ಳುತ್ತಾನೆ. ಕೂತುಂಡರೆ ಕುಡಿಕೆ ಹೊನ್ನು ಸಾಲದು ಬೊಕ್ಕಸ ಪೂರಾ ಬರಿದಾಗಿರುತ್ತದೆ ಎಂಬಂತೆ ರಾಜ್ಯದ ಪ್ರಭುತ್ವದಲ್ಲಿ ದರಿದ್ರಲಕ್ಷ್ಮಿ ತಾಂಡವಾಡಿದರೆ ಸರ್ಕಾರ ನಡೆಸುವುದಾದರೂ ಹೇಗೆ? ಅಧಿಕಾರ ನಡೆಸಲು ಶ್ರೀಮಂತ ವರ್ತಕರಿಂದ ಸಾಲಪಡೆಯಬೇಕು, ಕೊಡುವರ್‍ಯಾರು? ಕೊಟ್ಟರೆ ತಿರುಗಿ ಬಂದೀತೆ? ಅಂದಿನ ಪ್ರಭುತ್ವ ಸೈನಿಕರಿಗೂ ಸಂಬಳ ಕೊಡಲಾರದಷ್ಟು ಹೀನಾಯಸ್ಥಿತಿ ತಲೆದೋರುವುದು. ಸೈನಿಕರೂ ಮನುಷ್ಯರಲ್ಲವೇ ಅನ್ನ ಆಹಾರವಿಲ್ಲದ ಅವರ ಸಂಸಾರದ ಪಾಡೇನು? ರಕ್ಷಣೆ ನೀಡಬೇಕಾದ ರಾಜ ಇತ್ತ ಗಮನನೀಡದೆ ತನ್ನದೇ ಆದ ಸುಖ ಸಂತೋಷಕ್ಕೆ ಪ್ರಥಮ ಆದ್ಯತೆ ನಿಡಿ ರಾಣಿಯರ ವಾಸದಲ್ಲಿ ಐಷಾರಾಮಿ ಜೀವನ ಸಾಗಿಸುತ್ತಿದ್ದರೆ ದೇಶ ಕಾಯ್ವ ಸೈನಿಕ ಸಿಡಿದೇಳದೆ ಇರುವನೇ? ಧರಣಿ, ಶಸ್ತ್ರಾಸ್ತ್ರ ನಿರಾಕರಣೆ ಸರ್ವೇಸಾಮಾನ್ಯವಾಗೇ ಆಗುತ್ತದೆ.

ರಾಜ, ದಳವಾಯಿಗಳ ಮನೆಗೆ ಆಹಾರ ಸರಬರಾಜಾಗಬಾರದು. ಆಗ ಅವರಿಗೆ ನಮ್ಮ ಸಂಕಟ, ಸಂಕಷ್ಟದ ಅರಿವಾಗುವುದೆಂದೂ ಸೈನಿಕರು ಸೌಲಭ್ಯಗಳನ್ನೂ ತಡೆಯುತ್ತಾರೆ. ರಾಜ, ರಾಜಪರಿವಾರ ದಾರಿಕಾಣದಾದಾಗ ಹೊಳೆಯುವ ಅಂಶವೆಂದರೆ "ರಾಜ್ಯವನ್ನು ಅಡ ಇಡುವುದು" ಇದು ಒಂದು ರೀತಿ ಚಿಕ್ಕದೇವಭೂಪ ಹಾಗೂ ಹೈದರ್ ನಾಟಕದಲ್ಲೂ ಸಾಮೀಪ್ಯ ಕಂಡುಬರುತ್ತದೆ.

ಇದಕ್ಕೆಂದೇ ಕಾಯುವ ಚಾಣಾಕ್ಷರೂ ಕಾರ್ಯಸಾಧನೆ ತಂತ್ರಕ್ಕೆ ಮುಂದಾಗುತ್ತಾರೆ. ಇಲ್ಲೂ ಅಷ್ಟೇ, ಹೈದರ್ ನಾಟಕದಲ್ಲೂ ಸಾಮಾನ್ಯ ಅನಕ್ಷರಸ್ಥ ಸೈನಿಕನೊಬ್ಬ ಶ್ರದ್ಧೆ ಸಾಹಸ, ಕುಶಾಗ್ರಮತಿ ಇಂತಹ ಕೆಟ್ಟಕಾಲದಲ್ಲಿ ಬಂದಿರುವ ಪರಿಸ್ಥಿತಿ ನಿಭಾಯಿಸಲು ಮುಂದೆ ಬರುತ್ತಾನೆ.

ಇಡೀ ರಾಜ್ಯವನ್ನು ಈತನ ಸುಪರ್ದಿಗೆ ವಹಿಸಬೇಕೆಂಬ ಷರತ್ತಿನೊಂದಿಗೆ ನಂಜರಾಜಯ್ಯನಿಂದ ಮುಚ್ಚಳಿಕೆ ಬರೆಯಿಸಿ ಈತ ಪೌಜುದಾರನಾಗಿ ಕೊನೆಗೆ ನವಾಬನೂ ಆಗಿ, ಬ್ರಿಟೀಷರ ಕುತಂತ್ರಗಳಿಗೆ ಮಣಿಯದೇ ಪ್ರತಿತಂತ್ರ ಹೆಣೆಯುತ್ತಾ ಮೈಸೂರು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಲ್ಪಡುತ್ತಾನೆ. ಹಾಗೆ ತನ್ನದೇ ಬಿಂಬವೆಂಬಂತೆ" ಮೈಸೂರು ಹುಲಿ ಟಿಪ್ಪುವನ್ನು (ಟಿಪ್ಪು – ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡಿದ ಟಿಪ್ಪು ಪ್ರತಿಭೆ ಎಂಬುದು ಹುಟ್ಟಿನಿಂದಲೇ ಬಂದ ಆಸ್ತಿ. ಪರಿವರ್ತನೆಯ

ಪ್ರಮುಖ ರುವಾರಿ ಅನೂಹ್ಯ ವ್ಯಕ್ತಿತ್ವ ಪ್ರತಿಭೆ) ರಾಜ್ಯಕ್ಕೆ ಬಳುವಳಿಯಾಗಿ ನೀಡುತ್ತಾನೆ. ಅಂದಿನಿಂದ ಈವರೆಗೂ ಜಡತ್ವು ಮೈವೆತ್ತಿರುವಂಥ "ರಂಗಭೂಮಿ" ಎನ್ನುವುದು ನಮ್ಮ ದೇಶದ ಪ್ರಾಚೀನ ಸಾಮಸ್ಕ್ರತಿಕ ಮಾಧ್ಯಮ ರಾಜಪ್ರಭುತ್ವದ ಜಟಿಲ ಸಮಸ್ಯೆಗಳನ್ನು ಅತ್ಯಂತ ಸರಳವಾಗಿ ಅಷ್ಟೇ ಪರಿಣಾಮಕಾರಿಯಾಗಿ ರಂಗಮಾಧ್ಯಮದ ಮೂಲಕ ಅಭಿವ್ಯಕ್ತಿಗೊಳಿಸಿ ಪರಿಣಾಮಕಾರಿ ಪ್ರದರ್ಶನ ಚಕಿತಗೊಳಿಸಿ ಇಡೀ ಪ್ರಜೆಗಳು ರಾಜಪ್ರಭುತ್ವದ ಬಗ್ಗೆ ತಲ್ಲಣಗೊಳ್ಳುವಂತೆ ನೋಡಿಕೊಂಡಿದ್ದು ನಾಟಕದ ಬಹುದೊಡ್ಡ ಯಶಸ್ಸು.

ಸೃಜನಶೀಲತೆ ಆಗಾಧವಾದ ಪರಿಶ್ರಮ ಒಬ್ಬ ವ್ಯಕ್ತಿ ತನ್ನ ಜೀವಿತಕಾಲದಲ್ಲಿ ಎಷ್ಟೊಂದು ಭಾಷೆಗಳಲ್ಲಿ ಸಾಹಿತ್ಯ ಅಧ್ಯಯನ ಮಾಡಿ ಆಗಾಧವಾದ ಜ್ಞಾನ ಸಂಪಾದಿಸಿದ್ದು ಬರೆದುದ್ದು ಗಟ್ಟಿಯಾಗಿ ನಿಲ್ಲಬೇಕು. ಯುಗಧರ್ಮ ಹಾಗೂ ಸಾಹಿತ್ಯದರ್ಶನ, ವಿಮರ್ಶೆಯನ್ನು – ರಾಜಸ್ಪರ್ಶವನ್ನು ಸಮರ್ಥ ನಾಟಕಕಾರರಾಗಿ ವಿಶೇಷ ಅಸ್ಥೆಯಿಂದ ಹೆಚ್ಚು ತಾತ್ವಿಕ ಪರಿಕಲ್ಪನೆ ಅವರ ಯಶಸ್ಸಿನ ಗುಟ್ಟಾಗಿ ಅವರ ಅಭಿನಯ ಚತುರತೆ ಅಸಾಧಾರಣವಾದುದು. ದೇಸೀ ಬಹುರೂಪತೆಯನ್ನೂ, ಆಧುನಿಕ ಜ್ಞಾನವನ್ನೂ ಸಮನ್ವಯಗೊಳಿಸಿ ಒಂದು ಹೊಸ ಸಂವಹನ ಹಲವು ಚಿಂತನೆಗಳ ಪ್ರಾತಿನಿಧಿಕ ಸಂಕಲನಗಳ ಪ್ರಧರ್ಶನವೇ ಲಿಂಗದೇವರುರವರ ಈ ನಾಟಕಗಳ ಗುಚ್ಛ.

ಸಮಕಾಲೀನ ಕನ್ನಡದ ಚಿಂತಕರ ನಡುವೆ ಲಿಂಗದೇವರು ಹಳೆಮನೆಯವರದು ಗುರುತರವಾದ ಹೆಸರು. ನಾಟಕಕಾರರಾಗಿ, ಭಾಷಾತಜ್ಞರಾಗಿ, ಸಾಂಸ್ಕೃತಿಕ ಚಿಂತಕರಾಗಿ ಎಲ್ಲಾ ವಲಯಗಳಲ್ಲು ತಮ್ಮದೇ ವಿಶಿಷ್ಟ ಗುರುತು ಮೂಡಿಸಿರುವ ಹಳೇಮನೆಯವರದು ಸದಾ ಕಟು ವೈಚಾರಿಕತೆಯ ಗುಣಸ್ವಭಾವ.

ಕನ್ನಡ ನಾಟಕ ಕ್ಷೇತ್ರಕ್ಕೆ ತಮ್ಮದೇ ಸೃಜನಶೀಲ ಕೃತಿಗಳ ಮೂಲಕ ಅನನ್ಯ ಕೊಡುಗೆ ನೀಡಿರುವ ಹಳೇಮನೆಯವರು ರಂಗಭೂಮಿ ಮತ್ತು ಅದರ ತಾತ್ತ್ವಿಕತೆಯ ಕುರಿತು ಮಾಡಿರುವ ವಿಶ್ಲೇಷಣೆಗಳು ರಂಗಭೂಮಿಗೊಂದು ಒಳನೋಟವನ್ನೇ ನೀಡಿವೆಯೆಂದರೆ ಅತಿಶಯೋಕ್ತಿಯಾಗಲಾರದು. ಅವೆಲ್ಲಕ್ಕಿಂತ ಮಿಗಿಲಾಗಿ ಹಳೆಮನೆಯವರು ಸಮಾಜದ ಆಗುಹೋಗುಗಳ ಬಗ್ಗೆ ಮಾಡಿರುವ ವ್ಯಾಖ್ಯಾನ, ವಿಮರ್ಶೆಗಳು ಸಮಾಜವನ್ನು ಒಂದೇ ಕಣ್ಣಿನಿಂದ ನೋಡುಗರಿಗೆ ಮತ್ತೊಂದು ಕಣ್ಣನ್ನು ತೆರೆಸುವಂತಿದೆ.

ಸ್ಥಳೀಯ ಜಾಗತಿಕ ವಿದ್ಯಮಾನಗಳ ಕುರಿತು ಅವರು ಮಾಡಿರುವ ಭಾಷಣಗಳು, ಬರೆದಿರುವ ಲೇಖನಗಳು ಆರೋಗ್ಯಕರ ಸಮಾಜವೊಂದಕ್ಕೆ ದೀವಿಗೆಯಂತಿವೆ. ವಿದ್ವತ್ತುಗಳ ಜನಪರತೆ ಎರಡೂ ನಮ್ಮ ನಡುವಿನ ಚಿಂತಕರಲ್ಲಿ ವಿರಳವೆನಿಸುತ್ತದೆ.

ನಾಲ್ವಡಿ ಅವರ ಕಾಲಘಟ್ಟದಲ್ಲಿ ಮೈಸೂರು ಸ್ವಾತಂತ್ರ್ಯ ರಾಜ್ಯವಲ್ಲದಿದ್ದರೂ ಸಾಮಾಜಿಕ ನ್ಯಾಯಕ್ಕೆ ಬದ್ದರಾಗಿ ಅನೇಕ ಜನಪರವಾದ ಕಾರ್ಯಗಳನ್ನು ಯೋಜನೆಗಳನ್ನು ಮಾಡಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಉತ್ತಮ ಆಡಳಿತ ವೈಖರಿಯನ್ನು ಮೆಚ್ಚಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರನ್ನು “ರಾಜಶ್ರೀ” ಎಂದು ಕರೆದಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಅಂದು ಅವರು ಕೈಗೊಂಡ ಜನಪರ ಯೋಜನೆಗಳು ಇಂದು ಸಹ ಪ್ರಸ್ತುತವಾಗಿದೆ. ಉದಾ: ಮಹಿಳೆಯರಿಗೆ ಪ್ರಥಮವಾಗಿ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯನ್ನು ಒದಗಿಸಿದ್ದು ಮೈಸೂರು ಸಂಸ್ಥಾನ. ಇದರಲ್ಲಿ ನಾಲ್ವಡಿ ಪಾತ್ರ ಪ್ರಮುಖವಾಗಿತ್ತು.

ಮಹಿಳೆಯರಿಗೆ ಶಿಕ್ಷಣ ನೀಡಿದರೆ ಸಾಮಾಜಿಕ ಸುಧಾರಣೆಯನ್ನು ಶೀಘ್ರವಾಗಿ ಸಾಧಿಸಬಹುದು ಎಂದು ಅರಿತು ಅದರಂತೆ ಮಹಿಳೆಯರಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆ ತೆರೆದು ಜಾತಿವ್ಯವಸ್ಥೆಯನ್ನು ಸಡಿಲಗೊಳಿಸಲು ಕೈಗಾರಿಕೆಗಳನ್ನು ತೆರೆದು ಎಲ್ಲಾ ವರ್ಗದವರಿಗೂ ಉದ್ಯೋಗ ನೀಡಿ ಜಾತಿವ್ಯವಸ್ಥೆಯನ್ನು ಸಡಿಲಗೊಳಿಸಿದ ಹೆಮ್ಮೆ ಇವರಿಗೆ ಸಲ್ಲುತ್ತದೆ.

ಈ ನಾಲ್ಕು ನಾಟಕಗಳು ಮೈಸೂರು ಒಡೆಯರ ಆಳ್ವಿಕೆಯ ಐತಿಹಾಸಿಕ ಘಟನೆಗಳ ರಂಗಭೂಮಿಯ ಮಧ್ಯೆ ಸಮನ್ವಯವನ್ನು ಸಾಧಿಸುವಲ್ಲಿ ಬೇಕಾದ ಎಲ್ಲಾ ಪ್ರಯತ್ನಗಳನ್ನು ಮಾಡಿವೆ. ಈ ನಾಟಕಗಳ ಮಧ್ಯೆ ಸಮಾನವಾದ ಕೆಲವು ಅಂಶಗಳಿವೆ. ಸೂತ್ರಧಾರ, ಸೈನಿಕ (ಯುವ) ವಯಸ್ಸಾದ ಸೈನಿಕರ ನಡುವಿನ ಸಂಭಾಷನೆ ಹೈದರ್ ನಾಟಕದಲ್ಲಿ ಕಂಡರೆ ಚಿಕ್ಕದೇವಭೂಪದಲ್ಲಿ ಸೈನಿಕ ಹಾಗೂ ರೈತರು ಇವರ ಸಂಭಾಷಣೆ ಹಾಗೆ ಸ್ಥಳೀಯ ಜನರ ಭದ್ರತೆ, ರಕ್ಷಣೆ ಇಲ್ಲದೆ ವಲಸೆ ಹೋಗುವುದು ಸಮಾನ ಅಂಶಗಳು. ಸಂಭಾಷಣೆ ಸತ್ವದ ದೃಷ್ಟಿಯಿಂದ ಈ ಒಂದೊಂದು ನಾಟಕವೂ ಭಿನ್ನವಾಗಿ ನಿಲ್ಲುತ್ತವೆ. ಭಾಷೆಯ ದೃಷ್ಟಿಯಿಂದಲೂ ಸ್ಥಳೀಯ ಸೊಗಡು ಇರುವ ಉಪಭಾಷೆಗಳನ್ನು ಬಳಸಿಕೊಳ್ಳುವುದರ ಜೊತೆಗೆ ವೃತ್ತಿಭಾಷೆಯನ್ನು ಯಥೇಚ್ಛವಾಗಿ ಬಳಸಿಕೊಂಡಿದೆ. ಈ ನಾಲ್ಕು ನಾಟಕಗಳಲ್ಲಿ ಬರುವ ಪಾತ್ರಗಳನ್ನು ಪ್ರಧಾನವಾಗಿ ೨ ಗುಂಪುಗಳಾಗಿ ವಿಂಗಡಿಸಬಹುದು. ಬಲಾಢ್ಯರಾದ ಸಮಾಜದಲ್ಲಿ ಪಟ್ಟಭದ್ರ ಪ್ರತಿಷ್ಠಿತ

ವರ್ಗದ ಜನ ಒಂದೆಡೆ ಇದ್ದರೆ ಇನ್ನೊಂದು ಕಡೆ ಒಂದೊತ್ತು ಊಟಕ್ಕೂ ಇಲ್ಲದೆ ಬಿಡಿಗಾಸಿಗೂ ಗತಿಯಿಲ್ಲದ ಕೆಳವರ್ಗದ ಸಾಮಾನ್ಯ ಜನ ಸಹ ಇದ್ದಾರೆ. ರಾಜರ ಆಡಳಿತದ ವಿರುದ್ಧ ಪ್ರೇಕ್ಷಕರ ಅನುಕಂಪ ದುರ್ಬಲರ ಪರವಾಗಿ ನಿಲ್ಲುವಂತೆ ಈ ಎರಡು ನಾಟಕಗಳಲ್ಲಿ ಕಂಡುಬಂದರೆ ಶಾಪ ನಾಟಕದಲ್ಲೂ ಒಂದು ಹೆಣ್ಣಿನ ನೋವು, ಆಸೆ, ಆಕಾಂಕ್ಷೆ, ಬಯಕೆ, ತುಂಬ ಗರ್ಭಿಣಿಯ ರೋಧನ ಶಾಪ ಪ್ರೇಕ್ಷಕರ ಅನುಕಂಪ, ಹಾಗೇ ರಾಜಪ್ರಭುತ್ವದ ಈ ವಿಷಯ ವಿಚಾರಗಳಿಂದ ನೊಂದ ಸಮಾಜವು ಸಹ ಅವರ ಬಗ್ಗೆ ಗೌರವ ಕಳೆದು "ರಾಜ ಪ್ರತ್ಯಕ್ಷದೇವತಾ" ಎಂಬ ಭಾವದಿಂದ ದೂರಸರಿಯುತ್ತಾರೆ. ಚಿಕ್ಕದೇವಭೂಪರಾಜನ ಬೋಗಲಾಲಸೆ, ಅಧಿಕಾರದಾಹವು ಹೈದರ್ ನಾಟಕದ ಕೃಷ್ಣರಾಜ ಒಡೆಯರು ರಾಣಿವಾಸ ಅಲ್ಲಿನ ಸುಖ ಸಂತೋಷಕ್ಕೆ ಒಳಗಾಗಿ ಕಳಲೆಯ "ನಂಜರಾಜ"ನಿಗೆ ಇಡೀ ಸರ್ವಾಧಿಕಾರವನ್ನು ನೀಡಿ ಆತನ ಕೈಬೊಂಬೆಯಾಗಿ ಮಾಡಿಕೊಂಡದ್ದು ಮದಿರೆ, ಮೋಹಿನಿಯರನ್ನು ಆಸೆಪಟ್ಟು ಉತ್ಸವಮೂರ್ತಿಯನ್ನಾಗಿ ಮಾಡಿದ್ದು ಈ ಸಮಾನ ಅಂಶಗಳು ಈ ನಾಟಕಗಳಲ್ಲಿ ಕಂಡುಬರುತ್ತವೆ.

ಚಿಕ್ಕದೇವಭೂಪನಲ್ಲಿ ವಿಶಾಲಾಕ್ಷ ಪಂಡಿತನ ಚಾಣಾಕ್ಷತನ ವಂಚನೆ, ಮೋಸ, ನಂಬಿಕೆದ್ರೋಹ ಒಂದೆಡೆಯಾದರೆ ಹೈದರನಲ್ಲೂ ಅದೇ ಗುಣಗಳು ಪ್ರತಿಧ್ವನಿಸುತ್ತವೆ. ಲಾವಣಿಕರರ ಸೂತ್ರಧಾರರ ಸಂಭಾಷಣೆ ಮೂಲಕ ರಂಗಭೂಮಿಯನ್ನು ಮೈಸೂರು ಸಂಸ್ಥಾನದ ಅರಮನೆ ರಾಜತ್ವವನ್ನು ಸಮನ್ವಯಿಸಿ ಅದರ ಬಲಾಬಲವನ್ನು ದುಡಿಸಿಕೊಳ್ಳುವುದು ಹಾಗೂ ಈ ದೇಶದ ರೈತ, ಸೈನಿಕರನ್ನು ಕೇವಲವಾಗಿ ನೋಡುವುದು, ಆ ಗೌರವ ತೋರುವುದು ಸಮಸ್ಯೆಗಳನ್ನು ತಾರಕಕ್ಕೆ ಏರಿಸಿ ಕಡೆಗೆ ಪ್ರೇಕ್ಷಕರ ಅನುಕಂಪ ದುರ್ಬಲವರ್ಗದವರ ಪರವಾಗಿ ನಿಲ್ಲುವಂತೆ ಮಾಡುತ್ತದೆ. ನಗರ ಮತ್ತು ಅರಮನೆ ರಾಜತ್ವದ ಹಿನ್ನೆಲೆಯ ನಾಟಕ ಬರೀ ಜಾನಪದವನ್ನಷ್ಟೇ ಅಲ್ಲದೇ ರಂಗಭೂಮಿಯ ಭಾಷೆಯ ಜೊತೆಗೆ ರಾಜನ ರಾಜತ್ವದ ದರ್ಬಾರಿನ ಮಾತುಗಳನ್ನು ಅಳವಡಿಸಿಕೊಂಡಿದೆ. ಪತ್ರಗಳನ್ನು ಶಿಷ್ಟ, ದುಷ್ಟ ಎಂದೂ ವರ್ಗೀಕರಿಸುವುದಕ್ಕೂ ಈಗಿನ ಆಧುನಿಕ ನಾಟಕಕಾರರನ್ನು ವರ್ಗೀಕರಿಸುವುದಕ್ಕೂ ವ್ಯತ್ಯಾಸ ಇದೆ. ಒಟ್ಟಾರೆ ಲಿಂಗದೇವರು ಹಳೆಮನೆಯವರ ನಾಟಕಗಳು ರಂಗಭೂಮಿ, ನಾಟಕ ಕ್ಷೇತ್ರಕ್ಕೆ ಸಂದ ಅಮೂಲ್ಯ ಕೊಡುಗೆಗಳೆನ್ನಬಹುದು. ರಾಜಸಂಸ್ಥಾನಗಳು ನೆಮ್ಮದಿಯ ತಾಣಗಳಲ್ಲ. ಸದಾ ಮುಳ್ಳಿನ ಹಾಸಿಗೆಯ ಮೇಲೆ ಬದುಕು ಸಾಗಿಸುತ್ತಿರುವ ರಾಜವಂಶಸ್ಥರುಗಳ ವಿವರ ಅತ್ಯಂತ ಮಾರ್ಮಿಕವಾಗಿ ಚಿತ್ರಣಗೊಂಡಿದೆ ಎಂದು ಒಟ್ಟಾರೆ ಹೇಳಬಹುದು.

ಪರಾಮರ್ಶನ ಗ್ರಂಥಗಳು

೧. ಮೈಸೂರು ಸಂಸ್ಥಾನದ ನಾಲ್ಕು ನಾಟಕಗಳು – ಲಿಂಗದೇವರು ಹಳೇಮನೆ

೨. ಹಳೇಮನೆಯವರ ಕಿರು ನಾಟಕಗಳು – ಲಿಂಗದೇವರು ಹಳೇಮನೆ

೩. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್. ಶೇಷಗಿರಿರಾವ್, ದ್ವಿತೀಯ ಆವೃತ್ತಿ, ೨೦೦೨, ಪ್ರ: ಅಂಕಿತ ಪುಸ್ತಕ, ಬೆಂಗಳೂರು.

೪. ಆಧುನಿಕ ಕನ್ನಡ ನಾಟಕ – ಡಾ. ಕೆ. ಮರುಳಸಿದ್ದಪ್ಪ, ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೮.

೫. ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ – ಸೂರಿ ವೆಂಕಟರಮಣಶಾಸ್ತ್ರೀ, ೧೯೮೭.

೬. ನಾಟಕಕಲೆ –ಆತ್ಮರಾಮಶಾಸ್ತ್ರೀ, ೧೯೨೪.

೭. ಜ್ಞಾನಗಂಗೋತ್ರಿ, ೧೯೭೩.

೮. ಕನ್ನಡ ನಾಟಕದ ಹಳಮ – ಎಂ.ಗೋವಿಂದ ಪೈ.

೯. ಶಾಕುಂತಲ – ಬಸವಪ್ಪಶಾಸ್ತ್ರೀ.

೧೦. ವಿಜಯನಗರ ಸಾಮ್ರಾಜ್ಯ – ವೀರಭದ್ರಪ್ಪ, ೧೯೦೮.

*****